ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 18 ಶುಕ್ರವಾರ 2025

₹4

46

ಸಂಪುಟ: 46 | ಸಂಚಿಕೆ: 3 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 18 ಶುಕ್ರವಾರ 2025

ಸಂಪುಟ: 46 | ಸಂಚಿಕೆ: 3 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಸಾಲು ಮರಗಳ ನಿರ್ದಯ ಹನನ

- ಅರಣ್ಯ ಇಲಾಖೆ ಹೊಸದಾಗಿ ಸಸಿಗಳನ್ನು ನೆಟ್ಟು ಪೋಷಿಸಲಿ
- ಮೈಸೂರು ಮಹಾ ನಗರಪಾಲಿಕೆ ರಸ್ತೆ ಅಗಲೀಕರಣ ಕೈಬಿಡಲಿ



ಮೈಸೂರಿಗರಿಗೆ ಅದೊಂದು ಕರಾಳ ಭಾನುವಾರ. 2025ರ ಏಪ್ರಿಲ್ 13ರ ಭಾನುವಾರ ಇಡೀ ರಾತ್ರಿ ಮೈಸೂರು ನಗರಪಾಲಿಕೆ ಮತ್ತು ಅರಣ್ಯ ಇಲಾಖೆ ಜಂಟಿ ಕಾರ್ಯಾಚರಣೆ ನಡೆಸಿ ಸಮೃದ್ಧವಾಗಿ ಬೆಳೆದಿದ್ದ, ಹಸಿರಿನಿಂದ ನಳನಳಿಸುತ್ತಿದ್ದ 45 ಮರಗಳನ್ನು ನಿರ್ದಯವಾಗಿ ಕಡಿದುರುಳಿಸಲಾಯಿತು.

ಈ ಕೃತ್ಯವನ್ನು 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' 'ಹಸಿರು ಹತ್ಯಾಕಾಂಡ' (Green carnage) ಎಂದು ಅತೀ ಉಗ್ರವಾಗಿ ಖಂಡಿಸಿದವು. ಈ ಅವಿವೇಕ, ಅಸಮರ್ಥನೀಯ ಮತ್ತು ಕ್ಷಮಿಸಲಾಗದ ಕ್ರಮವನ್ನು ಪ್ರಶ್ನಿಸಿದವರಿಗೆ ಪಾಲಿಕೆ ಹಾಗೂ ಅರಣ್ಯ ಇಲಾಖೆ ಕೊಟ್ಟಂತಹ ಯಾವುದೇ ಉತ್ತರ ಮೈಸೂರಿಗರಿಗೆ ಸ್ವೀಕಾರಾರ್ಹವಲ್ಲ.

ಕರ್ನಾಟಕ ಪೊಲೀಸ್ ಅಕಾಡೆಮಿಯ ಕಾಂಪೌಂಡ್ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ(ಎಸ್ಪಿ ಕಚೇರಿ)ಗಳ ಕಚೇರಿಯ ಕಾಂಪೌಂಡ್ ಮಧ್ಯೆ ಹಾದು ಹೋಗಿರುವ ಹೈದರ್ ಅಲಿ ರಸ್ತೆಯನ್ನು ಪಾಲಿಕೆ ಅಗಲೀಕರಣಗೊಳಿಸಲು ಮುಂದಾಗಿದ್ದು, ಅದಕ್ಕಾಗಿ ಮರಗಳ ಮಾರಣಹೋಮ ನಡೆದು ಹೋಗಿದೆ. ಅಷ್ಟಕ್ಕೂ ಈ ಮಾರ್ಗವು ವಾಣಿಜ್ಯ ರಸ್ತೆಯಂತೂ ಅಲ್ಲ ಹಾಗೂ ಸ್ವಾಭಾವಿಕವಾಗಿ ಎಲ್ಲಾ ಸಮಯದಲ್ಲೂ ಅಂತಹ ಹೇಳಿಕೊಳ್ಳುವಂತಹ ವಾಹನ ದಟ್ಟಣೆಯೂ ಇಲ್ಲಿರುವುದಿಲ್ಲ.

ಹೀಗಿರುವಾಗ, ಮಿಲಿಟರಿ ಸರ್ಜಿಕಲ್ ಸ್ಟ್ರೈಕ್‌ನಂತೆ ರಾತ್ರಿಯಿಡೀ ನಡೆದ ಈ ಕಠೋರ ಕಾರ್ಯಾಚರಣೆ ನಿರ್ದಯ ಕೃತ್ಯ ಎನ್ನದೇ ವಿಧಿಯಿಲ್ಲ. ಈಗ ಘಟನೆಯಂತೂ ನಡೆದು ಹೋಗಿದ್ದು, ಕಡಿದ ಮರಗಳನ್ನು ಮತ್ತೆ ಅಲ್ಲಿ ನೋಡಲು ಸಾಧ್ಯವಿಲ್ಲ.

ಆದರೆ, ಈ ದುಷ್ಕೃತ್ಯದ ಹಿಂದಿರುವ ದುಷ್ಕರ್ಮಿಗಳ ದುರುದ್ದೇಶ ಈಡೇರಲು ಅವಕಾಶ ನೀಡಬಾರದು. ಆದ್ದರಿಂದ ಮೈಸೂರಿಗರು, ಈ ರಸ್ತೆಯ ಅಗಲೀಕರಣ ಮಾಡುವ ಪಾಲಿಕೆಯ ಉದ್ದೇಶಿತ ಯೋಜನೆ ಮುಂದುವರೆಯಲು ಅವಕಾಶ ನೀಡಬಾರದು. ಜೊತೆಗೆ ಅರಣ್ಯ ಇಲಾಖೆಯು ಈ ಪ್ರಕರಣದಲ್ಲಿ ತನ್ನ ಪಾಪಗಳಿಗೆ ಪ್ರಾಯಶ್ಚಿತ್ತ ಮಾಡಿಕೊಳ್ಳಲು ರಸ್ತೆಯ ಎರಡೂ ಬದಿಗಳಲ್ಲಿ ಸಸಿಗಳನ್ನು ನೆಟ್ಟು ನೀರೆರೆದು ಅವುಗಳನ್ನು ಬೆಳೆಸಲು ಮುಂದಾಗುವುದು ಅತೀ ಅವಶ್ಯ.

ಏಪ್ರಿಲ್ 18ರ ಶುಕ್ರವಾರದಂದು ಮೌನವಾಗಿ ಮೇಣದ ಬತ್ತಿ ಬೆಳಗಿ, ಪ್ರತಿಭಟನೆ ಮೂಲಕ ಈ ಎರಡು ಬೇಡಿಕೆಗಳನ್ನು ಮಂಡಿಸಬೇಕಿದೆ. ಆ ಮೂಲಕ ಭವಿಷ್ಯದಲ್ಲಿ ನಮ್ಮ (ಘನ!) ಅಧಿಕಾರಿಗಳ ಕಾನೂನು ಬಾಹಿರ, ಜನವಿರೋಧಿ ಕ್ರಮಗಳನ್ನು ತಪ್ಪಿಸಲು ಸಾಧ್ಯವಾಗಬಹುದು. ಈ ಹಂತದಲ್ಲಿ ನ್ಯಾಯಕ್ಕಾಗಿ ನ್ಯಾಯಾಲಯದ ಮೊರೆ ಹೋಗುವುದು ಪಾಲಿಕೆ ಹಾಗೂ ಅರಣ್ಯ ಇಲಾಖೆಗೇ ಅನುಕೂಲವಾಗಬಹುದು! ಆದ್ದರಿಂದ ಆ ಪ್ರಯತ್ನ ಕೈಬಿಡುವುದು ಉತ್ತಮ.

–ಡಾ. ಕೆ.ಬಿ.ಗಣಪತಿ
ಸಂಸ್ಥಾಪಕ ಸಂಪಾದಕರು
'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್'.

ಸಸ್ಯ ಸಮೃದ್ಧ ಮೈಸೂರನ್ನು ಹಾಳು ಮಾಡುವ ದುಷ್ಕರ್ಮಿಗಳ ಪ್ರಯತ್ನವನ್ನ ಹತ್ತಿಕ್ಕುವ ಬನ್ನಿ...



ಶುಕ್ರವಾರ ಸಂಜೆ 6.30ಕ್ಕೆ ನಜರ್‌ಬಾದ್‌ನ ಎಸ್ಪಿ ಕಚೇರಿ ಮುಂದೆ ಮೇಣದಬತ್ತಿ ಬೆಳಗುವ ಮೂಲಕ ಮೌನ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಿ.

ಸಂಪುಟದಲ್ಲಿ ಜಾತಿಗಣತಿ ರಗಳೆ
ಬರೀ ಚರ್ಚೆ!

- ಕಾವೇರಿದ ಚರ್ಚೆ; ಕೆಲವರಿಂದ ಎಚ್ಚರಿಕೆ
- ಲಿಂಗಾಯತ, ಒಕ್ಕಲಿಗ ಸಚಿವರಿಂದ ಭಾರೀ ವಿರೋಧ; ಹಿಂದುಳಿದ ಸಮುದಾಯದ ಸಚಿವರಿಂದ ವರದಿ ಜಾರಿಗೆ ಆಗ್ರಹ
- ಏನೂ ನಿರ್ಧಾರ ಕೈಗೊಳ್ಳಲಾಗದೇ ಸಭೆ ಮುಂದೂಡಿದ ಮುಖ್ಯಮಂತ್ರಿಗಳು

ಬೆಂಗಳೂರು, ಏ.17(ಕೆಎಂಶಿ)– ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗ ನೀಡಿರುವ ಶೈಕ್ಷಣಿಕ, ಸಾಮಾಜಿಕ ಮತ್ತು ಆರ್ಥಿಕ ಗಣತಿಯ ವರದಿ ಕುರಿತಂತೆ ಇಂದು ನಡೆದ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಪರ ಮತ್ತು ವಿರೋಧದ ಅಭಿಪ್ರಾಯಗಳು ತೀವ್ರ ಸ್ವರೂಪ ಪಡೆದುಕೊಂಡ ಪರಿಣಾಮ ಯಾವುದೇ ತೀರ್ಮಾನ ಕೈಗೊಂಡಿಲ್ಲ. ವರದಿ ಅನುಷ್ಠಾನ ಕುರಿತಂತೆ ಸಮಗ್ರ ಚರ್ಚೆಗೆ ಮತ್ತೊಂದು ಬಾರಿ ಸಂಪುಟ ಸಭೆ ನಡೆಸಲು ತೀರ್ಮಾನಿಸಲಾಗಿದ್ದು, ಬಹುತೇಕ ಮೇ 2 ರಂದು ಇದಕ್ಕಾಗಿ ವಿಶೇಷ ಸಂಪುಟ ಸಭೆ ನಡೆಯುವ ಸಾಧ್ಯತೆ ಇದೆ.



ವರದಿ ಅನುಷ್ಠಾನ ಕುರಿತಂತೆ ಇಂದು ಕರೆಯಲಾಗಿದ್ದ ವಿಶೇಷ ಸಂಪುಟ ಸಭೆಯಲ್ಲಿ ವರದಿಯ ಬಗ್ಗೆ ಎಲ್ಲಾ ಮಂತ್ರಿಗಳು ಮುಕ್ತವಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಒಕ್ಕಲಿಗ ಮತ್ತು ಲಿಂಗಾಯತ ಸಮುದಾಯಕ್ಕೆ ಸೇರಿದ ಮಂತ್ರಿಗಳು ವರದಿಯನ್ನು ಯಾವುದೇ ಕಾರಣಕ್ಕೂ ಒಪ್ಪಲು ಸಾಧ್ಯವಿಲ್ಲ. ಅಂಕಿ– ಅಂಶಗಳು ಗೊಂದಲದಿಂದ ಕೂಡಿದ್ದು ಇದನ್ನು ತಿರಸ್ಕರಿಸಿ ಮತ್ತೊಂದು ಸಮೀಕ್ಷೆ ನಡೆಸಲು ತೀರ್ಮಾನ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಇದಕ್ಕೆ ವ್ಯತಿರಿಕ್ತವಾಗಿ ಹಿಂದುಳಿದ ಮತ್ತು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಗಳಿಗೆ ಸೇರಿದ ಮಂತ್ರಿಗಳು ಸದ್ಯಕ್ಕೆ ಈ ವರದಿಯನ್ನು ಅಂಗೀಕರಿಸಬೇಕು. ವರದಿಯ ಶಿಫಾರಸುಗಳನ್ನು ಆಧರಿಸಿ ಹಿಂದುಳಿದ ವರ್ಗಗಳಿಗೆ ನೀಡಲಾಗುತ್ತಿರುವ ಮೀಸಲಾತಿಯ ಪ್ರಮಾಣವನ್ನು ಹೆಚ್ಚಳ ಮಾಡಲು ಅವಕಾಶ ನೀಡುವಂತೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಬೇಕು. ಇದಕ್ಕಾಗಿ ಸಂವಿಧಾನದ ಒಂಬತ್ತನೇ ಷೆಡ್ಯೂಲ್‌ನಲ್ಲಿ ತಿದ್ದುಪಡಿ ಮಾಡಲು ಆಗ್ರಹಿಸಿ ನಿರ್ಣಯ ಕೈಗೊಳ್ಳಬೇಕು ಎಂದು ತಿಳಿಸಿದ್ದಾರೆ.

ಒಂದು ಹಂತದಲ್ಲಿ ಏರುಧ್ವನಿಯಲ್ಲಿ ಮಾತನಾಡಿದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ವರದಿಯಲ್ಲಿ ನೀಡಿರುವ ಕೆಲವು ಅಂಶಗಳು ಗೊಂದಲಕ್ಕೆ ಕಾರಣವಾಗಿವೆ. ಒಂದೊಂದು ಪುಟದಲ್ಲಿ ಒಂದೊಂದು ರೀತಿಯ ವಿವರಗಳು ಇವೆ. ಆರ್ಥಿಕ ಅಸಮಾನತೆಯ ಕುರಿತು ಸಮೀಕ್ಷೆ ನಡೆಸಿ ಆಯೋಗ ನೀಡಿರುವ ವರದಿ ತುಂಬಾ ಗೊಂದಲದಿಂದ ಕೂಡಿದೆ ಎಂದು ಹೇಳಿದ್ದಾರೆ. ಕಾಂತರಾಜು ನೇತೃತ್ವದ ಆಯೋಗ ನಡೆಸಿದ ಸಮೀಕ್ಷೆಯ ದತ್ತಾಂಶಗಳನ್ನು ಆಧರಿಸಿ ಜಯಪ್ರಕಾಶ್ ■ 6ನೇ ಪುಟಕ್ಕೆ

ಮೇ 2ರ ಸಂಪುಟ ಸಭೆಯಲ್ಲಿ ಅಂತಿಮ ತೀರ್ಮಾನ

ಬೆಂಗಳೂರು, ಏ.17– ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ 2015ರ ದತ್ತಾಂಶಗಳ ಅಧ್ಯಯನ ವರದಿಯನ್ನು ರಾಜ್ಯ ಸಚಿವ ಸಂಪುಟ ಸುದೀರ್ಘವಾಗಿ ಚರ್ಚೆ ನಡೆಸಿದ್ದು, ಈ ಬಗ್ಗೆ ಮತ್ತಷ್ಟು ಪೂರಕ ಮಾಹಿತಿ ಒದಗಿಸಲು ಹಿರಿಯ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್ ತಿಳಿಸಿದರು.

ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ವಿಶೇಷ ಸಂಪುಟ ಸಭೆಯ ಬಳಿಕ ಕನ್ನಡ ಮತ್ತು ಸಂಸ್ಕೃತಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಶಿವರಾಜ್ ಎಸ್. ತಂಗಡಗಿ ಅವರೊಂದಿಗೆ ಮಾಧ್ಯಮಗೋಷ್ಠಿ ನಡೆಸಿ, ಸಚಿವ ಸಂಪುಟದ ಸಭೆಯ ನಿರ್ಣಯಗಳ ಕುರಿತು ಮಾಹಿತಿ ನೀಡಿದರು.

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ 2015ರ ದತ್ತಾಂಶಗಳ ಅಧ್ಯಯನ ವರದಿಯನ್ನು ರಾಜ್ಯ ಸಚಿವ ಸಂಪುಟ ಸುದೀರ್ಘವಾಗಿ ಚರ್ಚೆ ಮಾಡಿದ್ದು ಇನ್ನಷ್ಟು ಮಾಹಿತಿ, ತಾಂತ್ರಿಕ ವಿವರಗಳು ಚರ್ಚೆಗೆ ಅಗತ್ಯ ಎನಿಸಿ, ಅವುಗಳನ್ನು ಒದಗಿಸಲು ಹಿರಿಯ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಚರ್ಚೆ ಅಪೂರ್ಣವಾಗಿದೆ. ಅತ್ಯಂತ ಸೌಹಾರ್ದಯುತವಾಗಿ ನಡೆದ ಚರ್ಚೆಯಲ್ಲಿ ಜನಸಂಖ್ಯೆ, ಹಿಂದುಳಿದಿರುವಿಕೆ, ಅಧ್ಯಯನ ಮಾಡುವ ಸಂದರ್ಭದಲ್ಲಿ ಸಾಮಾಜಿಕ, ■ 6ನೇ ಪುಟಕ್ಕೆ



ಬದುಕಿರುವ ಪತ್ನಿಯ ಕೊಲೆ ಆರೋಪದಡಿ ಪತಿಗೆ ಜೈಲು ಶಿಕ್ಷೆ ಪ್ರಕರಣ

ಪೊಲೀಸರ ಪ್ರಮಾದಕ್ಕೆ ನ್ಯಾಯಾಧೀಶರ ತೀವ್ರ ಬೇಸರ; ಏ.23ಕ್ಕೆ ತೀರ್ಪು

ಮೈಸೂರು, ಏ.17(ಬಿಎಲ್‌ಯು)– ಪತ್ನಿಯನ್ನು ಕೊಲೆ ಮಾಡದೇ ಇದ್ದರೂ ಪೊಲೀಸರ ಆರೋಪದ ಮೇರೆಗೆ ಎರಡು ವರ್ಷ ಜೈಲು ಶಿಕ್ಷೆ ಅನುಭವಿಸಿದ್ದ ಅಮಾಯಕ ಕುಶಾಲನಗರದ ಆದಿವಾಸಿ ಸುರೇಶ್ ಪ್ರಕರಣದ ವಿಚಾರಣೆ ನಡೆಸಿದ ಮೈಸೂರಿನ 5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಪೊಲೀಸರನ್ನು ತೀವ್ರವಾಗಿ ತರಾಟೆ ತೆಗೆದುಕೊಂಡಿದ್ದಲ್ಲದೆ, ಈ ಸಂಬಂಧ ತೀರ್ಪನ್ನು ಏ.23ಕ್ಕೆ ಕಾಯ್ದಿರಿಸಿದ್ದಾರೆ.

ಅಂದು ಈ ಪ್ರಕರಣದಲ್ಲಿ ತನಿಖಾಧಿಯಾಗಿದ್ದ ಅಂದಿನ ಪಿರಿಯಾಪಟ್ಟಣ ಸರ್ಕಲ್ ಇನ್ಸ್‌ಪೆಕ್ಟರ್ (ಹಾಲಿ ಕುಶಾಲನಗರ ಟೌನ್ ಇನ್ಸ್‌ಪೆಕ್ಟರ್) ಬಿ.ಜಿ.ಪ್ರಕಾಶ್, ಸಹಾಯಕ ತನಿಖಾಧಿಕಾರಿಯಾಗಿದ್ದ ಅಂದಿನ ಪ್ರೊಬೆಷನರಿ ಐಪಿಎಸ್ ಅಧಿಕಾರಿ (ಆಗ ಬೆಟ್ಟದಪುರ ಠಾಣೆ ಪ್ರಭಾರ ಸಬ್‌ಇನ್ಸ್‌ಪೆಕ್ಟರ್ ಆಗಿದ್ದರು) ಎಎಸ್‌ಐ ಸೋಮಶೇಖರ್, ಸಿಬ್ಬಂದಿಗಳಾದ ಮಹೇಶ್ ಕುಮಾರ್, ಎಂ.ಪ್ರಕಾಶ್ ಎತ್ತಿನಮನೆ ಅಲ್ಲದೆ, ಪತ್ನಿ ಕೊಲೆ ಆರೋಪ ಹೊತ್ತಿರುವ ಅಮಾಯಕ ಸುರೇಶ್ ಹಾಜರಿರಬೇಕು ಎಂದು ಆದೇಶಿಸಿದ ಮೈಸೂರಿನ 5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಗುರುರಾಜ ಸೋಮಕ್ಕಳವರ್, ಕೊಲೆಯಾಗಿದ್ದಾಳೆಂದು ಪೊಲೀಸರಿಂದ ಹೇಳಲ್ಪಟ್ಟು, ಜೀವಂತ ಪತ್ತೆಯಾದ ಸುರೇಶ್‌ನ ಪತ್ನಿ ಮಲ್ಲಿಗೆಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಬೇಕೆಂದು ಬೈಲುಕುಪ್ಪೆ ಠಾಣೆ ಪೊಲೀಸರಿಗೆ ಆದೇಶಿಸಿದರು. ■ 6ನೇ ಪುಟಕ್ಕೆ

ಯಾರನ್ನೊ ರಕ್ಷಿಸಲು ನನ್ನ ಬಲಿಪಶು ಮಾಡಿದರು

'ನೂರು ಜನ ಅಪರಾಧಿಗಳಿಗೆ ಶಿಕ್ಷೆ ಆಗದೇ ಇದ್ದರೂ ಪರ್ವಾಗಿಲ್ಲ. ಆದರೆ ಒಬ್ಬ ನಿರಪರಾಧಿಗೆ ಶಿಕ್ಷೆ ಆಗಬಾರದು' ಎಂದು ನ್ಯಾಯಶಾಸ್ತ್ರ ಹೇಳುತ್ತದೆ. ಆದರೆ ಯಾವುದೇ ತಪ್ಪು ಮಾಡದ ಸುರೇಶ್ ಜೈಲು ಪಾಲಾಗಿ ಶಿಕ್ಷೆ ಅನುಭವಿಸಿದ್ದಾನೆ.



ಸುರೇಶ್

ನ್ಯಾಯಾಲಯದಲ್ಲಿ ಇಂದು ನಡೆದ ವಿಚಾರಣೆ ಹಾಗೂ ಏ.23 ಕ್ಕೆ ತೀರ್ಪು ಕಾಯ್ದಿರಿಸಿರುವ ಬಗ್ಗೆ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿದ ಸುರೇಶ್, ಬೇರೆ ಯಾರೋ ಕೊಲೆಗಾರರನ್ನು ರಕ್ಷಿಸಲು ಪೊಲೀಸರು ನಿರಪರಾಧಿಯಾದ ನನ್ನನ್ನು ಜೈಲಿಗೆ ಕಳುಹಿಸಿದರು.

ಇಂದು ನ್ಯಾಯಾಲಯದಲ್ಲಿ ನಡೆದ ವಿಚಾರಣೆಯಿಂದ ನ್ಯಾಯ ವ್ಯವಸ್ಥೆ ಬಗ್ಗೆ ಬಹಳ ನಂಬಿಕೆ ಬಂದಿದೆ. ತಪ್ಪಿತಸ್ಥರಿಗೆ ಶಿಕ್ಷೆ ನೀಡುವ ನಿಟ್ಟಿನಲ್ಲಿ ನ್ಯಾಯಾಧೀಶರು ಸಕಾರಾತ್ಮಕ ನಿಲುವು ವ್ಯಕ್ತಪಡಿಸಿರುವುದು ಸಂತಸ ತಂದಿದೆ. ನಿರಪರಾಧಿಯಾದ ನನಗೆ ಆದ ಪರಿಸ್ಥಿತಿ ಬೇರೆ ಯಾರಿಗೂ ಆಗಬಾರದು. ಇನ್ನು ಮುಂದೆ ಪೊಲೀಸರು ತನಿಖೆ ಮಾಡುವಾಗ ಎಚ್ಚರ ವಹಿಸಲು ಈ ಪ್ರಕರಣ ನಿದರ್ಶನವಾಗಬೇಕು ಎಂದು ಸುರೇಶ್ ಅಭಿಪ್ರಾಯಪಟ್ಟರು.

ನಕ್ಕರೆ ಅದೇ ಸ್ವರ್ಗ

ಗಂಡ ಆಪರೇಷನ್‌ಗೂ ಮುನ್ನ
ಆಪರೇಷನ್ ವೇಳೆ ನನಗೆ ಏನಾದರೂ ಆದ್ರೆ,
ನೀನು ಈ ಡಾಕ್ಟರ್‌ನೇ ಮದುವೆ ಆಗಬೇಕು.
ಹೆಂಡತಿ : ಯಾಕ್ರೀ ಹಾಗೆ ಹೇಳ್ತೀರಾ!
ಗಂಡ : ಅವನ ಮೇಲೆ ಸೇಡು ತೀರಿಸಿಕೊಳ್ಳೋಕೆ ಬೇರೆ ದಾರಿ ಕಾಣಿಸ್ತಾ ಇಲ್ಲಾ!

ಮೈಸೂರು ಮಿತ್ರ
ಶುಕ್ರವಾರ, 18 ಏಪ್ರಿಲ್ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಯಾರಿಗೂ ಉಪದೇಶ ಮಾಡಬೇಡ. ದಡ್ಡರು ಅದನ್ನು ಕೇಳುವುದಿಲ್ಲ. ಜಾಣರಿಗೆ ಅದರ ಅವಶ್ಯಕತೆ ಇಲ್ಲ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬರಲ್ಲ.

ನಿಮ್ಮ ಪತ್ರಗಳು

ಜಾತಿ ಗಣತಿ ವಿವರ ಸಲ್ಲಿಸಲು ಆನ್‌ಲೈನ್ ಅರ್ಜಿ ಕರೆಯಿರಿ

ಮಾನ್ಯರೆ,

ಜಾತಿ ಗಣತಿ ವರದಿ ನೋಡಿದಾಗ ಇದು ಧರ್ಮ ಗಣತಿಯೋ, ಜಾತಿ ಗಣತಿಯೋ ಎಂದು ತಿಳಿಯುತ್ತಿಲ್ಲ. ಹಾಗಾಗಿ ಜನರಿಗೆ ಸ್ವ ಇಚ್ಛೆಯಿಂದ ಹೇಗೆ ಆಧಾರ್ ಕಾರ್ಡ್, ಪಾನ್ ಕಾರ್ಡ್, ರೇಷನ್ ಕಾರ್ಡ್ ಸೇರಿದಂತೆ ಇನ್ನಿತರ ಸರ್ಕಾರಿ ದಾಖಲೆಗಳನ್ನು ಪಡೆಯಲು ಆನ್‌ಲೈನ್‌ನಲ್ಲಿ ಅರ್ಜಿ ಹಾಕಲಾಗುತ್ತಿದೆಯೋ, ಅದೇ ರೀತಿ ಆಧಾರ್ ಕಾರ್ಡ್ ಮೂಲ ದಾಖಲೆಯನ್ನಾಗಿ ಅಪ್ಲೋಡ್ ಮಾಡಿ, ಜಾತಿ ಗಣತಿ ವಿವರವನ್ನು ಸ್ವ ಇಚ್ಛೆಯಿಂದ ಜನರಿಂದ ಆನ್‌ಲೈನಲ್ಲಿ ಅರ್ಜಿ ಹಾಕಿ ಸಲ್ಲಿಸುವಂತೆ ಪ್ರೇರೇಪಿಸಬೇಕು. ಆನ್‌ಲೈನ್‌ನಲ್ಲಿ ಹಾಕಿದ ಅರ್ಜಿಯನ್ನು ಪರಿಶೀಲಿಸಲು ಗ್ರಾಮ ಮಟ್ಟದ ಗ್ರಾಪಂ ಸದಸ್ಯರು, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಆಡಳಿತಾಧಿಕಾರಿಗಳು, ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು, ಗ್ರಾಮೀಣ ಅಂಗವಿಕಲರ ಪುನರ್ವಸತಿ ಕಾರ್ಯಕರ್ತರು ಸೇರಿದಂತೆ ಸ್ಥಳೀಯ ಆಡಳಿತ ಸಂಸ್ಥೆಗಳಿಂದ ಪರಿಶೀಲಿಸಿ, ಅಂಗೀಕರಿಸಬೇಕು. ನಗರ ಮಟ್ಟದಲ್ಲಿ ಸ್ಥಳೀಯ ಆಡಳಿತದಿಂದ ಪರಿಶೀಲಿಸಿ ಅಂಗೀಕರಿಸಬೇಕು. ಇದರಿಂದ ಯಾವುದೇ ರೀತಿಯ ತೊಂದರೆ, ಅಡೆತಡೆ ಆಗುವುದಿಲ್ಲ. ಜಾತಿಯಲ್ಲಿ ಪಂಥ ಬರುತ್ತದೆ. ಪಂಥದಲ್ಲಿ ಜಾತಿ ಬರುತ್ತದೆ. ಉದಾ: ಪಂಥ ವೀರಶೈವ ಲಿಂಗಾಯತ ಜಾತಿ ಬೇಡ ಜಂಗಮ. ಇದೇ ರೀತಿಯ ಪಂಥದಲ್ಲಿ ಹಲವು ಜಾತಿ ಬರಲಿವೆ. ಇಲ್ಲಿ ಜಾತಿ ಗಣತಿ ಎಂದ ಮೇಲೆ ಧರ್ಮ ಕಾಣಿಸಬಾರದು. ಪಂಥ ಅಥವಾ ಜಾತಿ ಎಂದು ನಮೂದಿಸಬೇಕು. ಧರ್ಮ ಹೇಗೆ ಜಾತಿ ಆಗಲಿದೆ. ಧರ್ಮವೇ ಬೇರೆ, ಜಾತಿಯೇ ಬೇರೆ. ಹಾಗಾಗಿ ಜನರಿಗೆ ಸ್ವ ಇಚ್ಛೆಯಿಂದ ಜಾತಿ ಗಣತಿ ವಿವರ ಆನ್‌ಲೈನಿನಲ್ಲಿ ಸಲ್ಲಿಸಿ, ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿ–ಅಧಿಕಾರಿಗಳಿಂದ ಅಂಗೀಕರಿಸುವಂತಹ ವ್ಯವಸ್ಥೆ ಸರ್ಕಾರ ಮಾಡಬೇಕು.

– ವೀರೇಶ ಧೂಪದಮಠ, ಮೈಸೂರು.

ಕನ್ಸರ್‌ವೆನ್ಸಿ ಗಲ್ಲಿ ರಸ್ತೆ ಅಗೆದು ತಿಂಗಳಾದರೂ ದುರಸ್ತಿಗೊಂಡಿಲ್ಲ



ಮಾನ್ಯರೆ,

ಮೈಸೂರಿನ ಕ್ಯಾತಮಾರನಹಳ್ಳಿ ದೊಡ್ಡಗರಡಿ ಮುಖ್ಯ ರಸ್ತೆ ಹಾಗೂ ಸಿದ್ದಪ್ಪಾಜಿ ದೇವಸ್ಥಾನ ಹಿಂಭಾಗದ ರಸ್ತೆಯ ಕನ್ಸರ್‌ವೆನ್ಸಿ (ಗಲ್ಲಿ)ರಸ್ತೆಯನ್ನು ಕಾಂಕ್ರೀಟ್ ರಸ್ತೆಯಾಗಿ ಪರಿವರ್ತಿಸಲು ಅಗೆದು ತಿಂಗಳಾಗಿದೆ. ಆದರೂ ಯಾರು ಇದರ ಬಗ್ಗೆ ಕಾಮಗಾರಿ ಸಂಪೂರ್ಣಗೊಳಿಸಲು ಮನಸು ಮಾಡುತ್ತಿಲ್ಲ. ಈ ಅಗೆದ ಗಲ್ಲಿ ರಸ್ತೆಯಿಂದಲೇ ವಯಸ್ಸಾದವರು, ಮಕ್ಕಳು ಮತ್ತು ಅನಾರೋಗ್ಯ ಪೀಡಿತರು ನಡೆದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಕೂಡಲೇ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಸ್ಪಂದಿಸಿ ಕಾಮಗಾರಿಯನ್ನು ಪೂರ್ಣಗೊಳಿಸಿ.

–ವಿಶ್ವ ರತ್ನ ಡಾ.ಬಿ.ಆರ್.ಅಂಬೇಡ್ಕರ್ ವಿಚಾರ ವೇದಿಕೆ, ಕ್ಯಾತಮಾರನಹಳ್ಳಿ ಮೈಸೂರು

ಜಾಹೀರಾತುದಾರರೆಂಬ ಮರ ಭಕ್ಷಕರು

ಮಾನ್ಯರೆ,

ಮೈಸೂರಿನ ರಸ್ತೆಗಳಲ್ಲಿ ದಪ್ಪ ಕಂಬದ ಜಾಹಿರಾತು ಪ್ರದರ್ಶಿಸುವವರು ಅವರ ಜಾಹೀರಾತು ದೂರಕ್ಕೂ ಕಾಣಲಿ ಎಂಬ ಉದ್ದೇಶದಿಂದ ಜಾಹೀರಾತು ಪರದೆಗೆ ಅಡ್ಡ ಬರುವ ಎಲ್ಲಾ ಮರಗಳನ್ನು ಬೋಳಿಸಿ ಬಿಡುತ್ತಿದ್ದಾರೆ. ಅವರಿಗೆ ಅವರ ಜಾಹೀರಾತು ಮಾತ್ರ ಮುಖ್ಯವಾಗಿರುತ್ತದೆ. ಮೊದಲು ಜಾಹೀರಾತುದಾರರು ಒಂದು ಬದಿಯಲ್ಲಿ ಜಾಹಿರಾತು ಮತ್ತೊಂದು ಬದಿಯಲ್ಲಿ ರಸ್ತೆ ಮತ್ತು ಮುಖ್ಯ ಸ್ಥಳಗಳ ಮಾರ್ಗದರ್ಶನ ನೀಡುವ ವಿವರಗಳನ್ನು ಹಾಕುತ್ತಿದ್ದರು. ಇದು ಒಂದು ರೀತಿ ಸಮಯೋಚಿತವಾಗಿತ್ತು ಆದರೆ, ಇತ್ತೀಚೆಗೆ ನೆಡುತ್ತಿರುವ ಕಂಬಗಳ ಎರಡೂ ಬದಿಯಲ್ಲೂ ಜಾಹೀರಾತುಗಳದೇ ದರ್ಬಾರ್ ಆಗಿದೆ. ಸಂಬಂಧಪಟ್ಟ ಅಧಿಕಾರಿಗಳು ಒಂದು ಬದಿಯಲ್ಲಿ ಮಾತ್ರ ಜಾಹೀರಾತು ಹಾಕಿ ಇನ್ನೊಂದು ಬದಿಯಲ್ಲಿ ರಸ್ತೆ ಮಾರ್ಗದರ್ಶನ ಕಡ್ಡಾಯವಾಗಿ ಹಾಕಬೇಕೆಂಬ ಷರತ್ತು ವಿಧಿಸಬೇಕು. ಬಹುಶಃ ಈ ಜಾಹೀರಾತು ಮಾಫಿಯಾವನ್ನು ಎದುರು ಹಾಕಿಕೊಳ್ಳಲು ನಮ್ಮ ಮಹಾನಗರ ಪಾಲಿಕೆಯವರಿಗೆ ಭಯ ಇರಬೇಕು. ಇಲ್ಲ, ಅವರಿಬ್ಬರಲ್ಲಿ ಹೊಂದಾಣಿಕೆ ಇರಬೇಕು. ಜಾಹೀರಾತು ಒಂದು ಉತ್ತಮ ಸಂಪನ್ಮೂಲ ನಿಜ. ಹಾಗೆಂದು ಮರಗಳ ಹನನ ಸಲ್ಲದು. ಜಾಹೀರಾತು ಪ್ರದರ್ಶನಕ್ಕಾಗಿ ಮರಗಳನ್ನು ಕತ್ತರಿಸುವುದನ್ನು ಕಡ್ಡಾಯವಾಗಿ ನಿಷೇಧಿಸಬೇಕು.

–ಅರಕೆರೆ ದೇವರಾಜು, ಮೈಸೂರು.

ಶಬ್ದಕ್ಕೆ ಮಿತಿ ಹೇರುವುದು ಅಗತ್ಯ

ಮಾನ್ಯರೇ,

ಮೈಸೂರು ಇತ್ತೀಚೆಗೆ ಜನದಟ್ಟಣೆ ಮತ್ತು ವಾಹನ ದಟ್ಟಣೆಯ ಕಾರಣದಿಂದ ಶಬ್ದಮಾಲಿನ್ಯ ಹೆಚ್ಚಾಗಿ 'ಹಿರಿಯರ ಸ್ವರ್ಗ'ವೆಂದೇ ಕರೆಯಲ್ಪಡುವ ಮೈಸೂರು ದರಿಂದ 'ಗದ್ದಲದ ಊರೆಂದು' ಕರೆಸಿಕೊಳ್ಳುವ ಕಡೆಗೆ ದಾಪುಗಾಲಿಡುತ್ತಿರುವುದು ಸರಿಯಷ್ಟೆ. ಆದುದರಿಂದ ಮೈಸೂರು ಮಹಾನಗರ ಪಾಲಿಕೆಯ ಅಧಿಕಾರಿಗಳು ಈ ಬಗ್ಗೆ ಗಮನಹರಿಸಿ ನಗರಪಾಲಿಕೆಯ ಕಸದ ವಾಹನಕ್ಕೆ ಅಳವಡಿಸಿರುವ ಮೈಕ್ ತೆಗೆಸಿ ಈ ಹಿಂದೆ ಇದ್ದ ರೀತಿಯಲ್ಲಿಯೇ 'ವಿಷಲ್' ಹಾಕಿ ಕಸ ಸಂಗ್ರಹ ಮಾಡುವುದು ಮತ್ತು ತರಕಾರಿ ಹಾಗೂ ವಿವಿಧ ವಸ್ತುಗಳನ್ನು ಮಾರಾಟ ಮಾಡುವವರು ಉಪಯೋಗಿಸುತ್ತಿರುವ ಮೈಕ್‌ಗಳಿಗೆ ಕಡಿಮೆ ಶಬ್ದ ಬರುವ ಹಾಗೆ ಇಂತಿಷ್ಟೇ ಡೆಸಿಬೆಲ್ ಶಬ್ದದ ಮಿತಿ ಹೇರುವ ಅಗತ್ಯವಿದೆ. ಹೀಗೆ ಮಾಡುವುದರಿಂದ ವಯಸ್ಸಾದವರು, ಬಿಪಿ, ಶುಗರ್, ಹೃದ್ರೋಗಗಳಿಂದ ಬಳಲುತ್ತಿರುವವರು, ಓದುವ ವಿದ್ಯಾರ್ಥಿಗಳಿಗೆ ಸಾಕಷ್ಟು ಅನುಕೂಲವಾಗಿ ಅವರ ಮಾನಸಿಕ ಮತ್ತು ದೈಹಿಕ ಆರೋಗ್ಯ ಉತ್ತಮಗೊಳ್ಳುತ್ತದೆ. ಈ ಬಗ್ಗೆ ಸಂಬಂಧಪಟ್ಟವರು ಕ್ರಮವಹಿಸಬೇಕೆಂದು ವಿನಂತಿ.

–ರಾಜಶೇಖರ ಮೂರ್ತಿ,ಬೆಳಗನಹಳ್ಳಿ, ಹೆಚ್.ಡಿ. ಕೋಟೆ ತಾ.



ಜೆ.ಬಿ.ರಂಗಸ್ವಾಮಿ
ವಿಶ್ರಾಂತ ಪೊಲೀಸ್ ಅಧಿಕಾರಿ,
ಮೈಸೂರು

ಕಸ್ಟಡಿ

ರೇಪ್ ಅಂಡ್ ಮರ್ಡರ್; ಆಮೇಲೆ ಶೂಟೌಟ್!

ಹುಬ್ಬಳ್ಳಿ–ಧಾರವಾಡ ಪೊಲೀಸ್ ಕಮಿಷ್ನರೇಟ್ ವ್ಯಾಪ್ತಿ ಕೊಲೆ ಪಾತಕಿ ವಿಕೃತಕಾಮಿಯನ್ನು ಹೊಡೆದುರುಳಿಸಿದ ಲೇಡಿ ಸಿಂಗಂ ವಿರುದ್ಧ ವಿಚಾರಣೆಗೆ ಆರ್ಡರ್ ಆಗಿದೆ. ಸುಪ್ರೀಂ ನೀಡಿರುವ ಮಾರ್ಗದರ್ಶಕ ಸೂತ್ರಗಳಂತೆ ವಿಚಾರಣೆ ನಡೆಯಲಿದೆ. ಅವರು ಮಾಡಿದ್ದು ಸಹ ಅಮಾನುಷ ಕೊಲೆ! ಪ್ರಚಾರದ ತೆವಲಿಗಾಗಿ ತೋರಿದ Trigger happiness! ಅಸಲಿಗೆ ಆತನೇ ರೇಪ್ ಅಂಡ್ ಮರ್ಡರ್ ಮಾಡಿದ್ದ ಎಂಬುದಕ್ಕೆ ಏನಿದೆ ಸಾಕ್ಷಿ? ಅವನೊಬ್ಬ ಅಮಾಯಕ ದಾರಿಹೋಕ. ಮತ್ತಾರೋ ಪ್ರಭಾವಿಯ ಮಗನನ್ನು ಬಚಾವ್ ಮಾಡುವ ಸಲುವಾಗಿ ಈ ದಿಕ್ಕಿಲ್ಲದ ಬಿಹಾರಿಯನ್ನು ಪೊಲೀಸರು ಬಲಿಪಶು ಮಾಡಿದರೇ? ಪೊಲೀಸರನ್ನು ನಂಬುವಂತಿಲ್ಲ. ಸಂದಿಗ್ಧ ಒದಗಿದಾಗ ತಬ್ಬಲಿಯನ್ನು ಕರೆತಂದು ತಲೆ ಬೋಳಿಸುವುದರಲ್ಲಿ ನಿಸ್ಸೀಮರು! ಹೀಗೆಲ್ಲಾ ಮಾತುಗಳು ಕೇಳಿ ಬರುವುದು ಸಹಜ.

ಲೇಡಿ ಸಿಂಗಂ ಪರ ನಿನ್ನೆ ಮೊನ್ನೆ ಜೈಕಾರ ಹಾಕಿದವರೇ ಈಗ ಪೂತ್ಕರಿಸುತ್ತಿದ್ದಾರೆ. ಮಾನವ ಹಕ್ಕುಗಳ ಅಮಾನುಷ ದಮನವಾಗಿದೆ. ವಿಚಾರಣೆ ನಡೆಯಲಿ. ಅವನು ರೇಪ್ ಮಾಡಿ ಕೊಲೆಗೈದದ್ದು ಯಾವುದೋ ಪಾಳು ಮನೆಯಲ್ಲಿ. ಪೊಲೀಸರು ಹತ್ತಾರು ಕಿ.ಮೀ. ದೂರದ ನಿರ್ಜನ ಪ್ರದೇಶಕ್ಕೆ ಮಹಜರಿಗಾಗಿ ಕರೆದೊಯ್ದರೆಂದು ಹೇಳುತ್ತಿದ್ದಾರೆ. ಯಾಕಾಗಿ ಅಲ್ಲೀತನಕ ಆರೋಪಿಯನ್ನು ಕರೆದೊಯ್ದರು? ಕೊಲೆಗಾರ ಕೃತ್ಯಕ್ಕೆ ಬಳಸಿದ್ದ ಚಾಕುವನ್ನೋ, ಪಿಸ್ತೂಲನ್ನೋ ಅಡಗಿಸಿಟ್ಟಿದ್ದರೆ ವಶಪಡಿಸಿಕೊಳ್ಳಲು ಅಲ್ಲೀತನಕ ಕರೆದೊಯ್ದದಕ್ಕಾದರೂ ತಥ್ಯವಿರುತ್ತಿತ್ತು. ನಿರ್ಜನ ಜಾಗಕ್ಕೆ ಕರೆದೊಯ್ದಿರುವುದುವುದಕ್ಕೆ ಕೊಲೆ ಮಾಡಲು. ಅಂತಹ ಅಪಾಯಕಾರಿ ಕೊಲೆಗಾರನಿಗೆ ಕೈಕೋಳ ತೊಡಿಸಿಯೇ ಕರೆದೊಯ್ಯಬೇಕು. ಅದರಲ್ಲೂ ನಿರ್ಜನ ಸ್ಥಳದಲ್ಲಿ ಸಂಚರಿಸುವಾಗ ಅವನನ್ನು ಕರೆದೊಯ್ಯುವ ಪೊಲೀಸಪ್ಪ ಕೂಡ ಕೈಕೋಳದಿಂದ ತಾನೂ ಲಾಕ್ ಮಾಡಿಕೊಂಡಿರುತ್ತಾನೆ. ಕೈಕೋಳವನ್ನು ಅಪರಾಧಿಯ ಬಲಗೈಗೆ ಮತ್ತು ಪೊಲೀಸನ ಎಡಗೈಗೆ ಲಾಕ್ ಮಾಡಿಕೊಂಡರೆ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಕಲ್ಲು ಬೀರಲು ಅವಕಾಶವೂ ಇರುವುದಿಲ್ಲ. ಇಂತಹ ಯಾವ ಮುಂಜಾಗ್ರತೆಯೂ ಕಾಣದಿರುವುದರಿಂದ ಅವನನ್ನು ಓಡಿಹೋಗಲು ಬಿಟ್ಟು, ನಂತರ ಕಲ್ಲು ಹೊಡೆದನೆಂಬ ನೆಪ ತೋರಿಸಿ ಗುಂಡು ಹೊಡೆದು ಕೊಲೆ ಮಾಡಿದ್ದಾರೆ. ಅವನು ತಪ್ಪಿಸಿಕೊಂಡು ಓಡುತ್ತಿದ್ದುದೇ ನಿಜವಾಗಿದ್ದರೆ ಎಷ್ಟು ದೂರ ಹಿಂದಿನಿಂದ ಗುಂಡು ಹಾರಿಸಲ್ಪಟ್ಟಿದೆಯೇ? ಎದೆಗೆ ಬಿದ್ದಿರುವ ಗುಂಡು ಬೆನ್ನ ಹಿಂದಿನಿಂದ ಹೊರ ಬಿದ್ದಿದೆಯೇ? ಅಥವಾ ನೇರ ಎದೆಗೇ ಗುಂಡಿಟ್ಟು ಸಾಯಿಸಿರುವ point blank ಫೈರಿಂಗ್ ಹತ್ಯೆಯೇ?!

ಇಂತಹ ನಾನಾ ಪತ್ತೆದಾರಿ ಪ್ರಶ್ನೆಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿವೆ. ಗುಂಡು ಹೊಡೆದಷ್ಟು ಅದನ್ನು ಸಮರ್ಥಿಸಿಕೊಳ್ಳುವುದು ಅಷ್ಟು ಸುಲಭವಲ್ಲ. ಪ್ರತಿ ಕ್ಷಣದ ಕಾರ್ಯಾಚರಣೆಯನ್ನೂ ಕಾನೂನಾತ್ಮಕವಾಗಿ ಸಂಬಂಧಿಸಿದ ಅಧಿಕಾರಿಗಳು ವಿವರಣೆ ಕೊಡಬೇಕಾಗುತ್ತದೆ.

Was the situation so warranted to open FIRE? ಈ ಪ್ರಶ್ನೆಗೆ ಉತ್ತರಿಸಲು ಎಂಥವರೂ ತತ್ತರಿಸಿ ಹೋಗುತ್ತಾರೆ. ಗುಂಡು ಹಾರಿಸುವ ಸಂದರ್ಭಗಳು ಎರಡು. ತನ್ನ ಪ್ರಾಣ ರಕ್ಷಿಸಿಕೊಳ್ಳಲು ಅಥವಾ ಅನ್ಯರ ಜೀವ ಉಳಿಸಲು. ಹೀಗೆ ಮಾಡಲು ಗುಂಡು ಹಾರಿಸದೆ ಬೇರೆ ದಾರಿಯೇ ಇರಲಿಲ್ಲವೆಂಬುದನ್ನು ನಿರೂಪಿಸಬೇಕು. ಆ ಸಂದಿಗ್ಧ ಸಂದರ್ಭ ಎಷ್ಟು ಗುರುತರವಾಗಿತ್ತೆಂದರೆ, ಗುಂಡು ಹಾರಿಸದೇ ಇದ್ದಿದ್ದರೆ ತನ್ನ ಪ್ರಾಣವೂ ಉಳಿಯುತ್ತಿರಲಿಲ್ಲ. ಉಳಿದವರನ್ನೂ ರಕ್ಷಿಸಲು ಸಾಧ್ಯವೇ ಇರಲಿಲ್ಲ. ಸಾರ್ವಜನಿಕ ಅಮೂಲ್ಯ ಆಸ್ತಿಪಾಸ್ತಿಗಳೂ ನಾಶವಾಗುತ್ತಿದ್ದವು. ಹೀಗಾಗಿ ಅನಿವಾರ್ಯವಾಗಿ ಗತ್ಯಂತರವಿಲ್ಲದೆ ಗುಂಡು ಹಾರಿಸಿದೆ!



> ಒಂದು ಕಾಲದಲ್ಲಿ ಪೊಲೀಸ್ ನೈತಿಕತೆ ಕುಸಿಯ ಕೂಡದೆಂದು ಹಿರಿಯ ಅಧಿಕಾರಿಗಳು ನೆರವಿಗೆ ಬರುತ್ತಿದ್ದರು. ಈಗ ಆ ಪರಿಸ್ಥಿತಿ ಇಲ್ಲ. ಯಾರು ಯಾರನ್ನೂ ರಕ್ಷಿಸುವ ಹಂತದಲ್ಲಿ ಉಳಿದಿಲ್ಲ. ಘಟನೆ ನಡೆದರೆ ಅದರ ಹಲವು ಹತ್ತು ಫೋಟೋಗಳು, ವೀಡಿಯೋಗಳು, ಸಂಭಾಷಣೆಗಳು ಕ್ಷಣಾರ್ಧದಲ್ಲಿ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತವೆ. ಕಾನೂನಿನ ನೂರೆಂಟು ಸುಧಾರಿತ ಬಿಗಿ ಬಂಧಗಳು. ನ್ಯಾಯಬದ್ಧವಾದ ಕೆಲಸ ಮಾಡಲೂ ನೂರೆಂಟು ಅಡಚಣೆಗಳು.

ಈ ವಿವರಣೆಯನ್ನು ಆ ಅಧಿಕಾರಿ ಹೇಗೆ ಕೊಡುತ್ತಾರೋ ಗೊತ್ತಿಲ್ಲ. ಆ ವೇಳೆಯಲ್ಲಿ ಆಕೆಯ ಜೊತೆಯಲ್ಲಿದ್ದ ಪುರುಷ ಪೊಲೀಸ್ ಸಿಂಹಗಳು ಏನು ಮಾಡುತ್ತಿದ್ದವು ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಅಂತಹ ನಿರ್ಜನ ಸ್ಥಳಕ್ಕೆ ಹೋಗುವಾಗ ಇನ್ನಷ್ಟು ಪೊಲೀಸ್ ಸಿಬ್ಬಂದಿಯನ್ನು ಏಕೆ ಜೊತೆಗೆ ಕರೆದೊಯ್ಯಲಿಲ್ಲ? ಎಂಬ ಕರ್ತವ್ಯಲೋಪದ ನಾನಾ ಪ್ರಶ್ನೆಗಳನ್ನೂ ಎದುರಿಸಬೇಕಾಗುತ್ತದೆ. ಒಟ್ಟು ಕಾರ್ಯಾಚರಣೆಯನ್ನು ಸಂಪೂರ್ಣ ಕರ್ತವ್ಯ ದೃಷ್ಟಿಯಿಂದ, ಸದುದ್ದೇಶದಿಂದ ಮಾಡಿದ್ದೇ ಹೊರತು, ವೈಯಕ್ತಿಕ ರಾಗ ದ್ವೇಷಗಳೇನೂ ಇರಲಿಲ್ಲವೆಂಬುದನ್ನೂ ಕರಾರುವಾಕ್ಕಾಗಿ ನಿರೂಪಿಸಬೇಕಾಗುತ್ತದೆ.

ನಿಸ್ಪೃಹತೆಯಿಂದ ಮಾಡಿದ ನ್ಯಾಯಯುತ ಕೆಲಸಕ್ಕೂ ಎಷ್ಟೊಂದು ಉತ್ತರ ನೀಡಬೇಕು? ಪೊಲೀಸ್ ಕೆಲಸವೆಂದರೆ ಅನೇಕರಿಗೆ ಹೇಗೆ ಬೇಕಾದರೂ ಸ್ವೇಚ್ಛೆಯಿಂದ ನಡೆದರೂ ಜೈಸಿಕೊಳ್ಳಬಹುದೆಂಬ ಕಲ್ಪನೆ ಇದೆ. ವಾಸ್ತವ ಹಾಗಿಲ್ಲ. ಕಣ್ಣೆದುರೇ ರಣಭೀಕರ ಘರ್ಷಣೆ ನಡೆದು ಮೂರ್ನಾಲ್ಕು ಜನ ಸತ್ತ ಕೋಮು ಗಲಭೆಯಲ್ಲಿ ಗುಂಡು ಹಾರಿಸಿದ ಪೊಲೀಸ್ ಅಧಿಕಾರಿ ಸಸ್ಪೆಂಡಾಗಿರುವ ಸಂದರ್ಭಗಳೂ ಇವೆ. ಅವನು ಗುಂಡು ಹಾರಿಸುವ ವೇಳೆಗೆ ಪರಿಸ್ಥಿತಿ ಶಾಂತವಾಗಿ ತಹಬದಿಗೆ ಬಂದಿತ್ತಂತೆ! ಹತ್ಯೆಗೂ, ಗುಂಡು ಹಾರಿಸುವುದಕ್ಕೂ ಇದ್ದ ಸಮಯದ ಅಂತರ ಹತ್ತೇ ನಿಮಿಷ.

ಗುಂಡು ಹಾರಿಸಿದ ಕಾರ್ಯಾಚರಣೆಯನ್ನು ವಿಚಾರಣೆ ಮಾಡುವ ಅಧಿಕಾರಿಗಳು, ಮಾನವ ಹಕ್ಕು ಆಯೋಗದವರು ಇವರೆಲ್ಲಾ ಯಾವ ದೃಷ್ಟಿಕೋನದಿಂದ ನೋಡುತ್ತಾರೋ ತಿಳಿಯದು.

ತಮ್ಮ ತಪ್ಪೇ ಇಲ್ಲದಿದ್ದರೂ ಗೋಲಿಬಾರ್, ಲಾಕಪ್ ಡೆತ್ ಮುಂತಾದ ಸಾವುಗಳಿಗಾಗಿ ಮನೆ–ಮಠ ಕಳೆದುಕೊಂಡು ನಿರ್ಗತಿಕರಾದವರ ಸಂಖ್ಯೆ ದೊಡ್ಡದು. ಯಾರು ಯಾರನ್ನೂ ದೂಷಿಸುವಂತಿಲ್ಲ. ಹುಲು ಮಾನವರಿರುವ ವ್ಯವಸ್ಥೆಯೇ ಹಾಗಿದೆ. 1985 –90ರ ತನಕವೂ ಪೊಲೀಸ್ ಅಧಿಕಾರಿಗಳು ಗೋಲಿಬಾರ್ ಅಥವಾ ಲಾಕಪ್ ಸಾವಿನ ಪ್ರಕರಣಗಳು ನಡೆದರೂ ಎದೆ ಗುಂದದೆ ಮುನ್ನುಗ್ಗುತ್ತಿದ್ದರು.



ರಿತೇಶ್ ಕುಮಾರ್

ಅಂದಿನ ಮೇಲಧಿಕಾರಿಗಳಿಗೆ ಒಂದು ಅಂಶ ಮಾತ್ರ ಖಚಿತವಾಗಬೇಕಿತ್ತು. ಕರ್ತವ್ಯವನ್ನು ನಿಸ್ಪೃಹತೆಯಿಂದ ನಿರ್ವಹಿಸುವಾಗ ಮಾತ್ರ ಈ ಅನಾಹುತ ಜರುಗಿತೇ? ಇದರಲ್ಲಿ ಯಾವುದೇ ಭ್ರಷ್ಟತೆ ಇರಲಿಲ್ಲವೇ? ಸದುದ್ದೇಶ ಮಾತ್ರವೇ ಇತ್ತೇ? ಎಂಬುದು ಸ್ಪಷ್ಟವಾದರೆ ಯಾವ ಹಂತಕ್ಕಾದರೂ ಹೋಗಿ ಕೈಕೆಳಗಿನ ಅಧಿಕಾರಿಗಳನ್ನು ರಕ್ಷಿಸುತ್ತಿದ್ದ ಅನೇಕ ಅಧಿಕಾರಿಗಳನ್ನು ನಾನೇ ನೋಡಿರುವೆ. ಆಪರೇಷನ್ ಮಾಡುವಾಗ ಸತ್ತ ಪೇಷಂಟಿನಂತೆ ಅವರ ಲೆಕ್ಕ. ಇಲಾಖೆಯ ನೈತಿಕ ಸ್ಥೈರ್ಯವನ್ನೂ ಕಾಪಾಡಿಕೊಳ್ಳುವ ಜವಾಬ್ದಾರಿಕೆ ಇರುತ್ತಿತ್ತು. ಈ ಭರವಸೆ ಇದ್ದುದರಿಂದ ಕೈಕೆಳಗಿನವರು ಧೈರ್ಯದಿಂದ ಮುನ್ನುಗ್ಗಿ ಕಠಿಣವಾದ ಕೇಸುಗಳನ್ನು ಪತ್ತೆ ಮಾಡುತ್ತಿದ್ದರು. ರಣ ಪಾತಕಿ ಕ್ರಿಮಿನಲ್ಲುಗಳ ಮಗ್ಗಲು ಮುರಿಯುತ್ತಿದ್ದರು.

1995ರಲ್ಲಿ ಸರಣಿ ಕೊಲೆ, ದರೋಡೆ, ರೇಪ್ ಮಾಡಿದ್ದ ಗ್ಯಾಂಗ್‌ನ್ನು ಮೈಸೂರು ಪೊಲೀಸರು ಹಿಡಿದಿದ್ದರು. ಐದು ಜಿಲ್ಲೆಗಳಲ್ಲಿ ಕೃತ್ಯ ಎಸಗಿದ್ದ ಗ್ಯಾಂಗ್ ಅದು. ಐದು ದಿನ ಸತತವಾಗಿ ಪರಿಶೋಧನೆ ನಡೆಸಿ ಚಿನ್ನಾಭರಣಗಳನ್ನು ಸೀಜ್ ಮಾಡಿಕೊಂಡು ತನಿಖಾ ತಂಡ ಮಂಗಳೂರಿನಿಂದ ವಾಪಸಾಗುತ್ತಿತ್ತು. ಒಬ್ಬ ಕಳ್ಳನ ಮನೆ ಹುಣಸೂರು ತಾಲೂಕಿನ ಹಳ್ಳಿಯಲ್ಲಿತ್ತು. 'ಒಂದಷ್ಟು ಒಡವೆಗಳನ್ನು ನನ್ನ ಮನೆಯಲ್ಲಿ ಅಡಗಿಸಿಟ್ಟಿದ್ದೇನೆ. ಕರೆದುಕೊಂಡು ಹೋದರೆ ತೆಗೆದುಕೊಡುತ್ತೇನೆ ಸ್ವಾಮೀ. ಇದಿಷ್ಟು ಬಿಟ್ಟರೆ ನನ್ನ ಬಳಿ ಯಾವ ಒಡವೆಯೂ ಇಲ್ಲ. ಎಲ್ಲಾ ಕೇಸನ್ನೂ ಬಾಯಿ ಬಿಟ್ಟಿದ್ದೇನೆ. ಅಮೇಲೆ ನಂಗೆ ಸಹಾಯ ಮಾಡಿ' ಎಂದಿದ್ದ ಕಳ್ಳ.

ಹೇಗೂ ಅದೇ ದಾರಿಯಲ್ಲಿ ಹೋಗುತ್ತಾ ಸೀಜ್ ಮಾಡಿಕೊಂಡು ಹೋದರಾಯಿತು ಅಂದುಕೊಂಡರು ಇನ್ಸ್‌ಪೆಕ್ಟರು. ಟೆಂಪೋ ಹಳ್ಳಿಯತ್ತ ಬಂದಾಗ ರಾತ್ರಿ ಎರಡು ಗಂಟೆ ಮೀರಿತ್ತು. 'ಟೆಂಪೋ ಹೋದರೆ ಸೌಂಡಾಗಿ ಜನಕ್ಕೆ ಗೊತ್ತಾಗುತ್ತೆ. ನಮ್ಮ ಮನೆಯವರ ಮರ್ಯಾದೆ ಹೋಗುತ್ತೆ. ನಡಕಂಡೇ ಹೋಗಾಣ. ಮಾಲು ತಕ್ಕೊಡುತ್ತೇನೆ. ಕಳ್ಳ ಬೇಡಿಕೊಂಡ. ಮೂರು ಜನ ಪೊಲೀಸರೊಂದಿಗೆ ಇನ್ಸ್‌ಪೆಕ್ಟರ್ ಹೆಜ್ಜೆ ಹಾಕಿದರು.

ಅದೊಂದು ಜಾಗದಲ್ಲಿ ಸರ್ರನೆ ತಪ್ಪಿಸಿಕೊಂಡು ಓಡಿದ ಕಳ್ಳ, ದೊಪ್ಪನೆ ಹಾಳು ಭಾವಿಯಲ್ಲಿ ಬಿದ್ದು ಸತ್ತೇ ಹೋದ. ಯಾವ ದೃಷ್ಟಿಯಿಂದ ನೋಡಿದರೂ ಕಸ್ಟೋಡಿಯಲ್ ಡೆತ್ ಅದು. ಅಧಿಕೃತ ಅರೆಸ್ಟ್ ತೋರಿಸಿದ್ದಾರೆ. ಟೆಂಪೋದಲ್ಲಿದ್ದ ಎಂಟೂ ಜನ ಪೊಲೀಸರೂ ಆ ಸಾವಿಗೆ ಬಾಧ್ಯಸ್ಥರು. ಇಡೀ ಪರಿಸ್ಥಿತಿ ಅವಲೋಕಿಸಿದ ಅಂದಿನ ಮೇಲಧಿಕಾರಿಗಳು ಬಚಾವು ಮಾಡಲು ಎಷ್ಟೇ ಯತ್ನಿಸಿದರೂ ತನಿಖಾ ತಂಡದ ಅಷ್ಟೂ ಜನ ಮೂರ್ನಾಲ್ಕು ವರ್ಷ ಜೈಲು ಅನುಭವಿಸಿದರು.

2019ರ ಬಹುಚರ್ಚಿತ ಹೈದ್ರಾಬಾದ್ ಎನ್ ಕೌಂಟರ್ ರಾಷ್ಟ್ರವ್ಯಂತ ಸುದ್ದಿ ಮಾಡಿತ್ತು. ಹೈದರಾಬಾದ್ ಸಮೀಪದ ಹೆದ್ದಾರಿ ಟೋಲ್ ಬಳಿ 26 ವರ್ಷದ ವೆಟರ್ನರಿ ಡಾಕ್ಟರೊಬ್ಬರು ತಮ್ಮ ಸ್ಕೂಟರ್ ನಿಲ್ಲಿಸಿ ಹೋಗಿ ಬರುವುದರೊಳಗೆ ಟೈರು ಪಂಕ್ಚರ್ ಆಗಿತ್ತು. ಆಕೆಯ ಪೇಚಾಟ ನೋಡಿದ ಇಬ್ಬರು ಲಾರಿ ಡ್ರೈವರ್‌ಗಳು ಮತ್ತು ಅವರಿಬ್ಬರು ಅಸಿಸ್ಟೆಂಟುಗಳು ಸಹಾಯ ಮಾಡುವ ನೆಪದಲ್ಲಿ ಡಾಕ್ಟರನ್ನು ಪಕ್ಕದ ಪೊದೆಗೆ ಎಳೆದುಕೊಂಡು ಹೋಗಿ ಅಮಾನುಷವಾಗಿ ರೇಪ್ ಮಾಡಿದರು. ಬಿಡಿಸಿಕೊಳ್ಳಲು ಯತ್ನಿಸಿದ ಅವಳ ಬಾಯನ್ನು ಅದುಮಿ ಹಿಡಿದು ಮನಸ್ಸೋ ಇಚ್ಛೆ ಹಲ್ಲೆ ನಡೆಸಿದರು. ನಂತರ ಆಕೆಯ ಹೆಣವನ್ನು ಲಾರಿಯಲ್ಲಿ ಹಾಕಿಕೊಂಡು ದೂರದಲ್ಲೆಲ್ಲೋ ಎಸೆದು ಹೋಗಿದ್ದರು.



ಪಿಎಸ್‌ಐ ಅನ್ನಪೂರ್ಣ

ಸಿಸಿಟಿವಿ ಫೂಟೇಜಿನ ಮೂಲಕ ಜಾಡು ಹಿಡಿದ ಪೊಲೀಸರು ನಾಲ್ವರನ್ನೂ ಸೆರೆ ಹಿಡಿದು, ಘಟನೆಯನ್ನು ವಿವರಿಸಿದರು. ಜನ ರೊಚ್ಚಿಗೆದ್ದು ಪ್ರತಿಭಟಿಸಿದರು. ಅಪರಾಧಿಗಳನ್ನು ತಮಗೊಪ್ಪಿಸಿ. ತಾವೇ ತಕ್ಕ ಶಾಸ್ತಿ ಮಾಡುತ್ತೇವೆಂದು ಹಠ ಹಿಡಿದರು.


ತನಿಖೆಗೆಂದು ಹೆದ್ದಾರಿ ಬ್ರಿಡ್ಜ್ ಬಳಿ ಕರೆದೊಯ್ಯುತ್ತಿದ್ದಾಗ ಇಬ್ಬರು ಆರೋಪಿಗಳು ಪೊಲೀಸರ ರೈಫಲ್‌ಗಳನ್ನೇ ಕಿತ್ತುಕೊಂಡು ಹಲ್ಲೆ ಮಾಡಿದರು. ಆ ನಾಲ್ವರು ರೇಪಿಸ್ಟರನ್ನೂ ಪೊಲೀಸರು ಎನ್‌ಕೌಂಟರ್ ಮಾಡಿ ಕೆಡವಿದರು.

ರಾಷ್ಟ್ರವ್ಯಂತ ಪೊಲೀಸರ ಈ ಘನ ಕಾರ್ಯಕ್ಕೆ ಶಹಭಾಸ್‌ಗಿರಿ ಕೊಟ್ಟಿದ್ದೇ ಕೊಟ್ಟಿದ್ದು. ಅನಂತರ ಅಪಸ್ವರಗಳೆದ್ದವು. ಮಾನವ ಹಕ್ಕುಗಳ ಕ್ರೂರ ದಮನ ನಡೆದಿದೆಯೆಂದು ಕೇಸು ಸುಪ್ರೀಂನವರೆಗೂ ಹೋಯಿತು. ಹಾಡಿ ಹೊಗಳಿ ಅಟ್ಟಕ್ಕೇರಿಸಿದವರು ಹಾಗೇ ಅದೃಶ್ಯರಾದರು. ನಗುವಾಗ ಎಲ್ಲ ನೆಂಟರು. ಅಳುವಾಗ ಯಾರು ಇಲ್ಲಾ. ವೇದಿಕೆ ಸಜ್ಜುಗೊಳಿಸಿ ನಡೆಸಿದ ಕಗ್ಗೊಲೆ ಎಂದು ಸುಪ್ರೀಂ ಹೇಳಿತು. ತನಿಖಾ ತಂಡದ ಅಷ್ಟೂ ಪೊಲೀಸರೀಗ ಜೈಲಿನಲ್ಲಿ ಕೊಳೆಯುತ್ತಿದ್ದಾರೆ.

ಒಂದು ಕಾಲದಲ್ಲಿ ಪೊಲೀಸ್ ನೈತಿಕತೆ ಕುಸಿಯಕೂಡದೆಂದು ಹಿರಿಯ ಅಧಿಕಾರಿಗಳು ನೆರವಿಗೆ ಬರುತ್ತಿದ್ದರು. ಈಗ ಆ ಪರಿಸ್ಥಿತಿ ಇಲ್ಲ. ಯಾರು ಯಾರನ್ನೂ ರಕ್ಷಿಸುವ ಹಂತದಲ್ಲಿ ಉಳಿದಿಲ್ಲ. ಘಟನೆ ನಡೆದರೆ ಅದರ ಹಲವು ಹತ್ತು ಫೋಟೋಗಳು, ವೀಡಿಯೋಗಳು, ಸಂಭಾಷಣೆಗಳು ಕ್ಷಣಾರ್ಧದಲ್ಲಿ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತವೆ. ಕಾನೂನಿನ ನೂರೆಂಟು ಸುಧಾರಿತ ಬಿಗಿ ಬಂಧಗಳು. ನ್ಯಾಯಬದ್ಧವಾದ ಕೆಲಸ ಮಾಡಲೂ ನೂರೆಂಟು ಅಡಚಣೆಗಳು.

ಹುಬ್ಬಳ್ಳಿ ಪ್ರಕರಣದಲ್ಲಿ ಮಹಿಳಾ ಸಬ್‌ಇನ್ಸ್‌ಪೆಕ್ಟರ್ ಇಂಥವೆಲ್ಲಾ ಕಟ್ಟುಪಾಡುಗಳಿದ್ದರೂ ಹಿಂಜರಿಯದೆ ಶ್ಲಾಘನೀಯ ಕಾರ್ಯ ಮಾಡಿದ್ದಾರೆ. ಸಮಾಜದ ಹೀನ ಜಂತುವೊಂದನ್ನು ಕೊನೆಗಾಣಿಸಿದ್ದಾರೆ. ಅವರ ಕಾರ್ಯಾಚರಣೆ ಪ್ರಾಮಾಣಿಕ ಮತ್ತು ನಿಷ್ಠೆಯ ಬಗ್ಗೆ ಅನುಮಾನವಿಲ್ಲ. ಆದರೆ ಕಾನೂನಿನ ನಿಯಮಗಳಿಗೆ ಅನುಗುಣವಾಗಿ ನಡೆಸಿದ್ದಾರೆಯೇ ಎಂಬುದಕ್ಕೆ ಉತ್ತರ ಬೇಕು. ಯಾಕೆಂದರೆ ಸತ್ತಿರುವವನು ಪಾಖಂಡಿ ಅಪರಾಧಿಯಾಗಿದ್ದರೂ ಅವನ ಸಾವು ನಿಜವಾಗಿ ಹೇಗಾಯ್ತು ಎಂಬುದರ ಬಗ್ಗೆ ಕಾನೂನಿನ ಅಗ್ನಿಕುಂಡವನ್ನು ದಾಟಲೇಬೇಕು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಜಿಲ್ಲಾ ಪ್ರತಿನಿಧಿ ಡಿ.ಟಿ.ಪ್ರಕಾಶ್, ಡಾ.ಲಕ್ಷ್ಮಿಗೆ ಸನ್ಮಾನ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಚುನಾವಣೆಯಲ್ಲಿ ಜಿಲ್ಲಾ ಪ್ರತಿನಿಧಿಗಳಾಗಿ ಆಯ್ಕೆಯಾಗಿರುವ ಡಿ.ಟಿ.ಪ್ರಕಾಶ್ ಹಾಗೂ ಡಾ.ಲಕ್ಷ್ಮಿ ಅವರನ್ನು ಸನ್ಮಾನಿಸಲಾಯಿತು.

ಮೈಸೂರು, ಏ.17(ಜಿಎ)–ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸ್ನೇಹ ಸಿಂಚನ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಜಿಲ್ಲಾ ಪ್ರತಿನಿಧಿಗಳಾಗಿ ಆಯ್ಕೆಯಾಗಿರುವ ಡಿ.ಟಿ.ಪ್ರಕಾಶ್, ಡಾ.ಲಕ್ಷ್ಮಿ ಅವರನ್ನು ಸನ್ಮಾನಿಸಲಾಯಿತು.

ಈ ವೇಳೆ ಹಿರಿಯ ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ ಮಾತನಾಡಿ, ಹಿಂದಿನ ಅಧ್ಯಕ್ಷರಾದ ಹಾರನಹಳ್ಳಿ ಅಶೋಕ್ ಅವರ ಅವಧಿಯಲ್ಲಿ ಬೈಲಾ ತಿದ್ದುಪಡಿ ಆಗಿರುವ ಕಾರಣ ಮಹಾಸಭಾದಲ್ಲಿ ಸಾಕಷ್ಟು ಸುಧಾರಣೆ ಆಗಿವೆ. ಈಗ ಈ ರೀತಿ ಜಿಲ್ಲಾ ಪ್ರತಿನಿಧಿಗಳಾಗಿ ಡಿ.ಟಿ.ಪ್ರಕಾಶ್ ಹಾಗೂ ಡಾ.ಲಕ್ಷ್ಮಿ ಚುನಾಯಿತರಾಗಿದ್ದಾರೆ. ಇವರಿಂದ ಬ್ರಾಹ್ಮಣ ಸಮುದಾಯದ ಅಭಿವೃದ್ಧಿ ಕೆಲಸ ನಿರೀಕ್ಷಿಸಿರುವುದಾಗಿ ತಿಳಿಸಿದರು.

ಡಿ.ಟಿ.ಪ್ರಕಾಶ್ ಮಾತನಾಡಿ, ಇದುವರೆಗೆ ತಾವು ಸಮಾಜಮುಖಿ ಕೆಲಸ ಮಾಡಿದ್ದರೂ ಈಗ ಚುನಾಯಿತರಾಗಿರುವ ಕಾರಣ ಹೊಣೆಗಾರಿಕೆ ಇನ್ನಷ್ಟು ಹೆಚ್ಚಿದೆ. ಹೀಗಾಗಿ ಎಕೆಬಿಎಂಎಸ್ ನೀಡುವ ನಿರ್ದೇಶನದ ಅಡಿಯಲ್ಲಿ ಸಮುದಾಯದ ಏಳಿಗೆಗೆ ಕಾರಣವಾಗುವ ರೀತಿ ಕಾರ್ಯನಿರ್ವಹಿಸಿ, ಸದಸ್ಯತ್ವ ಹೆಚ್ಚು ಮಾಡಲು ಶ್ರಮಿಸುವುದಾಗಿ ತಿಳಿಸಿದರು. ಕಾರ್ಯಕ್ರಮದಲ್ಲಿ ಡಾ.ಲಕ್ಷ್ಮಿ, ಇಳೈ ಆಳ್ವಾರ್ ಸ್ವಾಮೀಜಿ, ನಂ.ಶ್ರೀಕಂಠ ಕುಮಾರ್, ಎನ್.ಲಕ್ಷ್ಮಿನರಸಿಂಹ ಇದ್ದರು.

ಮನೋಹರ್‌ಗೆ ಪಿಹೆಚ್.ಡಿ



ಮೈಸೂರು,ಏ.17(ಬಿಎಲ್‌ಯು)–ಮೈಸೂರಿನ ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆಯ ವಿದ್ಯುನ್ಮಾನ ವಿಭಾಗದ ಮುಖ್ಯಸ್ಥ ಎನ್.ಮನೋಹರ್ ಅವರಿಗೆ ದಾವಣಗೆರೆ ವಿವಿಯಿಂದ ಪಿಹೆಚ್.ಡಿ ಪದವಿ ದೊರೆತಿದೆ. ಕರ್ನಾಟಕ ರಾಜ್ಯ ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಮಾರ್ಗದರ್ಶನದಲ್ಲಿ ಮನೋಹರ್ ಸಂಶೋಧನಾ ಪ್ರಬಂಧ ಮಂಡಿಸಿದ್ದರು.

ಅಪ್ರಕಟಿತ ಹಸ್ತಪ್ರತಿಗಳಲ್ಲಿನ ಕೃತಿಗಳ ಕುರಿತು ಶ್ರೀ ಶಾರದಾ ಪೀಠದೊಂದಿಗೆ ಮೈಸೂರು ವಿವಿ ಒಡಂಬಡಿಕೆ



ಅಪ್ರಕಟಿತ ಹಸ್ತಪ್ರತಿಗಳಲ್ಲಿರುವ ಕೃತಿಗಳ ಕುರಿತು ಮೈಸೂರು ವಿವಿಯು ಶ್ರೀ ಶಾರದಾ ಪೀಠದೊಂದಿಗೆ ಒಡಂಬಡಿಕೆ ಮಾಡಿಕೊಂಡಿದೆ.

ಮೈಸೂರು, ಏ. 17(ಆರ್‌ಕೆ)– ಅಪ್ರಕಟಿತ ಹಸ್ತಪ್ರತಿಗಳಲ್ಲಿರುವ ಕೃತಿಗಳ ಕುರಿತು ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚ್ಯ ವಿದ್ಯಾ ಸಂಶೋಧನಾಲಯವು ಶೃಂಗೇರಿಯ ಜಗದ್ಗುರು ಶ್ರೀ ಶಂಕರಾಚಾರ್ಯ ಮಹಾ ಸಂಸ್ಥಾನ ಶ್ರೀ ಶಾರದಾ ಪೀಠದೊಂದಿಗೆ ಒಡಂಬಡಿಕೆ ಮಾಡಿಕೊಂಡಿದೆ.

ಶ್ರೀ ಶಾರದಾ ಪೀಠದ ಆಡಳಿತಾಧಿಕಾರಿ ಪಿ.ಎ.ಮುರಳಿ ಹಾಗೂ ಮೈಸೂರು ವಿವಿ ಕುಲಸಚಿವರಾದ ಎಂ.ಕೆ.ಸವಿತಾ, 92.40 ಲಕ್ಷ ರೂ.ಗಳ ಯೋಜನೆಯನ್ನು ಅನುಷ್ಠಾನಗೊಳಿಸಲು ಒಡಂಬಡಿಕೆಗೆ ಕ್ರಾಫರ್ಡ್ ಭವನದ ಕಚೇರಿಯಲ್ಲಿ ಸಹಿ ಮಾಡಿದರು.

ಪ್ರಕಟವಾಗದ ಸುಮಾರು 13,000 ಹಸ್ತಪ್ರತಿಗಳಲ್ಲಿರುವ ಕೃತಿಗಳ ವರ್ಣಾನುಸಾರ ಸೂಚಿ ಮಾಡುವುದು (Manuscripts Descriptive Catalogue), ಆಯ್ದ ಕೃತಿಗಳನ್ನು ಪುಸ್ತಕ ರೂಪದಲ್ಲಿ ಮುದ್ರಿಸುವುದು ಮತ್ತು ಡಿಜಿ ಟೈಜೇಷನ್ ಆಫ್ ಕ್ಯಾಟಲಾಗ್ಸ್ ಇನ್ ದಿ ಫಾರ್ಮ್ ಆಫ್ ಸರ್ಚಬಲ್ ಡೇಟಾ ಬೇಸ್ ಮಾಡುವುದು ಯೋಜನೆಯ ಪ್ರಮುಖ ಪ್ರಕ್ರಿಯೆಗಳಾಗಿವೆ.

ಮೈಸೂರು ವಿವಿ ಕುಲಪತಿ ಪ್ರೊ.ಲೋಕನಾಥ್, ಪ್ರಾಚ್ಯ ವಿದ್ಯಾ ಸಂಶೋಧನಾಲಯದ ನಿರ್ದೇಶಕ ಡಾ.ಡಿ.ಪಿ.ಮಧುಸೂದನಾಚಾರ್ಯ ಇತರರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಶ್ರೀರಂಗಪಟ್ಟಣ–ಕುಶಾಲನಗರ ಹೆದ್ದಾರಿಯಿಂದ ಎಂಟು ಗ್ರಾಮಗಳ ಸಂಪರ್ಕಕ್ಕೆ

ಕೆಳಸೇತುವೆ ನಿರ್ಮಾಣಕ್ಕೆ ಆಗ್ರಹಿಸಿ ಇಲವಾಲದಲ್ಲಿ ರಸ್ತೆ ತಡೆ



ಶ್ರೀರಂಗಪಟ್ಟಣ–ಕುಶಾಲನಗರ ಹೆದ್ದಾರಿಗೆ ಕೆಳಸೇತುವೆ ನಿರ್ಮಿಸುವಂತೆ ಆಗ್ರಹಿಸಿ ಅವ್ವೇರಹಳ್ಳಿ ಮತ್ತು ಸುತ್ತಮುತ್ತಲಿನ ರೈತರು ಗುರುವಾರ ಇಲವಾಲ ಮುಖ್ಯ ರಸ್ತೆಯಲ್ಲಿ ರಸ್ತೆ ತಡೆ ನಡೆಸಿ ಪ್ರತಿಭಟನೆ ನಡೆಸಿದರು.

ಮೈಸೂರು, ಏ.17(ಜಿಎ)–ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲೂಕು ಹುಲಿಕೆರೆ ಗ್ರಾಮ ಪಂಚಾಯ್ತಿಯ ಅವ್ವೇರಹಳ್ಳಿ ಮೂಲಕ ಹಾದು ಹೋಗುವ ಶ್ರೀರಂಗಪಟ್ಟಣ–ಕುಶಾಲನಗರ ಹೆದ್ದಾರಿಯಿಂದ ಈ ಭಾಗದ 8 ಗ್ರಾಮಗಳ ಸಂಪರ್ಕ ರಸ್ತೆಗಳು ಕಡಿತವಾಗುತ್ತಿದ್ದು, ಕೂಡಲೇ ಕೆಳ ಸೇತುವೆ ನಿರ್ಮಿಸಿ ಎಂದು ಆಗ್ರಹಿಸಿ ಅವ್ವೇರಹಳ್ಳಿ ಮತ್ತು ಸುತ್ತಮುತ್ತಲಿನ ರೈತರು ಗುರುವಾರ ಇಲವಾಲ ಮುಖ್ಯ ರಸ್ತೆ ಯಲ್ಲಿ ರಸ್ತೆ ತಡೆ ನಡೆಸಿ ಪ್ರತಿಭಟನೆ ನಡೆಸಿದರು.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ರಾಷ್ಟ್ರೀಯ ಹೆದ್ದಾರಿ ನಂ.275ರಲ್ಲಿ ನಿರ್ಮಿಸುತ್ತಿರುವ ಶ್ರೀರಂಗಪಟ್ಟಣ–ಕುಶಾಲನಗರ ಹೆದ್ದಾರಿಯು ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲೂಕು, ಹುಲಿಕೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅವ್ವೇರಹಳ್ಳಿ ಮೂಲಕ ಹಾದು ಹೋಗುತ್ತಿದೆ. ಇದರಿಂದ ಇಲ್ಲಿ ಈಗಾಗಲೇ ಸುಮಾರು 60 ವರ್ಷಗಳ ಹಳೆಯದಾದ 40 ಅಡಿ ಸಂಪರ್ಕ ರಸ್ತೆ ಕಡಿತಗೊಳ್ಳಲಿದೆ.

ಇದರಿಂದ ಈ ಭಾಗದ ಹುಲಿಕೆರೆ, ಅವ್ವೇರಹಳ್ಳಿ, ಹೊಸ ಹುಂಡಿ, ಸಂಕಳ್ಳಿಕೊಪ್ಪಲು ಮತ್ತು ಮೈದನಹಳ್ಳಿ ಸೇರಿದಂತೆ ಎಂಟು ಗ್ರಾಮಗಳ ಸುಮಾರು ಐದು ಸಾವಿರ ಎಕರೆ ವ್ಯವಸಾಯದ ಭೂಮಿಗೆ ಹೋಗುವ ಸಂಪರ್ಕ ರಸ್ತೆಯು ಕಡಿತವಾಗಲಿದ್ದು, ಸಾವಿರಾರು ರೈತರಿಗೆ ಅನಾನುಕೂಲ ಉಂಟಾಗಲಿದೆ ಎಂದು ಪ್ರತಿಭಟನಾಕಾರರು ಬೇಸರ ವ್ಯಕ್ತಪಡಿಸಿದರು.

ಅವ್ವೇರಹಳ್ಳಿ ಗ್ರಾಮದ ಬಳಿ ಕೆಳಸೇತುವೆ ನಿರ್ಮಾಣ ಮಾಡಿಸಿ ಗ್ರಾಮಸ್ಥರ ಜಮೀನಿಗೆ ಸಂಪರ್ಕ ಕಲ್ಪಿಸಿಕೊಡಬೇಕು. ಇಲ್ಲದಿದ್ದಲ್ಲಿ ಕಾಮಗಾರಿ ನಡೆಯುವ ಸ್ಥಳದಲ್ಲಿ ರೈತರು ನಿರಂತರ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ ಅವರು, ಈ ಹಿಂದೆಯೂ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳಿಗೆ ಈ ಬಗ್ಗೆ ಮನವಿ ಸಲ್ಲಿಸಿದ್ದರೂ ಅವರು ಯಾವುದೇ ಕ್ರಮ ಕೈಗೊಳ್ಳದೆ ರೈತರ ಬಗ್ಗೆ ನಿರ್ಲಕ್ಷ್ಯ ತೋರುತ್ತಿದ್ದಾರೆ. ಈ ಬಾರಿ ಕೆಳಸೇತುವೆ ನಿರ್ಮಾಣಕ್ಕೆ ಮುಂದಾಗದಿದ್ದರೆ ನಾವು ಐದೂ ಗ್ರಾಮದ ರೈತರು ಒಗ್ಗೂಡಿ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ಹುಲಿಕೆರೆ ವೈರಮುಡಿಗೌಡ, ಶಿವಾಜಿ, ಇಲವಾಲ ಶಿವೇಗೌಡ, ಹಲಗೇ ಹುಂಡಿ ಮಹದೇವು, ಮೈಸೂರು ಕೃಷ್, ಮಹೇಶ, ನವೀನ್, ಯಶವಂತ ಸೇರಿದಂತೆ ಹಲವಾರು ರೈತರು ಪಾಲ್ಗೊಂಡಿದ್ದರು.

ಸಿಇಟಿ ಮುಕ್ತಾಯ: ಗಣಿತದಲ್ಲಿ 1908, ಜೀವಶಾಸ್ತ್ರದಲ್ಲಿ 1,588 ಮಂದಿ ಗೈರು

ಮೈಸೂರು,ಏ.17(ಆರ್‌ಕೆ)–ವೈದ್ಯಕೀಯ ಮತ್ತು ಇಂಜಿನಿಯರಿಂಗ್ ವೃತ್ತಿಪರ ಕೋರ್ಸುಗಳಿಗೆ ಪ್ರವೇಶಕ್ಕಾಗಿ ಎರಡು ದಿನಗಳ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ)ಗಳು ಇಂದು ಮುಕ್ತಾಯಗೊಂಡವು.

ಮೈಸೂರಿನ 38 ಕಾಲೇಜು ಕೇಂದ್ರಗಳಲ್ಲಿ ಎರಡನೇ ದಿನವಾದ ಇಂದು ಬೆಳಗ್ಗೆ ಗಣಿತ ಹಾಗೂ ಮಧ್ಯಾಹ್ನ ಜೀವಶಾಸ್ತ್ರ ವಿಷಯಗಳ ಪರೀಕ್ಷೆಗಳು ನಡೆದವು. ಗಣಿತ ವಿಷಯಕ್ಕೆ ನೋಂದಣಿಯಾಗಿದ್ದ 17,371 ಮಂದಿ ಪೈಕಿ 15,463 ಮಂದಿ ಪರೀಕ್ಷೆಗೆ ಹಾಜರಾಗಿದ್ದು, 1908 ಅಭ್ಯರ್ಥಿಗಳು ಗೈರಾಗಿದ್ದರು. ಮಧ್ಯಾಹ್ನ ನಡೆದ ಜೀವಶಾಸ್ತ್ರ ವಿಷಯದ ಪರೀಕ್ಷೆಗೆ ಒಟ್ಟು 13,930 ಮಂದಿ ನೋಂದಣಿಯಾಗಿದ್ದು, 12,342 ಮಂದಿ ಹಾಜರಾದರು. 1,588 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಲಿಲ್ಲ.

ಹೆಚ್ಚುವರಿ ಜಿಲ್ಲಾಧಿಕಾರಿ ಪಿ.ಶಿವರಾಜು ಇಂದು ಟೆರೇಷಿಯನ್ ಕಾಲೇಜು ಕೇಂದ್ರಕ್ಕೆ ಭೇಟಿ ನೀಡಿ ಪರೀಕ್ಷಾ ಪ್ರಕ್ರಿಯೆ ವೀಕ್ಷಿಸಿದರು. ಅದರೊಂದಿಗೆ ವೃತ್ತಿಪರ ಕೋರ್ಸುಗಳ ಪ್ರವೇಶಾತಿಗಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ನಡೆಸಿದ ಸಿಇಟಿ ಮುಕ್ತಾಯಗೊಂಡಂತಾಗಿದೆ.

ಮೈಸೂರಿನ ನಾರಾಯಣ ಆಸ್ಪತ್ರೆಯಲ್ಲಿ ಅಂಡಾಶಯ ಕ್ಯಾನ್ಸರ್ ಯಶಸ್ವಿ ಶಸ್ತ್ರಚಿಕಿತ್ಸೆ

ಮೈಸೂರು, ಏ.17(ಜಿಎ)–ಮಹಿಳೆಯರಲ್ಲಿ ಸಾಮಾನ್ಯವಾಗಿ ಕಾಣಬರುವ ಅಂಡಾಶಯ ಕ್ಯಾನ್ಸರ್ ಪ್ರಕರಣಗಳಿಗೆ ಸಂಬಂಧಿಸಿದಂತೆ ಸುಮಾರು 50ಕ್ಕೂ ಹೆಚ್ಚು ಸೈಟೊರಿಡಕ್ಟಿವ್ ಶಸ್ತ್ರಚಕಿತ್ಸೆ ಮತ್ತು ಹೈಪರ್‌ಥರ್ಮಿಕ್ ಇಂಟ್ರಾ ಪೆರಿಟೋನಿಯಲ್ ಕಿಮೋಥೆರಪಿ ಶಸ್ತ್ರಚಿಕಿತ್ಸೆಗಳನ್ನು ಮೈಸೂರಿನ ನಾರಾಯಣ ಆಸ್ಪತ್ರೆಯಲ್ಲಿ ಯಶಸ್ವಿಯಾಗಿ ಪೂರೈಸಲಾಗಿದೆ ಎಂದು ಆಸ್ಪತ್ರೆಯ ಶಸ್ತ್ರಚಿಕಿತ್ಸಾ ಆಂಕೋಲಜಿ ತಜ್ಞ ಡಾ.ಕೆ.ಆರ್.ಸುಹಾಸ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ರೀತಿಯ ಶಸ್ತ್ರಚಿಕಿತ್ಸೆಗಾಗಿ ಈ ಮೊದಲು ಬೆಂಗಳೂರು, ಇಲ್ಲವೇ ಚೆನ್ನೈಗಳಿಗೆ ಹೋಗಬೇಕಾಗಿತ್ತು. ಅಲ್ಲಿ ಸುಮಾರು 15 ಲಕ್ಷ ರೂ. ವೆಚ್ಚವಾಗಲಿದೆ. ತಮ್ಮ ಆಸ್ಪತ್ರೆಯಲ್ಲಿ ಇದಕ್ಕೆ ಅಗತ್ಯವಾದ ಸಾಧನ ಹಾಗೂ ಪರಿಣತರು ಇದ್ದು, 5 ಲಕ್ಷ ರೂ. ಸಮೀಪದಲ್ಲಿ ನಡೆಸಬಹುದಾಗಿದೆ. ಇದಲ್ಲದೆ ಬಿಪಿಎಲ್ ಕಾರ್ಡ್‌ದಾರರಿಗೆ ಸಿಎಸ್‌ಆರ್ ನಿಧಿ, ಪ್ರಧಾನಿ, ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದಲೂ ನೆರವು ದೊರೆಯುತ್ತದೆ ಎಂದರು.

ಈ ನೂತನ ವಿಧಾನದ ಮೂಲಕ ಅಂಡಾಶಯದಲ್ಲಿನ ಕ್ಯಾನ್ಸರ್ ಪದರ ತೆಗೆಯಲಾಗುವುದು. ಉದರದಲ್ಲಿ ವಿಶೇಷ ಸಾಧನ ಇರಿಸಿ, ಕಿಮೊಥೆರಪಿ ಮೂಲಕ ಕ್ಯಾನ್ಸರ್ ಕೋಶ ನಾಶಪಡಿಸಲಾಗುವುದು. ಇದು ಅತ್ಯಾಧುನಿಕ ವಿಧಾನವಾಗಿದ್ದು, ಯಶಸ್ಸಿನ ಪ್ರಮಾಣ ಅತಿ ಹೆಚ್ಚಾಗಿರುತ್ತದೆ. ಹೀಗಾಗಿ ಅಂತಹವರು ಪ್ರಯೋಜನ ಪಡೆಯಬೇಕೆಂದು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ತಜ್ಞ ವೈದ್ಯ ಡಾ.ಹೆಚ್.ಎಂ. ಲೋಕೇಶ್ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

18.04.2025 ಶುಕ್ರವಾರ, ಮಳೆ ನಕ್ಷತ್ರ: ಅಶ್ವಿನಿ 13.04.2025ರಿಂದ 26.04.2025 ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಮೂಲ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಯಕೃತ್ತಿನ ಸಮಸ್ಯೆಗೆ ಚಿಕಿತ್ಸಾ ಶಿಬಿರ, ಕುತ್ತಿಗೆ ಮತ್ತು ಬೆನ್ನು ನೋವಿಗೆ ಆಕ್ಯೂಪಂಕ್ಚರ್ ಮತ್ತು ಯೋಗ ಶಿಬಿರ, ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ರಿಂದ

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಮಕ್ಕಳ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್, ಕೆಬಿಎಲ್ ಲೇಔಟ್, ಬೆಳಗ್ಗೆ 10ರಿಂದ.

■ **ರವಿವರ್ಮ ಚಿತ್ರಕಲಾ ಶಾಲೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ:** ವಿಶ್ವಕಲಾ ದಿನಾಚರಣೆ ಅಂಗವಾಗಿ ರೇಖಾಚಿತ್ರ ಕಲಾ ಪ್ರದರ್ಶನ ಹಾಗೂ ಸಿನಿಮೊಟೋಗ್ರಫಿ ಮತ್ತು ಫೋಟೋಗ್ರಫಿ ತರಬೇತಿ ಕೇಂದ್ರದ ಉದ್ಘಾಟನಾ ಸಮಾರಂಭ, ಉದ್ಘಾಟನೆ: ಚಲನಚಿತ್ರ ನಟ ಸುರೇಶ್ ಹೆಬ್ಳೀಕರ್, ಉಪಸ್ಥಿತರು: ರಂಗಾಯಣ ಮಾಜಿ ನಿರ್ದೇಶಕ ಜನಾರ್ಧನ್, ಹಿರಿಯ ಛಾಯಾಚಿತ್ರ ಕಲಾವಿದ ಎಂ.ಆರ್.ಮಂಜುನಾಥ್, ಪ್ರಿನ್ಸಿಪಾಲ್ ಶಿವಕುಮಾರ ಕೆಸರಮಡು, ಸ್ಥಳ: ರವಿವರ್ಮ ಚಿತ್ರಕಲಾ ಶಾಲೆ ಆವರಣ, ಬೆಳಗ್ಗೆ 11ಕ್ಕೆ.

■ **ಪುರಾತತ್ತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ :** ವಿಶ್ವ ಪರಂಪರೆ ದಿನಾಚರಣೆ ಅಂಗವಾಗಿ ಉಪನ್ಯಾಸ ಕಾರ್ಯಕ್ರಮ, ಡಾ. ಶೆಲ್ವಪಿಳ್ಳೆ ಅಯ್ಯಂಗಾರ್, ಶರತ್‌ಚಂದ್ರ ಅವರಿಂದ ಪಾರಂಪರಿಕ ಕಟ್ಟಡಗಳ ಸಂರಕ್ಷಣಾ ವಿಧಾನ ಕುರಿತು ಉಪನ್ಯಾಸ, ಅಧ್ಯಕ್ಷತೆ : ಪುರಾತತ್ತ್ವ ಇಲಾಖೆ ಆಯುಕ್ತ ಎ. ದೇವರಾಜು, ಗೌರವ ಅತಿಥಿಗಳು : ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಡಾ. ಆರ್. ದೀಪು, ಸ್ಥಳ: ಇಲಾಖೆ ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಅರಳಿಕಟ್ಟೆ ಶ್ರೀರಾಮ ದೇವಸ್ಥಾನ ಧಾರ್ಮಿಕ ಮತ್ತು ದಾನದತ್ತಿ:** ಶ್ರೀ ವಿಶ್ವವಸು ನಾಮ ಸಂವತ್ಸರದ ಶ್ರೀರಾಮನವಮಿ, ಭಕ್ತಾದಿಗಳಿಂದ ಭಜನೆ, ಸ್ಥಳ: ಶ್ರೀರಾಮ ದೇವಸ್ಥಾನ, ಚಾಮರಾಜಪುರಂ, ಸಂಜೆ.

■ **ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್:** 'ನಿರ್ಮಲ ನೆನಪು' ಆರ್. ರಘು ಕೌಟಿಲ್ಯ ಅವರ 'ಭೂಮಿ ಪುತ್ರ' ಕವನ ಸಂಕಲನ ಮತ್ತು 'ಅಂಕಣದ ಬೆಳಕು' ಅಂಕಣ ಬರಹಗಳ ಸಂಗ್ರಹ ಪುಸ್ತಕ ಬಿಡುಗಡೆ ಸಮಾರಂಭ, ಉದ್ಘಾಟನೆ: ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಅಧ್ಯಕ್ಷತೆ: ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಕೃತಿ ಬಿಡುಗಡೆ: ಪದ್ಮಶ್ರೀ ಪುರಸ್ಕೃತ ರಾದ ಡಾ.ಬಿ.ಜಯಶ್ರೀ ಮತ್ತು ಖ್ಯಾತ ಶಿಕ್ಷಣ ತಜ್ಞ ಡಾ.ಗುರುರಾಜ ಕಜಲಗಿ, ಮುಖ್ಯ ಅತಿಥಿಗಳು: ಮಾಜಿ ಸಚಿವ ಎಚ್.ವಿಶ್ವನಾಥ್, ಶ್ರೀಮತಿ ಕೋಮಲ ಹರ್ಷಕುಮಾರ ಗೌಡ, ಕೃತಿ ಕುರಿತು: ಹಿರಿಯ ಪತ್ರಕರ್ತ ಐತಿಚಂಡ ರಮೇಶ್ ಉತ್ತಪ್ಪ, ಡಾ.ಶಾಂಭವಿ ಸ್ವಾಮಿ ನಿರ್ದೇಶನದಲ್ಲಿ ಪುಣ್ಯಕೋಟಿ (ಗೋವಿನ ಹಾಡು) ನೃತ್ಯರೂಪಕ ಮತ್ತು ಶ್ರೀಮತಿ ಸಂಗೀತಾ ಕಟ್ಟಿ ಸಾರಥ್ಯದಲ್ಲಿ ಸಂಗೀತ ರಸಸಂಜೆ, ಸ್ಥಳ: ಕಲಾಮಂದಿರ, ಮಧ್ಯಾಹ್ನ 3.30ಕ್ಕೆ

■ **ದಿವ್ಯ ಜೀವನ ಸಂಘ, ಮಹಿಳಾ ಶಾಖೆ:** ಶ್ರೀಮತಿ ಡಾ.ಕೆ.ಎಲ್.ಪ್ರಸನ್ನಾಕ್ಷಿ ಅವರಿಂದ ಕುಲಶೇಖರ ಆಳ್ವಾರ್ ವಿರಚಿತ ಮುಕುಂದ ಮಾಲಾ ಪ್ರವಚನ, ಸ್ಥಳ: ಶಿವಾನಂದ ಜ್ಞಾನಾಲಯ, ಸಂಜೆ 6ರಿಂದ.

■ **ಶ್ರೀ ವೀರಾಂಜನೇಯಸ್ವಾಮಿ ಟ್ರಸ್ಟ್ :** ಶ್ರೀರಾಮನವಮಿ ಪ್ರಯುಕ್ತ ಸಂಗೀತ ಕಾರ್ಯಕ್ರಮ, ಗಾನಭೂಷಣ ಗಾನ ಕಲಾವಿದ ವಿದ್ವಾನ್ ಡಾ. ಆರ್.ಕೆ. ಪದ್ಮನಾಭ ಅವರಿಂದ ಕರ್ನಾಟಕ ಸಂಗೀತ, ವಿದ್ವಾನ್ ಸಿ.ಎನ್. ಚಂದ್ರಶೇಖರ್–ಪಿಟೀಲು, ವಿದ್ವಾನ್ ಜಿ.ಎಸ್. ರಾಮಾನುಜ–ಮೃದಂಗ, ವಿದ್ವಾನ್ ರಾಮಾನುಜಂ–ಮೋರ್ಚಿಂಗ್, ಸ್ಥಳ: ಟ್ರಸ್ಟ್ ಆವರಣ, ಎನ್.ಎಸ್. ರಸ್ತೆ, ಸಂಜೆ 6 ರಿಂದ.

■ **ಶ್ರೀರಾಮಮಂದಿರ (ಜಯನಗರ):** ಶ್ರೀ ರಾಮಚಂದ್ರ ಸ್ವಾಮಿಯವರ 50ನೇ ವರ್ಧಂತ್ಯುತ್ಸವ, ಸೀತಾ ಕಲ್ಯಾಣ, ಶ್ರೀ ರಾಮ ಪಟ್ಟಾಭಿಷೇಕ, ಶ್ರೀ ಆದಿತ್ಯಾದಿ ನವಗ್ರಹಗಳ ವಾರ್ಷಿಕೋತ್ಸವ, ಹನುಮಂತೋತ್ಸವ, ಕುಂಭಾಭಿಷೇಕ, 59ನೇ ವಾರ್ಷಿಕೋತ್ಸವ ಕಾರ್ಯಕ್ರಮ, ಬೆಳಗ್ಗೆ 9 ರಿಂದ ಕಾಶೀಯಾತ್ರ ಪೂರ್ವಕ ಶ್ರೀಸೀತಾರಾಮರ ಕಲ್ಯಾಣೋತ್ಸವ, ಸಂಜೆ 6.30ಕ್ಕೆ ಬೊಂಬೆಯಾಟ, ರಂಗಪುತ್ಥಳಿ, ಸೂತ್ರ ಮತ್ತು ಸಲಾಕೆ ಬೊಂಬೆಯಾಟ, ಪ್ರಸ್ತುತಿ : ರಾಮಾಯಣ (ಅರಣ್ಯ ಕಾಂಡ), ನಿರ್ದೇಶನ : ಎಂ.ಆರ್. ಶ್ರೀನಿವಾಸ್, ರಾತ್ರಿ 9ಕ್ಕೆ ಉಯ್ಯಾಲೋತ್ಸವ ಮತ್ತು ಶಯನೋತ್ಸವ, ಸ್ಥಳ: ರಾಮಮಂದಿರ ಆವರಣ, ಜಯನಗರ.

■ **ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್:** ಶ್ರೀ ವಿಶ್ವವಸು ನಾಮ ಸಂವತ್ಸರದ 135ನೇ ವರ್ಷದ ಶ್ರೀ ರಾಮೋತ್ಸವ, ಶ್ರೀರಾಮ ಪಟ್ಟಾಭಿಷೇಕ, ವಿದುಷಿ ಸುಕನ್ಯಾ ಪ್ರಭಾಕರ್, ವಿದುಷಿ ಸುಮನ ವೇದಾಂತ್ ಮತ್ತು ವೃಂದದವರಿಂದ ಶಾಸ್ತ್ರೀಯ ಸಂಗೀತ, ಸ್ಥಳ: ಶ್ರೀಮತಿ ಆಲಮ್ಮನವರ ಛತ್ರ, ಕುಂಚಿಟಿಗರ ಸಂಘ, ಶ್ರೀರಾಮ ಪೇಟೆ, ಸಂಜೆ 6.30ರಿಂದ.

■ **ಸುಗಮ ಸಂಗೀತ ಅಕಾಡೆಮಿ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ನಲವತ್ತರ ನಲಿವು ವೈವಿಧ್ಯಮಯ ಸಂಗೀತ ಕಾರ್ಯಕ್ರಮ, ಆಲಾಪನಾ ಕಲಾಸಂಸ್ಥೆ –ಜನಪದ ಗೀತೆಗಳು, ನಿರ್ವಹಣೆ: ಮಂಗಳಾ ರವಿ; ಸುರಾಘವಿ ಫೌಂಡೇಷನ್–ಸಂಪ್ರದಾಯದ ಹಾಡುಗಳು, ನಿರ್ವಹಣೆ: ಸುಪ್ರಿಯಾ ರಘುನಂದನ್; ಡಾ.ಮಾಧವಿರಾಜ–ವಚನ ಗಾಯನ, ನಿರ್ವಹಣೆ : ಡಾ.ಮಾಧವಿರಾಜ; ರಘುಲೀಲಾ ಸಂಗೀತ ಮಂದಿರ –ದೇವರ ನಾಮಗಳು, ನಿರ್ವಹಣೆ: ಸುನೀತಾ ಚಂದ್ರಕುಮಾರ್; ಶಾರದಾ ಕಲಾಕೇಂದ್ರ–ರಂಗಗೀತೆಗಳು, ನಿರ್ವಹಣೆ : ರೇಖಾ ವೆಂಕಟೇಶ್, ವಾದ್ಯ ಸಹಕಾರ: ಷಣ್ಮುಖ ಸಜ್ಜಾ–ಕೀಬೋರ್ಡ್, ಭೀಮಾಶಂಕರ್–ತಬಲ, ಶಾಂಭವಿ–ಪಿಟೀಲು, ಸ್ಥಳ: ರಮಾಗೋವಿಂದ ರಂಗಮಂದಿರ, ಕುವೆಂಪುನಗರ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಾಧನ–ಶೋಧನ ಗ್ರಾಮೀಣ ಪರಿಸರದ ಉಪಕರಣಗಳು, ಲೇಖನ: ಡಾ.ಎಂ.ಎನ್.ಚಿಕ್ಕಮಾಧು, ಪ್ರಸ್ತುತಿ: ಡಾ.ಮೈಸೂರು ಉಮೇಶ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು–ಡಾ.ರೋಹಿಣಿ ಮೋಹನ್, 8.30 ಯೋಗ ಕುರಿತ ವಿಶೇಷ ಸರಣಿ ಮಹಾಯೋಗ, 8.35 ನಮ್ಮ ಆರೋಗ್ಯ ಮಕ್ಕಳಲ್ಲಿ ಕಂಡುಬರುವ ಮಾನಸಿಕ ಸಮಸ್ಯೆಗಳು ಕುರಿತು ಡಾ.ಭಾಗ್ಯವತಿ. ಹೆಚ್.ಡಿ ಅವರೊಂದಿಗೆ ಮಾತುಕತೆ ಮತ್ತು ಹಿರಿಯ ನಾಗರಿಕರಲ್ಲಿ ಕಂಡು ಬರುವ ಕಣ್ಣಿನ ತೊಂದರೆಗಳು ಮತ್ತು ಪರಿಹಾರ ಕುರಿತು ಡಾ. ರವಿಶಂಕರ್. ಕೆ.ವಿ.ಇವರೊಂದಿಗೆ ಭಾಗವಹಿಸುತ್ತಾರೆ –ಬೇದ್ರೆ ಮಂಜುನಾಥ್, 9.05 ವಿಶ್ವ ಪಾರಂಪರಿಕ ಮತ್ತು ಅಂತಾರಾಷ್ಟ್ರೀಯ ಸ್ಮಾರಕಗಳು ಮತ್ತು ತಾಣಗಳ ಕುರಿತು ವಿಶೇಷ ಕಾರ್ಯಕ್ರಮ, 9.30 ಗಾಂಧಿ ಸ್ಮತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಎಸ್. ರಾಜೇಶ್ವರಿ–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಸೈಕಲ್ ಸವಾರಿ ಮಾತಿನ ಲಹರಿ, ಪ್ರಸ್ತುತಿ: ಜಾಂಪಣ್ಣ ಆಶಿಹಾಳ್

ಮಧ್ಯಾಹ್ನ: 12.35 ದೇವರನಾಮ, 12.45 ಕಾದಂಬರಿ ವಿಹಾರ –ಎಂ.ಆರ್.ಶ್ರೀನಿವಾಸಮೂರ್ತಿ ಯವರ ರಂಗಣ್ಣನ ಕನಸಿನ ದಿನಗಳು ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ : ಉಮೇಶ್. ಎಸ್.ಎಸ್, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು–ಡಾ.ಶಮಿತಾ ಮಲ್ನಾಡ್ ಮತ್ತು ಬದರೀಪ್ರಸಾದ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿದೀಪ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಎಸ್.ಪಿ.ರಾಮ್ಯ –ಹಾಡುಗಾರಿಕೆ, 4.00 ಮಹಿಳಾರಂಗ–ಜೀವನ್ಮುಖಿ–ಆರ್.ಎಫ್.ಓ ರಶ್ಮಿ ಅವರೊಂದಿಗೆ ಮಾತುಕತೆ, ಪ್ರಸ್ತುತಿ: ಕೀರ್ತನಾ, 4.30 ವೃತ್ತಿ ಮಾರ್ಗದರ್ಶನ–ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ಹಾಗೂ ಸಂಶೋಧನೆಯ ಅವಕಾಶಗಳು ಕುರಿತು ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ಹಾಗೂ ಸಂಶೋಧನಾ ವಿಭಾಗದ ಮುಖ್ಯಸ್ಥರಾದ ಡಾ.ಶೆಲ್ವ ಪಿಳ್ಳೈ ಅಯ್ಯಂಗಾರ್ ಅವರೊಂದಿಗೆ ಮಾತುಕತೆ ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 6.50 ಕೃಷಿರಂಗ: ಡ್ರ್ಯಾಗನ್ ಹಣ್ಣಿನ ಬೇಸಾಯ ಕುರಿತು ಸಂವಾದ. ಭಾಗವಹಿಸುತ್ತಾರೆ–ಸಹಾಯಕ ತೋಟಗಾರಿಕಾ ಅಧಿಕಾರಿ ಎಸ್.ವೆಂಕಟೇಶಮೂರ್ತಿ ಮತ್ತು ಮೈಸೂರು ತಾಲೂಕು ವರುಣ ಹೋಬಳಿ ನೀರನಹಳ್ಳಿ ಗ್ರಾಮದ ಯಮುನಾ ಸೂರ್ಯನಾರಾಯಣ್, ಪ್ರಸ್ತುತಿ: ಎನ್.ಕೇಶವ ಮೂರ್ತಿ, 7.45 ಕನ್ನಡದಲ್ಲಿ ಭಾಷಣ, 8.00 ರಸಮಂಜರಿ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ: ಎಂ.ಎಸ್.ಸುಬ್ಬಲಕ್ಷ್ಮೀ– ಹಾಡುಗಾರಿಕೆ, 10.00ತತ್ವಸಂಚಾರ–ಜನಪದ ಗಾಯಕರ ತತ್ವಗಾಯನ, ಭಾಗವಹಿಸುತ್ತಾರೆ–ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲೂಕು ಕಮರಳ್ಳಿಯ ಮಾದಪ್ಪ ಮತ್ತು ಸಂಗಡಿಗರು. ಪ್ರಸ್ತುತಿ: ಡಾ.ಮೈಸೂರು ಉಮೇಶ್, 10.30 ಸವಿನೆನಪು– ಹಳೆಯ ಕನ್ನಡ ಚಿತ್ರಗೀತೆಗಳು

ಕೆ.ಆರ್.ನಗರದಲ್ಲಿ ಇಂದು

■ **ಶ್ರೀರಾಮ ಸೇವಾ ಮಂಡಳಿ:** ಶ್ರೀ ರಾಮೋತ್ಸವ, ಪ್ರವಚನ, ಹೂವಿನ ಪಲ್ಲಕ್ಕಿ ಉತ್ಸವ, ಸ್ಥಳ: ಮಂಡಳಿ ಆವರಣ, ಚಂದ್ರಮೌಳೇಶ್ವರ ರಸ್ತೆ, ಕೆ.ಆರ್.ನಗರ, ಸಂಜೆ.

ಯರಗನಹಳ್ಳಿ ಗ್ರಾಮದಲ್ಲಿಂದು, ಚಾಮರಾಜನಗರ ತಾ.

■ **ಶ್ರೀ ಸೀತಾರಾಮ ಸೇವಾ ಟ್ರಸ್ಟ್ :** ಶ್ರೀ ಸೀತಾರಾಮರ ಕಲ್ಯಾಣೋತ್ಸವ ಹಾಗೂ ರಾಮೋತ್ಸವದ ಅಂಗವಾಗಿ ವಿವಿಧ ಪೂಜಾ ಕಾರ್ಯಕ್ರಮ, ಬೆಳಗ್ಗೆ 6ಕ್ಕೆ ಸುಪ್ರಭಾತ, ಸ್ವಸ್ತಿವಾಚನ, ವಿಶ್ವಕ್ಸೇನಾರಾಧನ, ಭಗವದ್ ವಾಸುದೇವ ಪುಣ್ಯಾಹವಾಚನ, ಮಹಾಸಂಕಲ್ಪ, ನವಕುಂಭಾರಾಧನೆ, ರಾಮತಾರಕ ಹೋಮ, ಪಂಚಸೂಕ್ತ ಹೋಮ, ಪರಿವಾರಹೋಮ, ಮಹಾಪೂರ್ಣಾಹುತಿ, ಬೆಳಗ್ಗೆ 9.30ಕ್ಕೆ ಉತ್ಸವ ಮೂರ್ತಿಗೆ ಸ್ನಪನ ತಿರುಮಂಜನಂ, ವಿಷ್ಣು ಸಹಸ್ರನಾಮ ಪಾರಾಯಣ, ವೇದ ಪಾರಾಯಣ, ದಿವ್ಯ ಪ್ರಬಂಧ ಪಾರಾಯಣ, ಶ್ರೀರಾಮ ಪಟ್ಟಾಭಿಷೇಕ, ಮಹಾಮಂಗಳಾರತಿ, ಶಾತ್ತುಮುರೈ ಹಾಗೂ ತೀರ್ಥಪ್ರಸಾದ ವಿನಿಯೋಗ, ರಾತ್ರಿ 8.30ಕ್ಕೆ ಶ್ರೀ ವೈಷ್ಣವ ಸಮುದಾಯದ ಮಹಿಳಾ ವಿಭಾಗದ ವನಿತಾ ಎಂಪವರ್‌ಮೆಂಟ್ ತಂಡದವರಿಂದ ದೇವರನಾಮ ಹಾಗೂ ಕು. ಚೈತನ್ಯ ಹಾಗೂ ಮಕ್ಕಳಿಂದ ನೃತ್ಯ ಕಾರ್ಯಕ್ರಮ

ಬೃಹತ್ ಮರಗಳ ಬಲಿ ಪಡೆದಿದ್ದನ್ನು ಹೀಗೂ ವಿರೋಧಿಸುವುದುಂಟೇ...!

ಮುಂದೆ ಬೆಳೆಯುವ ಸಸಿಗಳಿಗೂ ಆಪತ್ತು ಕಾದಿದೆ!



ಮೈಸೂರು, ಏ.17– ರಸ್ತೆ ಅಗಲೀಕರಣಕ್ಕಾಗಿ 40ಕ್ಕೂ ಅಧಿಕ ಮರಗಳನ್ನು ರಾತ್ರೋರಾತ್ರಿ ಹನನ ಮಾಡಿದ್ದಕ್ಕೆ ಎಲ್ಲೆಡೆ ಆಕ್ರೋಶ ಭುಗಿಲೆದ್ದಿದೆ. ಹಾಗೆಯೇ ಪ್ರತಿಭಟನೆ ರೂಪದಲ್ಲಿ ಅಸಂಬದ್ಧವಾಗಿ ಗಿಡಗಳನ್ನು ನೆಟ್ಟಿರುವುದಕ್ಕೂ ಆಕ್ಷೇಪ ವ್ಯಕ್ತವಾಗಿದೆ.

ಮೈಸೂರಿನ ಎಸ್ಪಿ ಕಚೇರಿಯಿಂದ ಕಾಳಿಕಾಂಬ ದೇವಾಲಯದವರೆಗೆ ಹೈದರ್ ಅಲಿ ರಸ್ತೆಯನ್ನು ಅಗಲೀಕರಣಗೊಳಿಸುವ ಸಲುವಾಗಿ ರಾತ್ರೋರಾತ್ರಿ 40ಕ್ಕೂ ಹೆಚ್ಚು ಮರಗಳನ್ನು ಕಡಿದು ಹಾಕಲಾಗಿದೆ. ಹಸಿರಿನ ಸೊಬಗು, ತಂಪಾದ ಗಾಳಿಯಿಂದ ಸೊಗಸಾಗಿದ್ದ ರಸ್ತೆ ಈಗ ಬಟಾಬಯಲಾಗಿದೆ. ಮೈಸೂರು ನಗರ ಪಾಲಿಕೆ ಮತ್ತು ಅರಣ್ಯ ಇಲಾಖೆಯವರ ಮರಗಳ ಮಾರಣ ಹೋಮ ನಿರ್ಧಾರ ಪ್ರತಿಯೊಬ್ಬ ನಾಗರಿಕನನ್ನೂ ಘಾಸಿಗೊಳಿಸಿದೆ. ಪರಿಣಾಮ ಒಂದಲ್ಲಾ ಒಂದು ರೀತಿಯಲ್ಲಿ ಪ್ರತಿಭಟನೆ ಜೊತೆಗೆ ಆಕ್ರೋಶ ವ್ಯಕ್ತವಾಗುತ್ತಿದೆ.

ಈ ನಡುವೆ ಕೆಲವರು ಪ್ರತಿಭಟನೆ ನೆಪದಲ್ಲಿ ಪುಟ್ಟ ಸಸಿಗಳ ಜೀವದ ಜೊತೆ ಚೆಲ್ಲಾಟವಾಡಿದ್ದಾರೆ. ಕೆಲವರ ಬುದ್ಧಿಗೇಡಿತನಕ್ಕೆ ಬಲಿಯಾದ ಬೃಹತ್ ಮರಗಳ ಬುಡಗಳ ನೇರಕ್ಕೆ ಕರ್ನಾಟಕ ಪೊಲೀಸ್ ಅಕಾಡೆಮಿ(ಕೆಪಿಎ) ಕಾಂಪೌಂಡ್ ಪಕ್ಕದಲ್ಲಿ ಗಿಡಗಳನ್ನು ನೆಟ್ಟು, ನೀರೆರೆದಿದ್ದಾರೆ. ಸೂಕ್ತ ಜಾಗದಲ್ಲಿ ಗಿಡ ನೆಟ್ಟು ಪೋಷಿಸಿದ್ದರೆ ನಿಜಕ್ಕೂ ಇದು ಶ್ಲಾಘನೀಯ ಕಾರ್ಯವಾಗುತ್ತಿತ್ತು ಆದರೀಗ ಮನಬಂದಂತೆ ಗಿಡ ನೆಟ್ಟಿರುವುದು ಪರಿಸರ ಪ್ರೇಮಿಗಳ ಮನಸ್ಸಿಗೆ ಘಾಸಿ ಉಂಟು ಮಾಡಿದೆ.

ಕೆಲವರ ಬೇಜವಾಬ್ದಾರಿ ನಿರ್ಧಾರಕ್ಕೆ ಬಲಿಯಾದ ಮರಗಳ ಬುಡದಲ್ಲಿ ಗಿಡ ನೆಡುವ ಧೈರ್ಯ ತೋರಿಲ್ಲ. ಬದಲಾಗಿ ಕರ್ನಾಟಕ ಪೊಲೀಸ್ ಅಕಾಡೆಮಿ ಕಾಂಪೌಂಡ್ ಪಕ್ಕದಲ್ಲಿ ಗಿಡ ನೆಟ್ಟಿರುವುದು ಪರಿಸರ ಪ್ರೇಮಿಗಳಿಗೆ ಗಾಯದ ಮೇಲೆ ಬರೆ ಎಳೆದಂತಾಗಿದೆ. ಕಾಂಪೌಂಡ್‌ನ ಒಳಭಾಗದಲ್ಲಿ ದೊಡ್ಡ ಮರಗಳಿರುವುದರಿಂದ ಈ ಪುಟ್ಟ ಗಿಡಗಳ ಬೆಳವಣಿಗೆ ಕಷ್ಟವಾಗಬಹುದು. ಒಂದು ವೇಳೆ ಗಿಡಗಳು ಉಳಿದು, ಬೆಳೆದರೆ ಪಕ್ಕದಲ್ಲೇ ಇರುವ ವಿದ್ಯುತ್ ಲೈನ್‌ಗೆ ಅವುಗಳ ರೆಂಬೆ ತಾಕುತ್ತವೆ. ಹಾಗೆಯೇ ಬೆಳೆದ ಸಸಿಗಳಿಂದ ಕೆಪಿಎ ಕಾಂಪೌಂಡ್ ಗೋಡೆಗೂ ಅಪಾಯವಿದೆ. ಏಕಾಏಕಿ ಬೃಹತ್ ಮರಗಳನ್ನು ನಿರ್ದಯವಾಗಿ ಕಡಿದು ಹಾಕಿರುವುದನ್ನು ಅರಗಿಸಿಕೊಳ್ಳುವುದು ಕಷ್ಟ. ಈ ವೇಳೆ ಪ್ರತಿಭಟಿಸುವ ಭರದಲ್ಲಿ ಪುಟ್ಟ ಗಿಡಗಳ ಬಲಿ ಪಡೆಯುವುದು ಎಷ್ಟು ಸರಿ? ಎಂಬ ಪ್ರಶ್ನೆ ಮೂಡಿದೆ.

ಬಸ್‌ನಲ್ಲಿ ಶಿಕ್ಷಕಿ ಸರ ಕಳವು

ಮೈಸೂರು, ಏ.17– ರಶ್ ಇದ್ದ ಬಸ್‌ನಲ್ಲಿ ಶಿಕ್ಷಕಿಯ ಮಾಂಗಲ್ಯ ಸರ ಕಳವು ಮಾಡಿರುವ ಬಗ್ಗೆ ಮೈಸೂರಿನ ದೇವರಾಜ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹೂಟಗಳ್ಳಿ, ಕೆಹೆಚ್‌ಬಿ ಕಾಲೋನಿಯ ನಿವಾಸಿ ಬಿ.ಎನ್.ರಾಣಿ(41) ಅವರ ಕೊರಳಲ್ಲಿದ್ದ ಸುಮಾರು ಒಂದೂವರೆ ಲಕ್ಷರೂ. ಮೌಲ್ಯದ 30 ಗ್ರಾಂ ಚಿನ್ನದ ಮಾಂಗಲ್ಯ ಸರ ಕಳ್ಳರ ಪಾಲಾಗಿದೆ. ಉತ್ತರ ಪತ್ರಿಕೆ ಮೌಲ್ಯಮಾಪನ ಕಾರ್ಯಕ್ಕಾಗಿ ಲಕ್ಷ್ಮೀಪುರಂನಲ್ಲಿರುವ ಮೌಲ್ಯಮಾಪನ ಕೇಂದ್ರಕ್ಕೆ ಬಂದಿದ್ದ ಶಿಕ್ಷಕಿ ರಾಣಿ, ಮಂಗಳವಾರ ಸಂಜೆ ನಗರ ಬಸ್ ನಿಲ್ದಾಣದಲ್ಲಿ ಬಸ್ ಹತ್ತಿ ಹೂಟಗಳ್ಳಿ ಸಿಗ್ನಲ್ ಬಳಿ ಇಳಿದುಕೊಂಡಿದ್ದಾರೆ. ಆ ವೇಳೆ ಕೊರಳಲ್ಲಿದ್ದ ಮಾಂಗಲ್ಯ ಸರ ಇಲ್ಲದಿರುವುದು ಗೊತ್ತಾಗಿದೆ. ಬಸ್ ಹತ್ತುವಾಗ ತುಂಬಾ ರಶ್ ಇತ್ತು. ಆ ವೇಳೆಯೇ ಯಾರೋ ಕಳ್ಳತನ ಮಾಡಿರಬಹುದು ಎಂದು ಅವರು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ವೈವಿಧ್ಯಮಯ ಸಂಗೀತ ಕಾರ್ಯಕ್ರಮ 'ನಲವತ್ತರ ನಲಿವು'

●'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕ ಡಾ.ಕೆ.ಬಿ.ಗಣಪತಿ ಅವರಿಂದ ಚಾಲನೆ ●ಸುಗಮ ಸಂಗೀತದಲ್ಲಿ ಜೀವನದ ನೀತಿ ಪಾಠವೂ ಇದೆ: ಡಾ.ಕೆಬಿಜಿ ಅಭಿಮತ

ಮೈಸೂರು, ಏ.17(ಎಂಕೆ)– ಮೈಸೂರಿನ ಕುವೆಂಪುನಗರದಲ್ಲಿರುವ ಗಾನಭಾರತಿ ರಮಾಗೋವಿಂದ ರಂಗಮಂದಿರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಸುಗಮ ಸಂಗೀತ ಅಕಾಡೆಮಿ ಟ್ರಸ್ಟ್ ವತಿಯಿಂದ ಆಯೋಜಿಸಿರುವ ನಾಲ್ಕು ದಿನಗಳ 'ನಲವತ್ತರ ನಲಿವು' ವೈವಿಧ್ಯಮಯ ಸಂಗೀತ ಕಾರ್ಯಕ್ರಮಗಳಿಗೆ ಗುರುವಾರ ಚಾಲನೆ ದೊರೆಯಿತು.

ದೀಪ ಬೆಳಗಿಸುವ ಮೂಲಕ ವೈವಿಧ್ಯಮಯ ಸಂಗೀತ ಕಾರ್ಯಕ್ರಮಗಳಿಗೆ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ(ಡಾ.ಕೆಬಿಜಿ) ಅವರು ವಿಧ್ಯುಕ್ತ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಸುಗಮ ಸಂಗೀತದಲ್ಲಿ ಸಂಗೀತ ಮಾತ್ರವಲ್ಲದೇ ಸಾಹಿತ್ಯವೂ ಅಡಗಿದೆ. ಜೀವನಕ್ಕೆ ಅಗತ್ಯವಿರುವ ನೀತಿ ಪಾಠವು ಸುಗಮ ಸಂಗೀತದಲ್ಲಿದೆ. ಆದ್ದರಿಂದಲೇ ಎಲ್ಲರ ಮನಸ್ಸು ಸುಗಮ ಸಂಗೀತವನ್ನು ಬಯಸುತ್ತದೆ ಎಂದು ತಿಳಿಸಿದರು.

ಸುಗಮ ಸಂಗೀತ ಕ್ಷೇತ್ರದ ಮಹಾನ್ ಸಂಗೀತ ಗಾಯಕರಾದ ಹೆಚ್.ಆರ್.ಲೀಲಾವತಿ ಅವರ ಸಾರ್ಥಕ ಸೇವೆ ಹಾಗೂ ಅವರು ಸ್ಥಾಪಿಸಿದ ಸುಗಮ ಸಂಗೀತ ಅಕಾಡೆಮಿಯ ಸೇವೆ ಕೂಡ ಮಹತ್ತರವಾದುದು. ಅಲ್ಲದೆ ಈ ಕಾರ್ಯಕ್ರಮವು ಸುಗಮ ಸಂಗೀತ ಕ್ಷೇತ್ರದಲ್ಲಿನ ದೊಡ್ಡ ಮೈಲುಗಲ್ಲಾಗಿದೆ. ಸಂಗೀತ ಕ್ಷೇತ್ರದಲ್ಲಿ ಶಾಸ್ತ್ರೀಯ ಸಂಗೀತ, ಸುಗಮ ಸಂಗೀತ ಸೇರಿದಂತೆ ಹಲವು ಪ್ರಕಾರಗಳಿವೆ. ಆದರೆ ಜನರ ಆಸಕ್ತಿ ಯಾವುದು ಎಂಬುದನ್ನು ತಿಳಿದುಕೊಳ್ಳುವುದು ಅವಶ್ಯವಾಗಿದೆ ಎಂದರು.

ಸಾಧನೆ ಸುಲಭವಲ್ಲ ಅದೊಂದು ತಪಸ್ಸು ಆ ತಪಸ್ಸನ್ನು ನಮ್ಮ ಹೆಚ್.ಆರ್.ಲೀಲಾವತಿ ಅವರು ಮಾಡಿದ್ದಾರೆ. ಅವರು ಸಂಗೀತಗಾರರು ಎಂದು ಮಾತ್ರ ತಿಳಿದಿದ್ದೆ ಈಗ ಅವರು ಬರಹಗಾರರು ಎಂಬುದು ಕೂಡ ತಿಳಿಯಿತು. ನಾನು ತಿಳಿದಂತೆ ಹೆಚ್.ಆರ್.ಲೀಲಾವತಿ ಅವರು ನಮ್ಮ ನಾಡಗೀತೆಗೆ ಮೊಟ್ಟ ಮೊದಲು ರಾಗ ಸಂಯೋಜನೆ ಮಾಡಿದವರು ಎಂದು ತಿಳಿದಿದೆ. ಅದನ್ನು ಅವರೇ ಹೇಳಬೇಕು. ಸುಗಮ ಸಂಗೀತ ಕ್ಷೇತ್ರದಲ್ಲಿ ಬಹಳ ಎತ್ತರಕ್ಕೆ ಬೆಳೆದಿರುವ ಹೆಚ್.ಆರ್.ಲೀಲಾವತಿ ಅವರಷ್ಟು ಎತ್ತರಕ್ಕೆ ಬೇರೆ ಯಾರಾದರೂ ಬೆಳೆಯುತ್ತಾರೆಂಬುದು ಅನುಮಾನವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಾಹಿತ್ಯ–ಸಂಗೀತದ ನಡುವಿನ ಸಂಬಂಧ: ಇದೇ ವೇಳೆ ಸುಗಮ ಸಂಗೀತ ಅಕಾಡೆಮಿ ಸಂಸ್ಥಾಪಕರಾದ ಹೆಚ್.ಆರ್.ಲೀಲಾವತಿ ರಚಿತ 'ಗಾನಯಾನ– ಕಾವ್ಯ ಮಿಲನ(ನೆನಪಿನ ಕನ್ನಡಿಯಲ್ಲಿ ಕಂಡ ಮುಖಗಳು) ಕೃತಿಯನ್ನು ಲೇಖಕಿ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರದ ಮಾಜಿ ಅಧ್ಯಕ್ಷರಾದ ವಸುಂಧರಾ ಭೂಪತಿ ಲೋಕಾರ್ಪಣೆಗೊಳಿಸಿದರು. ನಂತರ ಮಾತನಾಡಿದ ಅವರು, ಸಾಹಿತ್ಯ ಮತ್ತು ಸಂಗೀತದ ನಡುವಿನ ಸಂಬಂಧವನ್ನು ತಿಳಿಸುವ 'ಗಾನ ಯಾನ–ಕಾವ್ಯ ಮಿಲನ' ಕೃತಿಯು ಪುಸ್ತಕ ಲೋಕದಲ್ಲಿ ಅಪರೂಪವಾಗಿ ನಿಲ್ಲುತ್ತದೆ ಎಂದು ಅಭಿನಂದಿಸಿದರು.

ಗಾಯಕಿಯೊಬ್ಬರು ಸಾಹಿತ್ಯದ ಬಗ್ಗೆ ಬರೆದಿರುವುದು ವಿಶೇಷ. ಒಂದು ಪ್ರಕಾರದಿಂದ ಇನ್ನೊಂದು ಪ್ರಕಾರದ ಕಲ್ಪನೆ ಅನನ್ಯವಾದುದು. ಎರಡು ವ್ಯಕ್ತಿತ್ವದ ನೆಲೆಗಳು ಒಂದೇ ಎಂಬುದನ್ನು ತಿಳಿಸುತ್ತದೆ. 18 ಸಾಹಿತಿಗಳ ಕಾವ್ಯಯಾನ ಈ ಕೃತಿಯಲ್ಲಿದೆ. ಕವಿ ಮತ್ತು ಕವಿತ್ವ ಧ್ವನಿಸುವ ನಿಟ್ಟಿನಲ್ಲಿರುವ ಶೀರ್ಷಿಕೆಗಳು ಅದ್ಭುತ. ಕೃತಿಯು ಕವಿಗಳ ಸಜ್ಜನಿಕೆಯನ್ನು ಹೇಳುತ್ತದೆ. ಆದರೆ, ಇವತ್ತು ಇದೆಲ್ಲವನ್ನೂ ಕಳೆದುಕೊಳ್ಳುತ್ತಿದ್ದೇವೆ. ಒಂದು ಲೈಕ್ ಬರದಿದ್ದರೆ ಬೇಸರಗೊಳ್ಳುತ್ತೇವೆ. ಇಂದಿನ ಯುವಕ, ಯುವತಿಯರು ಈ ಪುಸ್ತಕವನ್ನು ಓದಬೇಕು ಎಂದು ಮನವಿ ಮಾಡಿದರು.

ಹಾಡಿನಂತಾಗಿದ್ದಾರೆ!: ಕೃತಿ ಕುರಿತು ಮಾತನಾಡಿದ ಬಹುರೂಪಿ ಪ್ರಕಾಶನ ಸಂಸ್ಥಾಪಕ, ಹಿರಿಯ ಪತ್ರಕರ್ತ ಜಿ.ಎನ್.ಮೋಹನ್, ಇವತ್ತು ಎಲ್ಲೇ ನೋಡಿದರೂ ಬರೀ ಮಾತೇ ತುಂಬಿದ್ದು, ಮನೆ, ದೇಶವನ್ನು ಒಡೆಯುತ್ತಿದೆ. ಇಂಥ ಸನ್ನಿವೇಶದಲ್ಲಿ ಹಾಡಿನ ಮೂಲಕ ದೇಶವನ್ನು ಜೋಡಿಸಲು ಹೊರಟವರು ಎಚ್.ಆರ್.ಲೀಲಾವತಿ. 16ನೇ ವರ್ಷದಿಂದ ಹಾಡನ್ನು ಹಾಡಲು ಶುರು ಮಾಡಿದ್ದಾರೆ. ಅಳತೆಗೂ ಮೀರಿದ ಹಾಡುಗಳು ಅವರಿಂದ ಕೇಳಿಬಂದಿದ್ದು, ಅವರೇ ಒಂದು ಹಾಡಿನಂತಾಗಿದ್ದಾರೆ ಎಂದು ಬಣ್ಣಿಸಿದರು.

ಸಂಗೀತ ಕಾರ್ಯಕ್ರಮ: ವೇದಿಕೆ ಕಾರ್ಯಕ್ರಮದ ಬಳಿಕ ಸುಗಮ ಸಂಗೀತ ಅಕಾಡೆಮಿ ಶಿಷ್ಯವೃಂದದಿಂದ ಸಂಗೀತ ಕಾರ್ಯಕ್ರಮ ನೆರೆದಿದ್ದವರ ಮನಸೆಳೆಯಿತು. 10ಕ್ಕೂ ಹೆಚ್ಚು ಇಂಪಾದ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡಿ ರಂಜಿಸಿದರು. ಮ್ಯಾಂಡೋಲಿನ್ ವಾದನದಲ್ಲಿ ಸಿ.ವಿಶ್ವನಾಥ್, ಕೀ ಬೋರ್ಡ್ ಪುರುಷೋತ್ತಮ ಕಿರಗಸೂರು, ತಬಲ ಭೀಮಾ ಶಂಕರ್ ಹಾಗೂ ರಿದಂ ಪ್ಯಾಡ್‌ನಲ್ಲಿ ವಿನಯ್ ರಂಗಧೋಲ್ ಉತ್ತಮ ವಾದ್ಯ ಸಹಕಾರ ನೀಡಿದರು. ಸುಗಮ ಸಂಗೀತ ಅಕಾಡೆಮಿ ಅಧ್ಯಕ್ಷ ಟಿ.ಆರ್.ಹರೀಶ್, ಗೌರವ ಕಾರ್ಯದರ್ಶಿ ಪ್ರತಿಭಾ ಗುರುರಾಜ್, ರೂಪ ಗುರುರಾಜ್ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನ ಕುವೆಂಪುನಗರದ ಗಾನಭಾರತಿ ರಮಾಗೋವಿಂದ ರಂಗಮಂದಿರದಲ್ಲಿ ನಾಲ್ಕು ದಿನಗಳ 'ನಲವತ್ತರ ನಲಿವು' ವೈವಿಧ್ಯಮಯ ಸಂಗೀತ ಕಾರ್ಯಕ್ರಮಗಳಿಗೆ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕ ಡಾ.ಕೆ.ಬಿ.ಗಣಪತಿ(ಡಾ.ಕೆಬಿಜಿ) ಗುರುವಾರ ಚಾಲನೆ ನೀಡಿದರು. (ಎಡದಿಂದ) ಹಿರಿಯ ಪತ್ರಕರ್ತ ಜಿ.ಎನ್.ಮೋಹನ್, ಕನ್ನಡ ಪುಸ್ತಕ ಪ್ರಾಧಿಕಾರದ ಮಾಜಿ ಅಧ್ಯಕ್ಷರಾದ ವಸುಂಧರಾ ಭೂಪತಿ, ಸುಗಮ ಸಂಗೀತ ಅಕಾಡೆಮಿ ಟ್ರಸ್ಟ್ ಸಂಸ್ಥಾಪಕರಾದ ಹೆಚ್.ಆರ್.ಲೀಲಾವತಿ, ಅಧ್ಯಕ್ಷ ಟಿ.ಆರ್.ಹರೀಶ್ ಉಪಸ್ಥಿತರಿದ್ದರು

ಸಂಗೀತ ಕ್ಷೇತ್ರದಲ್ಲಿ ಬೆಳೆಯಲು ತಾಳ್ಮೆ ಅವಶ್ಯ...

ಸಂಗೀತ ಕ್ಷೇತ್ರದಲ್ಲಿ ಕೆಲಸ ಮಾಡಿ, ಬೆಳೆಯಬೇಕಾದರೆ ತುಂಬಾ ತಾಳ್ಮೆ ಇರಬೇಕು. ಭೀಮಸೇನ ಜೋಷಿಯವರು ಚಿಕ್ಕವಯಸ್ಸಿನಲ್ಲಿ ಸಂಗೀತ ಕಲಿಯಲು ಗುರುಗಳೊಬ್ಬರ ಬಳಿಗೆ ಹೋದಾಗ ಅವರು ನೀರು ತರಲು ಹೇಳಿದಕ್ಕೆ ನಾನು ನೀರು ತರಲು ಬರಲಿಲ್ಲ. ಸಂಗೀತ ಕಲಿಯಲು ಬಂದೆ ಎಂದರಂತೆ. ಅದಕ್ಕೆ ಆ ಗುರುಗಳು ನೀನು ಸಂಗೀತ ಕಲಿಯಲೇಬೇಕಾದರೆ ಮೊದಲು ನೀರು ತರುವ ಕೆಲಸ ಮಾಡು ಎಂದರಂತೆ. ಅದಕ್ಕೆ ಭೀಮಸೇನ ಜೋಷಿ ಸುಮಾರು ಐದಾರು ತಿಂಗಳ ಕಾಲ ನೀರು ಹೊರುವ ಕೆಲಸ ಮಾಡಿದ ನಂತರ ಅವರಿಗೆ ಸಂಗೀತ ಹೇಳಿಕೊಡಲಾಯಿತು. ನಂತರ ಅವರು ಸಂಗೀತ ಕ್ಷೇತ್ರದಲ್ಲಿ ಸಾಧನೆ ಮಾಡಿದರು. ಆದ್ದರಿಂದ ಸಂಗೀತ ಕ್ಷೇತ್ರದಲ್ಲಿ ಸಾಧನೆ ಮಾಡಬೇಕೆಂದರೆ ತಾಳ್ಮೆ ಬಹಳ ಮುಖ್ಯ.

- ಡಾ.ಕೆ.ಬಿ.ಗಣಪತಿ, ಸಂಸ್ಥಾಪಕ ಸಂಪಾದಕರು, 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್'

1985ರಲ್ಲಿ ಪ್ರಾರಂಭಗೊಂಡ ಸುಗಮ ಸಂಗೀತ ಅಕಾಡೆಮಿಗೆ 40 ವರ್ಷ ಆಯ್ತು. ಮುಖ್ಯವಾಗಿ ಸುಗಮ ಸಂಗೀತವಾದರೂ ಬೇರೆ ಎಲ್ಲಾ ಕಲಾ ಪ್ರಕಾರಗಳಿಗೂ ಅವಕಾಶ ಮಾಡಿಕೊಡಲಾಗುತ್ತಿದೆ. ಗಂಗೆಯ ಹೊನಲಂತೆ ಹರಿದುಕೊಂಡು ಬರುತ್ತಿದೆ. ಹಿಂದೂಸ್ತಾನಿ, ಕರ್ನಾಟಕ ಸಂಗೀತ, ಹಾಸ್ಯ ಕಾರ್ಯಕ್ರಮಗಳು ಸೇರಿದಂತೆ ಎಲ್ಲಾ ವಲಯಗಳಿಗೆ ಆದ್ಯತೆ ನೀಡಲಾಗಿದ್ದು ಮೈಸೂರಿನ ಜನತೆಯ ಪ್ರೋತ್ಸಾಹದಿಂದ 40 ವರ್ಷ ನಡೆದುಕೊಂಡು ಬಂದಿದೆ.

- ಹೆಚ್.ಆರ್.ಲೀಲಾವತಿ, ಸಂಸ್ಥಾಪಕರು, ಸುಗಮ ಸಂಗೀತ ಅಕಾಡೆಮಿ

ಮೂರನೇ ಪುಟದಿಂದ

ತೀವ್ರ ಬೇಸರ; ಏ.23ಕ್ಕೆ ತೀರ್ಪು

ಇಂದಿನ ವಿಚಾರಣೆ ವಿವರ: ಕೊಲೆಯಾಗಿದ್ದಾಳೆ ಎಂದು ಪೊಲೀಸರಿಂದ ಪ್ರತಿಪಾದಿಸಲ್ಪಟ್ಟ ಸುರೇಶ್ ಪತ್ನಿ ಏ.1ರಂದು ಮಡಿಕೇರಿಯಲ್ಲಿ ಜೀವಂತ ಪತ್ತೆಯಾಗಿದ್ದು, ಆಕೆಯನ್ನು ಸುರೇಶ್ ಪರ ವಕೀಲ ಪಾಂಡು ಪೂಜಾರಿ ಕೋರಿಕೆ ಮೇರೆಗೆ ನ್ಯಾಯಾಧೀಶರ ಆದೇಶದಂತೆ ಏ.2ರಂದು ಬೈಲುಕುಪ್ಪೆ ಠಾಣೆ ಪೊಲೀಸರು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದರು. ಮರು ದಿನವೇ ಜಿಲ್ಲಾ ಎಸ್‌ಪಿ ವಿಷ್ಣುವರ್ಧನ್ ಅವರನ್ನು ನ್ಯಾಯಾಲಯಕ್ಕೆ ಕರೆಸಿದ್ದ ನ್ಯಾಯಾಧೀಶರು, ಈ ಪ್ರಕರಣದ ಬಗ್ಗೆ ವರದಿ ಸಲ್ಲಿಸುವಂತೆ ಆದೇಶಿಸಿ, ಇಂದಿಗೆ (ಏ.17) ವಿಚಾರಣೆ ಮುಂದೂಡಿದ್ದರು.

ನ್ಯಾಯಾಲಯದ ಆದೇಶದಂತೆ ಪ್ರಕರಣದ ಬಗ್ಗೆ ತನಿಖೆ ಮಾಡಿ ಜಿಲ್ಲಾ ಎಸ್‌ಪಿ ವಿಷ್ಣುವರ್ಧನ್ ಸಿದ್ಧಪಡಿಸಿದ್ದ ವರದಿಯನ್ನು ಬೈಲುಕುಪ್ಪೆ ಠಾಣೆಯ ಸರ್ಕಲ್ ಇನ್ಸ್‌ಪೆಕ್ಟರ್ ದೀಪಕ್ ಅವರು ಎಸ್ಪಿ ಅವರ ಪರವಾಗಿ ಇಂದು ನ್ಯಾಯಾಲಯಕ್ಕೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿದರು. ಈ ವೇಳೆ ಪ್ರಕರಣದ ತನಿಖಾಧಿಕಾರಿಗಳಾದ ಬಿ.ಜಿ.ಪ್ರಕಾಶ್, ಪ್ರಕಾಶ್ ಎತ್ತಿನಮನೆ, ಮಹೇಶ್ ಕುಮಾರ್ ನ್ಯಾಯಾಲಯದಲ್ಲಿ ಹಾಜರಿದ್ದರು.

ಎಸ್ಪಿ ನೀಡಿದ್ದ ವರದಿಯನ್ನು ತೆರೆದ ನ್ಯಾಯಾಲಯದಲ್ಲಿ ಓದಿದ ನ್ಯಾಯಾಧೀಶರು ಅಪೂರ್ಣಗೊಂಡಿರುವ ವರದಿ ನೀಡಿರುವ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಜೀವಂತ ಇದ್ದ ಮಹಿಳೆಯನ್ನು ಕೊಲೆಯಾಗಿರುವುದಾಗಿಯೂ, ಆಕೆಯನ್ನು ಗಂಡನೇ ಕೊಲೆ ಮಾಡಿದ್ದಾನೆಂದೂ ಈಗಾಗಲೇ ನ್ಯಾಯಾಲಯಕ್ಕೆ ಸಲ್ಲಿಸಿರುವ ಚಾರ್ಜ್‌ಶೀಟ್‌ನಲ್ಲಿರುವ ಅಂಶಗಳನ್ನೇ ವರದಿಯಲ್ಲಿ ತಿಳಿಸಿದ್ದೀರಾ. ಅದೂ ಅಲ್ಲದೆ ಒಂದಕ್ಕೊಂದು ಸಂಬಂಧವೇ ಇಲ್ಲದಾಗಿದೆ ಎಂದು ಪೊಲೀಸ್ ಅಧಿಕಾರಿಗಳನ್ನು ತೀವ್ರ ತರಾಟೆಗೆ ತೆಗೆದುಕೊಂಡರು.

ನಿಮ್ಮ ಕಣ್ಣ ಮುಂದೆಯೇ ಘಟನೆ ನಡೆದಿದೆ ಎಂಬಂತೆ ಬಿಂಬಿಸಿ ವರದಿ ನೀಡಿದ್ದೀರಾ. ಯಾವುದಕ್ಕೂ ಸಾಕ್ಷಿ, ಆಧಾರವಿಲ್ಲ. ತನಿಖಾಧಿಕಾರಿ ಬದಲು ಮತ್ಯಾರೋ ತನಿಖೆ ಮಾಡಿದಂತಿದೆ ಎಂದು ನ್ಯಾಯಾಧೀಶರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಸುರೇಶ್‌ನಿಂದ ಕೊಲೆಯಾದ ಪತ್ನಿ ಮಲ್ಲಿಗೆ ಕಾಣೆಯಾದ 20 ದಿನಕ್ಕೆ ಕೊಳೆತು ಗುರುತು ಸಿಗದ ಅಸ್ಥಿಪಂಜರದಂತೆ ಪತ್ತೆಯಾಗಿದ್ದಾಗಿ ಉಲ್ಲೇಖಿಸಿದ್ದೀರಾ. ಮಹಿಳೆ ಸತ್ತ ಕೇವಲ 20 ದಿನಕ್ಕೆ ಅಸ್ಥಿ ಪಂಜರವಾಗಲು ಸಾಧ್ಯವೇ? ಮೃತದೇಹವನ್ನು ನಾಯಿ ಸೇರಿದಂತೆ ಇತರೆ ಪ್ರಾಣಿಗಳು ಕಿತ್ತು ತಿಂದಿತ್ತು ಎಂಬ ಉಲ್ಲೇಖಿಸಿದ್ದೀರಾ. ಆದರೆ ಮೃತದೇಹದ ಮೇಲಿನ ಬಟ್ಟೆ ಒಂದು ಚೂರು ಹರಿದಿಲ್ಲ ಎಂಬ ವಿವರಣೆ ಕೂಡ ನೀಡಿದ್ದೀರಾ. ಬಟ್ಟೆ ಸ್ವಲ್ಪವೂ ಹರಿಯದ ಹಾಗೆ ಪ್ರಾಣಿಗಳು ಮೃತದೇಹ ತಿನ್ನಲು ಸಾಧ್ಯವೇ? ಎಂದು ಪೊಲೀಸ್ ಅಧಿಕಾರಿಗಳನ್ನು ಪ್ರಶ್ನಿಸಿದರು.

ಇದು ಪೊಲೀಸ್ ಪೇದೆ, ಮುಖ್ಯ ಪೇದೆ, ಎಎಸ್‌ಐ ತಯಾರಿಸಿರುವ ಚಾರ್ಜ್‌ಶೀಟ್‌ನಂತಿದೆ. ಸ್ಥಳ ಮಹಜರ್‌ಗೆ ಹೋಗದೆ ಯಾರನ್ನೊ ಕಳುಹಿಸಿ ತಯಾರಿಸಿರುವ ವರದಿಯಂತಿದೆ ಎಂದು ನ್ಯಾಯಾಧೀಶರಾದ ಗುರುರಾಜ ಸೋಮಕ್ಕಳವರ್ ಪೊಲೀಸರ ನಿರ್ಲಕ್ಷ್ಯತೆ ಬಗ್ಗೆ ತೀವ್ರ ಬೇಸರ ವ್ಯಕ್ತಪಡಿಸಿದರು.

ಪೊಲೀಸರ ಬಗ್ಗೆ ಅಪರಾಧಿಗಳಿಗೆ ಭಯವಿಲ್ಲ...

ಈ ಹಿಂದೆ ಕೊಲೆ ಸೇರಿದಂತೆ ಇತರೆ ಅಪರಾಧ ಕೃತ್ಯ ಎಸಗಲು ಜನರು ಹೆದರುತ್ತಿದ್ದರು. ಪೊಲೀಸರಿಗೆ ಸಿಕ್ಕಿ ಬಿದ್ದರೆ ನಾನು ಕೊಲೆ ಮಾಡಿಲ್ಲ ಎಂದು ವಾದ ಮಾಡುತ್ತಿದ್ದರು. ಆದರೆ, ಈಗ ಅಪರಾಧ ಮಾಡಿಯೂ ರಾಜಾರೋಷವಾಗಿ ಓಡಾಡುತ್ತಿರುವ ರಾಕ್ಷಸರು ನಾನೇ ಕೊಲೆ ಮಾಡಿದ್ದೇನೆ ಎಂದು ಬಹಿರಂಗವಾಗಿ ಹೇಳಿಕೊಳ್ಳುತ್ತಿದ್ದಾರೆ ಎಂದು ನ್ಯಾಯಾಧೀಶರಾದ ಗುರುರಾಜ ಸೋಮಕ್ಕಳವರ್ ಈಗಿನ ವ್ಯವಸ್ಥೆ ಬಗ್ಗೆ ತೀವ್ರ ಬೇಸರ ವ್ಯಕ್ತಪಡಿಸಿದರು.

ಮೊದಲು ಮರ್ಡರ್ ಮಾತ್ರ ಆಗುತ್ತಿತ್ತು. ಆದರೆ ಈಗ ಮರ್ಡರ್ ಮಾಡಿ ದೇಹವನ್ನು ಪೀಸ್ ಪೀಸ್ ಮಾಡಿ ಸೂಟ್‌ಕೇಸ್‌ನಲ್ಲಿ ತುಂಬಿ ಸಾಕ್ಷಿ ನಾಶ ಮಾಡುವ ಪ್ರಕರಣಗಳು ಬಯಲಾಗುತ್ತಿವೆ ಎಂದರು. ಕೊಲೆ ಮಾಡುವ ದೃಶ್ಯಗಳನ್ನು ವಿಡಿಯೋ ಮಾಡಿ ನಾನೇ ಕೊಲೆ ಮಾಡಿದ್ದೇನೆ ಎಂದು ಸೋಷಿಯಲ್ ಮೀಡಿಯಾದಲ್ಲಿ ಪೋಸ್ಟ್ ಮಾಡುವ ಬಹಳಷ್ಟು ಪ್ರಕರಣಗಳು ನಡೆಯುತ್ತಿವೆ. ಇದಕ್ಕೆ ಮೂಲ ಕಾರಣ ಪೊಲೀಸರ ಬಗ್ಗೆ ಅಪರಾಧಿಗಳಿಗೆ ಭಯವಿಲ್ಲದಿರುವುದು. ನೀವು (ಪೊಲೀಸರು) ಅಪರಾಧಿಗಳನ್ನು ನ್ಯಾಯಾಲಯಕ್ಕೂ ಹಾಜರುಪಡಿಸುವುದಿಲ್ಲ. ಈ ಕಾರಣದಿಂದ ರಾಕ್ಷಸರು ರಾಜಾರೋಷವಾಗಿ ಓಡಾಡುತ್ತಾರೆ. ಯಾವುದೋ ಒಂದು ಪ್ರಕರಣದಲ್ಲಿ ಪೊಲೀಸರು ಬೇಜವಾಬ್ದಾರಿ ತೋರುತ್ತಿಲ್ಲ. ಪ್ರತಿಯೊಂದು ಪ್ರಕರಣದಲ್ಲಿಯೂ ಇದೇ ಪರಿಸ್ಥಿತಿ ಇದೆ ಎಂದು ಬೇಸರ ವ್ಯಕ್ತಪಡಿಸಿದರು. ಪೊಲೀಸರು ಶೇಕಡ ಒಂದರಷ್ಟು ಮಾನವೀಯತೆ, ದಕ್ಷತೆ, ಪ್ರಾಮಾಣಿಕತೆ ತೋರಿದರೆ ಬಹಳಷ್ಟು ಬದಲಾವಣೆ ಮಾಡಬಹುದು. ಆದರೆ ಈ ಬಗ್ಗೆ ಬೇಜವಾಬ್ದಾರಿ ಕಾರಣ ಅಪರಾಧ ಕೃತ್ಯಗಳು ಹೆಚ್ಚಾಗಿ ನಡೆಯುತ್ತಿದೆ ಎಂದು ನ್ಯಾಯಾಧೀಶರಾದ ಗುರುರಾಜ ಸೋಮಕ್ಕಳವರ್ ಅಸಮಾಧಾನ ವ್ಯಕ್ತಪಡಿಸಿದರು.

ಪೊಲೀಸರಿಂದ ನಿಷ್ಪಕ್ಷಪಾತ ತನಿಖೆ ಸಾಧ್ಯವಿಲ್ಲ

ಈ ಪ್ರಕರಣದ ಬಗ್ಗೆ ನ್ಯಾಯಾಲಯ ಸ್ವಯಂ ಪ್ರೇರಣೆಯಿಂದ ಮೊಕದ್ದಮೆ ದಾಖಲಿಸಿಕೊಂಡು ತಪ್ಪಿತಸ್ಥ ಪೊಲೀಸ್ ಅಧಿಕಾರಿಗಳಿಗೆ ಶಿಕ್ಷೆ ನೀಡಬೇಕು ಎಂದು ಸುರೇಶ್ ಪರ ವಕೀಲ ಪಾಂಡು ಪೂಜಾರಿ ನ್ಯಾಯಾಧೀಶರಲ್ಲಿ ಮನವಿ ಮಾಡಿದರು.

ಮತ್ತೆ ಈ ಪ್ರಕರಣವನ್ನು ಪೊಲೀಸರಿಗೆ ವಹಿಸಿದರೆ ನಿಷ್ಪಕ್ಷಪಾತ ತನಿಖೆ ನಿರೀಕ್ಷೆ ಮಾಡಲು ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ನ್ಯಾಯಾಂಗ ತನಿಖೆ ನಡೆಸಬೇಕು ಎಂದು ಕೋರಿಕೊಂಡರು. ಯಾವುದೇ ತಪ್ಪು ಮಾಡದಿದ್ದರೂ ಜೈಲು ಶಿಕ್ಷೆ ಅನುಭವಿಸಿರುವ ಸುರೇಶ್‌ನನ್ನು ಆರೋಪ ಮುಕ್ತಗೊಳಿಸಿ, ಬಿಡುಗಡೆ ಮಾಡಬೇಕು ಎಂದು ಪ್ರಕರಣದ ಸರ್ಕಾರಿ ಅಭಿಯೋಜಕ ಯೋಗೇಶ್ ನ್ಯಾಯಾಧೀಶರಲ್ಲಿ ಕೋರಿದರು. ಈ ಪ್ರಕರಣದ ಬಗ್ಗೆ ನ್ಯಾಯಾಲಯವೇ ಸ್ವಯಂ ಪ್ರೇರಣೆಯಿಂದ ಮೊಕದ್ದಮೆ ದಾಖಲಿಸಿಕೊಳ್ಳುವ ಬಗ್ಗೆ ಏ.23 ರಂದು ನೀಡುವ ತೀರ್ಪಿನಲ್ಲಿ ನಿರ್ಧಾರ ಮಾಡಲಾಗುವುದು ಎಂದು ನ್ಯಾಯಾಧೀಶರಾದ ಗುರುರಾಜ ಸೋಮಕ್ಕಳವರ್ ಸ್ಪಷ್ಟಪಡಿಸಿದರು.

ಇದೇ ರೀತಿಯ ತನಿಖೆಯಿಂದ ವೈದ್ಯರೂ ಹಂತಕರಾಗಿದ್ದರು!

ಮೈಸೂರು, ಏ.17– ಬದುಕಿರುವ ತನ್ನ ಹೆಂಡತಿಯನ್ನು ಕೊಲೆ ಮಾಡಿದ ಆರೋಪದ ಮೇರೆಗೆ ಅಮಾಯಕ ಆದಿವಾಸಿ ಸುರೇಶ್ ಜೈಲು ಶಿಕ್ಷೆ ಅನುಭವಿಸಿದ್ದರೆ, ದಶಕದ ಹಿಂದೆ ತುಮಕೂರಿನ ವೈದ್ಯರೊಬ್ಬರು ಪೊಲೀಸರ ಪ್ರಮಾದದಿಂದಾಗಿ ಪತ್ನಿ ಕೊಂದ ಆರೋಪದ ಮೇರೆಗೆ ಜೈಲು ಶಿಕ್ಷೆ ಅನುಭವಿಸಿದ್ದು ಮಾತ್ರವಲ್ಲದೇ, ತಮ್ಮ ಘನತೆಯನ್ನೇ ಕಳೆದುಕೊಂಡಿದ್ದರು.

ಆಗಿದ್ದೇನೆಂದರೆ, ತುಮಕೂರಿನ ವೈದ್ಯರು ಕ್ಲಿನಿಕ್‌ಗೆ ಹೋಗಿದ್ದ ವೇಳೆ ಅವರ ಪತ್ನಿ ಬರ್ಬರವಾಗಿ ಹತ್ಯೆಗೀಡಾಗಿದ್ದರು. ಅವರ ಮೈಮೇಲಿದ್ದ ಚಿನ್ನಾಭರಣಗಳು ಕಳುವಾಗಿದ್ದವು. ಈ ಸಂಬಂಧ ವೈದ್ಯರು ಪೊಲೀಸರಿಗೆ ದೂರು ಸಲ್ಲಿಸಿದರೇ, ಅವರ ಪತ್ನಿಯ ಮನೆಯವರು ವರದಕ್ಷಿಣೆ ಕಿರುಕುಳ ನೀಡಿ ವೈದ್ಯರೆ ಆಕೆಯನ್ನು ಕೊಲೆ ಮಾಡಿದ್ದಾರೆ ಎಂದು ದೂರು ಸಲ್ಲಿಸಿದ್ದರು.

ಅಂದಿನ ರಾಜ್ಯ ಸರ್ಕಾರ ಪ್ರಕರಣವನ್ನು ಸಿಓಡಿಗೆ (ಇಂದಿನ ಸಿಐಡಿ)ವಹಿಸಿತ್ತು. ತನಿಖೆ ನಡೆಸಿದ ಸಿಓಡಿ ಪೊಲೀಸರು ವೈದ್ಯರೇ ಪತ್ನಿಯನ್ನು ಹತ್ಯೆ ಮಾಡಿದ್ದಾರೆ ಎಂದು ಚಾರ್ಜ್‌ಶೀಟ್ ಸಲ್ಲಿಸಿಬಿಟ್ಟರು. ನ್ಯಾಯಾಲಯದಲ್ಲಿ ವಿಚಾರಣೆ ಮುಗಿದು ನಿರಪರಾಧಿಯಾಗಿ ಹೊರಬಂದರೆ ಸಾಕು ಎಂದು ದೇವರಲ್ಲಿ ಪ್ರಾರ್ಥಿಸುತ್ತಿದ್ದರು. ಅಚ್ಚರಿ ಎಂಬಂತೆ ಬೆಂಗಳೂರು ನಗರ ಪೊಲೀಸರು ದಂಡುಪಾಳ್ಯ ಗ್ಯಾಂಗ್ ಹಂತಕರನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿದ ವೇಳೆ ಅವರು ತುಮಕೂರಿನ ವೈದ್ಯರ ಮನೆಗೂ ಪೊಲೀಸರನ್ನು ಕರೆದೊಯ್ದು ವೈದ್ಯರ ಪತ್ನಿಯ ಮೇಲೆ ಸಾಮೂಹಿಕ ಅತ್ಯಾಚಾರವೆಸಗಿ ಹತ್ಯೆ ಮಾಡಿರುವುದಾಗಿ ತಿಳಿಸಿದ್ದರು. ಇತ್ತ ವೈದ್ಯರು ನಿಟ್ಟುಸಿರು ಬಿಟ್ಟರೆ, ಅವರ ಪತ್ನಿಯ ಕುಟುಂಬದವರು ಅಳಿಯನ ಮೇಲೆ ಅನವಶ್ಯಕವಾಗಿ ದೂರು ಕೊಟ್ಟೆವಲ್ಲ ಎಂದು ಪರಿತಪಿಸುತ್ತಿದ್ದರು. ಇತ್ತ ವೈದ್ಯರ ಪರ ವಕೀಲರು, ತಮ್ಮ ಕಕ್ಷಿದಾರರ ಪತ್ನಿಯನ್ನು ದಂಡುಪಾಳ್ಯ ಗ್ಯಾಂಗ್‌ನವರು ಹತ್ಯೆ ಮಾಡಿದ್ದಾರೆ. ಹೀಗಾಗಿ ಅವರನ್ನು ಆರೋಪ ಮುಕ್ತರನ್ನಾಗಿ ಮಾಡಬೇಕೆಂದು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದರೆ, ಸಿಓಡಿ ಅಧಿಕಾರಿಗಳಂತೂ ನಾವು ಸಲ್ಲಿಸಿರುವ ಚಾರ್ಜ್‌ಶೀಟ್ ಸರಿಯಾಗಿದೆ. ವೈದ್ಯರೇ ಪತ್ನಿಯನ್ನು ಹತ್ಯೆ ಮಾಡಿದ್ದಾರೆ ಎಂದು ನ್ಯಾಯಾಲಯದಲ್ಲಿ ವಾದಿಸಲಾರಂಭಿಸಿದರು. ಈ ವಿಚಿತ್ರ ಪ್ರಕರಣದಲ್ಲಿ ಕೊನೆಗೂ ವೈದ್ಯರಿಗೆ ಮುಕ್ತಿ ದೊರೆತು ದಂಡುಪಾಳ್ಯ ಗ್ಯಾಂಗ್‌ನವರಿಗೆ ನ್ಯಾಯಾಲಯ ಗಲ್ಲುಶಿಕ್ಷೆ ವಿಧಿಸಿತ್ತು ಆದರೆ ಸಿಓಡಿ ಪೊಲೀಸರ ಪ್ರಮಾದದಿಂದಾಗಿ ಪ್ರಭಾವಿ ವೈದ್ಯರು ಅನಾವಶ್ಯಕವಾಗಿ ಜೈಲು ಶಿಕ್ಷೆ ಅನುಭವಿಸಿದ್ದು ಮಾತ್ರವಲ್ಲದೇ ತಮ್ಮ ಘನತೆ ಗೌರವವನ್ನು ಕಳೆದುಕೊಳ್ಳುವಂತಾಗಿತ್ತು.

ಬರೀ ಚರ್ಚೆ!

ಹೆಗಡೆ ನೇತೃತ್ವದ ಆಯೋಗ ವರದಿ ತಯಾರಿಸಿದೆ. ಈ ವೇಳೆ ಜಯಪ್ರಕಾಶ್ ಹೆಗಡೆ ಆರ್ಥಿಕ ಅಸಮಾನತೆ ತಿಳಿಯಲು ಸಿದ್ಧಪಡಿಸಿರುವ ಪ್ರಶ್ನಾವಳಿಗಳ ಬಗ್ಗೆ ತಮ್ಮ ವರದಿಯಲ್ಲಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ ಎಂದು ಸಭೆಯ ಗಮನಕ್ಕೆ ತಂದರು ಎಂದು ಗೊತ್ತಾಗಿದೆ. ಪ್ರಮುಖ ಜಾತಿಗಳ ಉಪಜಾತಿಗಳ ವಿವರಗಳನ್ನು ಸಂಗ್ರಹಿಸುವಲ್ಲಿ ಆಯೋಗ ಸೂಕ್ತ ಮಾನದಂಡಗಳನ್ನು ಪರಿಗಣಿಸಿಲ್ಲ. ಮನೆ ಮನೆ ಸಮೀಕ್ಷೆ ನಡೆಸಿ ನೀಡಿರುವ ಅಂಕಿ–ಅಂಶ ಮತ್ತು ವರದಿಯ ದತ್ತಾಂಶದ ಅಂಕಿ–ಅಂಶಗಳಲ್ಲಿ ವ್ಯತ್ಯಾಸವಿದೆ ಎಂಬುದನ್ನು ವಿವರವಾಗಿ ಸಭೆಯ ಗಮನಕ್ಕೆ ತಂದರು ಎಂದು ಮೂಲಗಳು ತಿಳಿಸಿವೆ.

ತೋಟಗಾರಿಕೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಅರಣ್ಯ ಸಚಿವ ಈಶ್ವರ ಖಂಡ್ರೆ ಅವರು ವರದಿಯಲ್ಲಿನ ಬಹುತೇಕ ಅಂಶಗಳ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ನಾವು ಯಾರೂ ಸಮೀಕ್ಷೆಗೆ ವಿರೋಧವಿಲ್ಲ. ಆದರೆ, ಈ ವರದಿಯಲ್ಲಿನ ಅಂಶಗಳನ್ನು ಒಪ್ಪಲು ಸಾಧ್ಯವಿಲ್ಲ. ಇದನ್ನು ಸರ್ಕಾರ ಒಪ್ಪಿದರೆ ದೊಡ್ಡ ರೀತಿಯ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ. ಹೀಗಾಗಿ ಮರು ಸಮೀಕ್ಷೆಗೆ ನಿರ್ಧಾರ ತೆಗೆದುಕೊಳ್ಳುವುದು ಉಚಿತ ಎಂದು ಹೇಳಿದರೆನ್ನಲಾಗಿದೆ.

ಈ ವೇಳೆ ಮಾತನಾಡಿದ ಕಾರ್ಮಿಕ ಮಂತ್ರಿ ಸಂತೋಷ್ ಲಾಡ್, ನೀವು ಹೇಳುತ್ತಿರುವ ಅಭಿಪ್ರಾಯ ಮೇಲ್ನೋಟಕ್ಕೆ ಸೂಕ್ತವೆನಿಸುತ್ತದೆ. ಆದರೆ ಅದೇ ಕಾರಣಕ್ಕೆ ವರದಿಯನ್ನು ತಿರಸ್ಕರಿಸುವುದು ಸರಿಯಲ್ಲ. ಅದರ ಬದಲಿಗೆ ಹಿರಿಯ ಅಧಿಕಾರಿಗಳು ಮತ್ತು ಸಾಮಾಜಿಕ ತಜ್ಞರ ಸಮಿತಿಯೊಂದನ್ನು ರಚನೆ ಮಾಡಿ ವರದಿಯ ಬಗ್ಗೆ ಅಧ್ಯಯನ ಮಾಡಲು ತಿಳಿಸೋಣ. ಅವರ ಅಭಿಪ್ರಾಯವನ್ನು ಆಧರಿಸಿ ಮತ್ತೆ ಸಂಪುಟ ಸಭೆಯಲ್ಲಿ ಚರ್ಚೆ ಮಾಡಬಹುದಾಗಿದೆ ಎಂದು ಹೇಳಿದರೆ, ಇನ್ನು ಕೆಲ ಮಂತ್ರಿಗಳು ತಾವು ಇನ್ನೂ ವರದಿಯನ್ನು ಸಂಪೂರ್ಣವಾಗಿ ಅಧ್ಯಯನ ಮಾಡಿಲ್ಲ ಅದಕ್ಕೆ ಇನ್ನಷ್ಟು ಸಮಯಾವಕಾಶ ಕೊಡಿ ಎಂದು ಮನವಿ ಮಾಡಿದ್ದಾರೆ.

ಇದಕ್ಕೆ ಸ್ಪಂದಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಎಲ್ಲಾ ಮಂತ್ರಿಗಳು ಮತ್ತೊಮ್ಮೆ ವರದಿಯ ಬಗ್ಗೆ ಸಮಗ್ರವಾಗಿ ಅಧ್ಯಯನ ನಡೆಸಿ ಲಿಖಿತ ಅಭಿಪ್ರಾಯದೊಂದಿಗೆ ಮುಂದಿನ ಸಂಪುಟ ಸಭೆಗೆ ಬನ್ನಿ. ಅಲ್ಲಿ ಎಲ್ಲವನ್ನು ಕೂಲಂಕಷವಾಗಿ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳೋಣ ಎಂದು ಸಲಹೆ ಮಾಡಿದ ಹಿನ್ನೆಲೆಯಲ್ಲಿ ಸಂಪುಟ ಯಾವುದೇ ತೀರ್ಮಾನ ಕೈಗೊಳ್ಳದೆ ಮುಂದೂಡಲ್ಪಟ್ಟಿದೆ.

ಅಂತಿಮ ತೀರ್ಮಾನ

ಶೈಕ್ಷಣಿಕ ಸಮೀಕ್ಷೆಯ ಸಂದರ್ಭದಲ್ಲಿ ಕೈಗೊಂಡ ಮಾನದಂಡಗಳ ವಿವರಗಳನ್ನು ಸ್ವಲ್ಪ ಮಟ್ಟಿಗೆ ಚರ್ಚಿಸಲಾಗಿದ್ದು, ಚರ್ಚೆ ಅಪೂರ್ಣವಾಗಿರುವುದರಿಂದ ಮುಂದಿನ ಸಚಿವ ಸಂಪುಟ ಸಭೆ ಏಪ್ರಿಲ್ 24 ರಂದು ಮಲೆಮಾದೇಶ್ವರ ಬೆಟ್ಟದಲ್ಲಿ ನಡೆಯುತ್ತಿದ್ದು, ಆಯಾ ಭಾಗದ ವಿಷಯಗಳು ಹೆಚ್ಚಾಗಿ ಚರ್ಚೆಗೆ ಬರುತ್ತದೆ. ಮೇ 2 ರಂದು ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ಚರ್ಚಿಸಿ ಅಂತಿಮ ತೀರ್ಮಾನಕ್ಕೆ ಬರಲು ಸಚಿವ ಸಂಪುಟ ನಿರ್ಧರಿಸಿದೆ ಎಂದರು.

ಸಮೀಕ್ಷೆಯ ಮಾನದಂಡಗಳ ಬಗ್ಗೆ ಚರ್ಚೆ: ಸಮೀಕ್ಷೆ ಮಾಡುವ ಸಂದರ್ಭದಲ್ಲಿ ಉತ್ಪನ್ನ ಮೂಲ ಹಾಗೂ ಕೈಗೊಂಡ ಮಾನದಂಡಗಳ ಬಗ್ಗೆ ಚರ್ಚೆ ಮಾಡಲಾಗಿದೆ. ಕೆಲವು ಹಿರಿಯ ಸಚಿವರು ಮಾರ್ಗದರ್ಶನ ಮಾಡಿದ್ದಾರೆ. ಮುಂದಿನ ಸಚಿವ ಸಂಪುಟದಲ್ಲಿ ಅಧಿಕಾರಿಗಳು ಅಗತ್ಯ ಮಾಹಿತಿಯನ್ನು ಒದಗಿಸಲಿದ್ದಾರೆ ಎಂದರು. ಈ ವರದಿ ಇತ್ತೀಚೆಗೆ ಸರ್ಕಾರದ ಕೈಸೇರಿದ್ದು ಮಾನದಂಡಗಳನ್ನು ಚರ್ಚಿಸಿದ್ದೇವೆ. ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಹಲವಾರು ಮಾನದಂಡಗಳನ್ನು ಚರ್ಚಿಸಿದ್ದೇವೆ ಎಂದು ಸಚಿವರು ಪುನರುಚ್ಚರಿಸಿದರು. ಜಾತಿ ಸಂಖ್ಯಾ ಬಲದ ಬಗ್ಗೆ ತಪ್ಪು ಗ್ರಹಿಕೆಗಳು ಹೊರ ಬೀಳುತ್ತಿದ್ದು, ಅವುಗಳು ಸರಿಯಾದ ವಿವರಗಳಲ್ಲ. 94.17% ಜನಸಂಖ್ಯೆಯನ್ನು ಸಮೀಕ್ಷೆಗೆ ಒಳಪಡಿಸಲಾಗಿದೆ ಎಂದರು. ಸಮೀಕ್ಷಾ ವರದಿಯ ಮಾಹಿತಿ ಪತ್ರಿಕೆಗಳಲ್ಲಿ ಈಗಾಗಲೇ ಬಂದಿದೆ. ಈಗಷ್ಟೇ ವರದಿ ಮಂಡನೆ ಯಾಗಿ ಚರ್ಚೆ ನಡೆದಿದೆ ಎಂದು ಸಚಿವರು ತಿಳಿಸಿದರು.

ಮುಸ್ಲಿಮರಲ್ಲೂ 93 ಜಾತಿ, ಉಪ ಜಾತಿಗಳಿವೆ

ಬೆಂಗಳೂರು, ಏ.17– ಹಿಂದೂಗಳಂತೆ ಮುಸ್ಲಿಮರಲ್ಲಿ 93 ಜಾತಿ, ಉಪಜಾತಿಗಳು ಜಾತಿ ಸಮೀಕ್ಷೆ ವೇಳೆ ಕಂಡುಬಂದಿರುವುದಾಗಿ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆ ಗುರುವಾರ ಹೇಳಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಸ್ಲೀಮರ ಮನವಿಯ ಮೇಲೆ ಅವುಗಳನ್ನೆಲ್ಲ ಪರಿಶೀಲಿಸಿ ನಾವು ತೀರ್ಮಾನ ತಗೊಂಡಿದ್ದೇವೆ ಎಂದರು. ಮುಸ್ಲಿಮರ ಉಪಜಾತಿಗಳನ್ನು ಒಂದೇ ಕಡೆ ತೋರಿಸಲಾಗಿದೆ. ಹಿಂದೂಗಳನ್ನು ಬೇರೆ ಬೇರೆ ತೋರಿಸಲಾಗಿದೆ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಮುಸ್ಲಿಮರನ್ನು ಒಂದೇ ಕಡೆಯಲ್ಲಿ ಸೇರಿಸಿದ್ದೇವೆ. ಆದಾಗ್ಯೂ, ಕೆಲವು ಬೇರೆ ಬೇರೆಯೂ ಇವೆ. ಕೆಲವರನ್ನು ಅಲೆಮಾರಿಯಲ್ಲೂ ಸೇರಿಸಲಾಗಿದೆ. ಈಗ ಪಿಂಜಾರ, ಪಿಂಜಾರ ಜಪ್ಪರ್ ಇವರೆಲ್ಲ ಇದ್ದಾರೆ ಎಂದು ಹೇಳಿದರು.

ರಾಜ್ಯ ಸರ್ಕಾರದಿಂದ ಸಿದ್ಧಪಡಿಸಲಾಗಿರುವ ಜಾತಿ ಗಣತಿ ವರದಿಯಲ್ಲಿ ಯಾವುದೇ ದೊಡ್ಡ ತಪ್ಪಿಲ್ಲ. ನನಗೆ ವರದಿ ಅಥವಾ ಸಂಗ್ರಹಿಸಲಾದ ಮಾಹಿತಿಯಲ್ಲಿ ಯಾವುದೇ ದೊಡ್ಡ ತಪ್ಪು ಇದೆ ಅನಿಸುತ್ತಿಲ್ಲ. ಸಣ್ಣ ತಪ್ಪುಗಳಿರಬಹುದು. ಇದರ ಬಗ್ಗೆ ಕ್ಯಾಬಿನೆಟ್‌ನಲ್ಲಿ ಚರ್ಚಿಸಿ ಅಂತಿಮ ತೀರ್ಮಾನ ಕೈಗೊಳ್ಳಲಿದ್ದಾರೆ ಎಂದರು.

ಇನ್ನು ಕೆಲವರು ವರದಿಯನ್ನು ಪರಿಶೀಲಿಸದೆ, ಓದದೆ ಜಾತಿ ಗಣತಿ ವರದಿ ಬಗ್ಗೆ ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ. ಸದಸ್ಯರು ಮತ್ತು ಸದಸ್ಯ ಕಾರ್ಯದರ್ಶಿ ವರದಿಗೆ ಸಹಿ ಮಾಡಿದ ನಂತರ ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದೆ ಎಂದು ತಿಳಿಸಿದರು.

ಮೀಸಲಾತಿ ಮಿತಿ ಕುರಿತು ಮಾತನಾಡಿದ ಹೆಗ್ಡೆ, ಕೇಂದ್ರ ಸರ್ಕಾರ ಆರ್ಥಿಕವಾಗಿ ಹಿಂದುಳಿದ ವರ್ಗದ (EWS)ಮೀಸಲಾತಿಯನ್ನು ಶೇಕಡಾ 10 ರಷ್ಟು ಹೆಚ್ಚಿಸಿದೆ. ಸಾಂವಿಧಾನಿಕ ತಿದ್ದುಪಡಿಗೆ ನ್ಯಾಯಾಲಯವು ತನ್ನ ಸಮ್ಮತಿಯನ್ನು ನೀಡಿದೆ. ಭವಿಷ್ಯದಲ್ಲಿ ಯಾವ ನಿರ್ಧಾರ ತೆಗೆದುಕೊಳ್ಳುತ್ತದೋ ಗೊತ್ತಿಲ್ಲ. ಅದನ್ನು ನ್ಯಾಯಾಂಗದ ವಿವೇಚನೆಗೆ ಬಿಡಲಾಗಿದೆ ಎಂದರು.

ಚರ್ಚೆಯಾಗಿದೆ; ತೀರ್ಮಾನ ಆಗಿಲ್ಲ

ಸಚಿವರ ಒಕ್ಕೊರಲ ಹೇಳಿಕೆ

ಬೆಂಗಳೂರು, ಏ.17– ಸಚಿವ ಸಂಪುಟ ಸಭೆ ಮುಗಿದ ಬಳಿಕ ಮಾತನಾಡಿದ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಜಾತಿ ಗಣತಿ ವರದಿ ಬಗ್ಗೆ ಸಂಪುಟ ಸಭೆಯಲ್ಲಿ ಯಾವುದೇ ತೀರ್ಮಾನ ಆಗಿಲ್ಲ. ಮುಂದಿನ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ಆಗಲಿದೆ ಎಂದರೆ, ಸಭೆಯಲ್ಲಿ ಸಚಿವರು ಅವರವರ ಅಭಿಪ್ರಾಯವನ್ನು ಹೇಳಿದ್ದಾರೆ. ವರದಿಯನ್ನು ಯಾರೂ ವಿರೋಧಿಸಿಲ್ಲ ಎಂದು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಸಭೆಯಲ್ಲಿ ಚರ್ಚೆ ನಡೆದಿದೆ. ನಾನು ನನ್ನ ಅಭಿಪ್ರಾಯವನ್ನು ಇನ್ನಷ್ಟೆ ವ್ಯಕ್ತಪಡಿಸಬೇಕಿದೆ. ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ಮುಂದುವರಿಯಲಿದೆ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು. ಚರ್ಚೆ ಅಪೂರ್ಣವಾಗಿದೆ. ಮತ್ತೆ ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ಮುಂದುವರಿಸಿ ತೀರ್ಮಾನ ತೆಗೆದುಕೊಳ್ಳಲಾಗುವುದು. ಎಲ್ಲಾ ಸಚಿವರು ತಮ್ಮಲ್ಲಿರುವ ಸಂಶಯಗಳ ಬಗ್ಗೆ ಮಾಹಿತಿ ಕೇಳಿದ್ದಾರೆ. ಮುಂದಿನ ಸಭೆಯಲ್ಲಿ ವಿಸ್ತೃತ ಚರ್ಚೆ ನಡೆಸಿ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು ಎಂದು ಸಹಕಾರ ಸಚಿವ ಎಂದು ಕೆ.ಎನ್. ರಾಜಣ್ಣ ಹೇಳಿದರು.

ಈ ವರದಿಯ ವಿರೋಧ, ಪರ ಎಂದು ಇಲ್ಲ. ವೈಯಕ್ತಿಕವಾಗಿ ಸಚಿವರು ಅಭಿಪ್ರಾಯ ಹೇಳಿದ್ದಾರೆ. ಸಚಿವರು ಇನ್ನಷ್ಟು ಮಾಹಿತಿ ಕೇಳಿದ್ದಾರೆ. ಏನೇನು ಬೇಕು ಅದೆಲ್ಲವನ್ನೂ ಕೊಡಲಿದ್ದಾರೆ. ವರದಿ ಒಪ್ಪಬಾರದು ಎಂಬ ಪ್ರಶ್ನೆ ಬಂದಿಲ್ಲ. ವರದಿಯ ಬಗ್ಗೆ ಬಹಳ ವಿವರವಾಗಿ ಚರ್ಚೆ ಮಾಡಿದ್ದೇವೆ. ಚರ್ಚೆ ಅಪೂರ್ಣವಾಗಿದೆ. ಇನ್ನೊಂದು ಸಚಿವ ಸಂಪುಟದಲ್ಲಿ ಚರ್ಚೆ ಮಾಡುತ್ತೇವೆ. ಸಚಿವ ಸಂಪುಟದ ಅಭಿಪ್ರಾಯವನ್ನು ಬಹಿರಂಗವಾಗಿ ಹೇಳಲು ಹೋಗುವುದಿಲ್ಲ ಎಂದು ತೋಟಗಾರಿಕೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಹೇಳಿದರು. ರಾಜ್ಯದಲ್ಲಿರುವ ಎಲ್ಲಾ ಜನಾಂಗಗಳ, ಬಡವರ ಉದ್ದೇಶದಿಂದ ಸಾಮಾಜಿಕ ಶೈಕ್ಷಣಿಕ ಸಮೀಕ್ಷೆ ನಡೆಸಲಾಗಿದೆ. ಯಾವ ಸಮಾಜಕ್ಕೂ ಅನ್ಯಾಯ ಆಗಬಾರದು. ದಲಿತರಿಂದ ಹಿಡಿದು ಮುಂದುವರಿದ, ಹಿಂದುಳಿದ ವರ್ಗಗಳಿಗೆ ಅನ್ಯಾಯ ಆಗಬಾರದು. ನಾವು ಈ ರಾಜ್ಯದ ಎಲ್ಲ ಜನರ ಪರವಾಗಿ, ನಮ್ಮ ಸಮಾಜದ ಪರವಾಗಿ ಇರುತ್ತೇವೆ ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಹೇಳಿದರು.

ವಕ್ಫ್ ಮಂಡಲಿ ನೇಮಕಾತಿಗೆ ಸುಪ್ರೀಂಕೋರ್ಟ್ ತಡೆ

ನವದೆಹಲಿ, ಏ.17– ಮುಂದಿನ ವಿಚಾರಣೆಯವರೆಗೆ ವಕ್ಫ್ ಮಂಡಳಿಗೆ ಮುಸ್ಲಿಮೇತರರನ್ನು ನೇಮಕ ಮಾಡುವಂತಿಲ್ಲ ಮತ್ತು ವಕ್ಫ್ ಕಾಯ್ದೆ ವಿಚಾರದಲ್ಲಿ ಯಥಾಸ್ಥಿತಿ ಕಾಪಾಡುವಂತೆ ಸುಪ್ರೀಂ ಕೋರ್ಟ್ ಗುರುವಾರ ಆದೇಶ ನೀಡಿದೆ.

ವಕ್ಫ್ (ತಿದ್ದುಪಡಿ) ಕಾಯ್ದೆ 2025ರ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿ ಸಲ್ಲಿಸಿರುವ ಹಲವು ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಬುಧವಾರ ಪ್ರಾರಂಭಿಸಿದೆ.

ಇಂದು ಸಹ ವಿಚಾರಣೆ ಮುಂದುವರೆಸಿದ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಮತ್ತು ನ್ಯಾಯಮೂರ್ತಿಗಳಾದ ಸಂಜಯ್ ಕುಮಾರ್ ಹಾಗೂ ಕೆ.ವಿ. ವಿಶ್ವನಾಥನ್ ಅವರನ್ನೊಳಗೊಂಡ ತ್ರಿಸದಸ್ಯ ಪೀಠ, ಸಿಂಧುತ್ವ ಪ್ರಶ್ನಿಸಿದ ಅರ್ಜಿಗಳಿಗೆ ಪ್ರತಿಕ್ರಿಯಿಸಲು ಕೇಂದ್ರ ಸರ್ಕಾರಕ್ಕೆ 7 ದಿನಗಳ ಕಾಲಾವಕಾಶ ನೀಡಿದೆ.

ಇಷ್ಟು ಅರ್ಜಿಗಳನ್ನು ನಿಭಾಯಿಸುವುದು ಅಸಾಧ್ಯ. ಕೇವಲ 5 ಅರ್ಜಿಗಳನ್ನು ಮಾತ್ರ ಆಲಿಸಲಾಗುವುದು. ಯಾವ ಐದು ಅರ್ಜಿಗಳನ್ನು ವಿಚಾರಣೆ ನಡೆಸಬೇಕು ಎಂಬುದನ್ನು ನೀವೇ ಆಯ್ಕೆ ಮಾಡಿ ಎಂದು ಸುಪ್ರೀಂಕೋರ್ಟ್ ಹೇಳಿದೆ.

ಅರ್ಜಿದಾರರು 5 ದಿನಗಳಲ್ಲಿ ಕೇಂದ್ರದ ಉತ್ತರಕ್ಕೆ ಮರು ಪ್ರತಿಕ್ರಿಯೆ ಸಲ್ಲಿಸಬಹುದು, ನಂತರ ಮಧ್ಯಂತರ ಆದೇಶಗಳಿಗಾಗಿ ವಿಷಯವನ್ನು ಪಟ್ಟಿ ಮಾಡಲಾಗುವುದು ಎಂದು ಹೇಳಿ, ವಿಚಾರಣೆಯನ್ನು ಮೇ 5ಕ್ಕೆ ಸುಪ್ರೀಂಕೋರ್ಟ್ ಮುಂದೂಡಿದೆ.

ಕೇಂದ್ರ ಸರ್ಕಾರದ ಪರವಾಗಿ ವಿಚಾರಣೆಗೆ ಹಾಜರಾದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು, ಕೆಲವು ಸಾಮಗ್ರಿಗಳೊಂದಿಗೆ ಪ್ರಾಥಮಿಕ ಉತ್ತರ ನೀಡಲು ನನಗೆ ಒಂದು ವಾರ ಸಮಯ ನೀಡಿ ಎಂದು ಸುಪ್ರೀಂಕೋರ್ಟ್ ಅನ್ನು ಕೇಳಿಕೊಂಡರು.

ಈ ಮಧ್ಯೆ ಕೇಂದ್ರ ವಕ್ಫ್ ಮಂಡಳಿ ಮತ್ತು ಇತರ ಮಂಡಳಿಗಳಲ್ಲಿ ಯಾವುದೇ ನೇಮಕಾತಿ ನಡೆಸಬಾರದು ಎಂದು ಕೇಂದ್ರ ಸರ್ಕಾರ ಸಮಯ ಕೇಳಿದ ನಂತರ ಸುಪ್ರೀಂ ಕೋರ್ಟ್ ಹೇಳಿದೆ. 1995 ರ ಕಾಯ್ದೆಯಡಿ ಈಗಾಗಲೇ ನೋಟಿಫೈ ಮಾಡಿದ ಅಥವಾ ನೋಂದಾಯಿಸಲಾದ ಹಾಗೂ ದೀರ್ಘ ಕಾಲದಿಂದ ಧಾರ್ಮಿಕ ಕಾರ್ಯಕ್ರಮಗಳಿಗೆ ಬಳಸುತ್ತಿರುವ (ವಕ್ಫ್ ಬೈ ಯೂಸರ್) ಆಸ್ತಿಗಳನ್ನು ಒಳಗೊಂಡಂತೆ ಯಾವುದೇ ವಕ್ಫ್ ಆಸ್ತಿಗಳನ್ನು ಡಿನೋಟಿಫೈ ಮಾಡುವಂತಿಲ್ಲ.

ದೊಡ್ಡಯ್ಯ ನಿಧನ

ಮೈಸೂರು: ಹಿರಿಯ ಕಾಂಗ್ರೆಸ್ ಮುಖಂಡ ಡಿ. ದೊಡ್ಡಯ್ಯ(96) ಅವರು ಗುರುವಾರ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.



ಮೈಸೂರಿನ ರಾಮಾನುಜ ರಸ್ತೆಯ ನಿವಾಸಿಯಾದ ದಿವಂಗತರು 7 ಮಂದಿ ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ (ಏ. 18) ಮಧ್ಯಾಹ್ನ 12 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಇಂದು ಆರ್.ರಘು ಅವರ 'ಭೂಮಿ ಪುತ್ರಿ', 'ಅಂಕಣದ ಬೆಳಕು' ಕೃತಿ ಬಿಡುಗಡೆ




ಯದುವೀರ್ ಒಡೆಯರ್



ಆರ್.ರಘು ಕೌಟಿಲ್ಯ





ಮೈಸೂರು,ಏ.17–ಮೈಸೂರಿನ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ವತಿಯಿಂದ ಆರ್.ರಘು ಅವರ 'ಭೂಮಿ ಪುತ್ರಿ' ಕವನ ಸಂಕಲನ ಹಾಗೂ 'ಅಂಕಣದ ಬೆಳಕು' ಅಂಕಣ ಬರಹಗಳ ಸಂಗ್ರಹ ಪುಸ್ತಕ ಬಿಡುಗಡೆ ಸಮಾರಂಭವನ್ನು ಏ.18ರಂದು ಮಧ್ಯಾಹ್ನ 3.30 ಗಂಟೆಗೆ ಕಲಾಮಂದಿರದಲ್ಲಿ ಏರ್ಪಡಿಸಲಾಗಿದೆ.

ಕಾರ್ಯಕ್ರಮವನ್ನು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಉದ್ಘಾಟಿಸುವರು. ಮೈಸೂರು–ಕೊಡಗು ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅಧ್ಯಕ್ಷತೆ ವಹಿಸಲಿದ್ದಾರೆ. ಪದ್ಮಶ್ರೀ ಪುರಸ್ಕೃತ ಡಾ.ಬಿ.ಜಯಶ್ರೀ ಅವರು 'ಭೂಮಿಪುತ್ರಿ' ಕವನ ಸಂಕಲನ ಮತ್ತು ಖ್ಯಾತ ಶಿಕ್ಷಣ ತಜ್ಞ ಡಾ.ಗುರುರಾಜ ಕರಜಗಿ 'ಅಂಕಣದ ಬೆಳಕು', ಅಂಕಣ ಬರಹಗಳ ಸಂಗ್ರಹವನ್ನು ಬಿಡುಗಡೆ ಮಾಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಮಾಜಿ ಸಚಿವ ಎಚ್.ವಿಶ್ವನಾಥ್, ಶ್ರೀಮತಿ ಕೋಮಲ ಹರ್ಷಕುಮಾರಗೌಡ ಭಾಗವಹಿಸಲಿದ್ದು, ಹಿರಿಯ ಪತ್ರಕರ್ತ ಐತಿಚಂಡ ರಮೇಶ್ ಉತ್ತಪ್ಪ ಕೃತಿ ಕುರಿತು ಮಾತನಾಡಲಿದ್ದಾರೆ. ಕಾರ್ಯಕ್ರಮಕ್ಕೂ ಮೊದಲು ಡಾ.ಶಾಂಭವಿ ಸ್ವಾಮಿ ನಿರ್ದೇಶನದಲ್ಲಿ ಪುಣ್ಯಕೋಟಿ (ಗೋವಿನ ಹಾಡು) ನೃತ್ಯರೂಪಕ ಮತ್ತು ಶ್ರೀಮತಿ ಸಂಗೀತಾ ಕಟ್ಟಿ ಸಾರಥ್ಯದಲ್ಲಿ ಸಂಗೀತ ರಸಸಂಜೆ ಆಯೋಜಿಸಲಾಗಿದೆ ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.


ಪ್ರಶಸ್ತಿ ಪ್ರದಾನ



ಬೆಂಗಳೂರಿನ ತ್ರಿಪುರವಾಸಿನಿ ಅರಮನೆ ಮೈದಾನದಲ್ಲಿ ಕರ್ನಾಟಕ ಛಾಯಾಚಿತ್ರ ಗ್ರಾಹಕರ ಸಂಘ ಆಯೋಜಿಸಿದ್ದ ಡಿಜಿ ಇಮೇಜ್–2025 ಅಂತರ ರಾಷ್ಟ್ರೀಯ ಛಾಯಾ ವಸ್ತು ಪ್ರದರ್ಶನ ಸಮಾರಂಭದಲ್ಲಿ ಮೈಸೂರು ಡಿಸ್ಟ್ರಿಕ್ಟ್ ಫೋಟೋಗ್ರಾಫರ್ & ವೀಡಿಯೋಗ್ರಾಫರ್ ಅಸೋಸಿಯೇಷನ್ ಸಂಸ್ಥಾಪಕ ಮಾಜಿ ನಿರ್ದೇಶಕ, ಖ್ಯಾತ ವನ್ಯಜೀವಿ ಛಾಯಾಗ್ರಾಹಕ ಶೇಷಾದ್ರಿ ವಿ. ಅವರಿಗೆ ಮೈಸೂರು ಜಿಲ್ಲಾ ವಿಭಾಗದಿಂದ 'ಛಾಯಾ ಶ್ರೀ' ಪ್ರಶಸ್ತಿ ಹಾಗೂ ಮಾಜಿ ಅಧ್ಯಕ್ಷ ಎಂ.ಎಸ್.ಮಂಜುನಾಥ (ನಿಧಿಮಂಜು)ಅವರಿಗೆ ಮೈಸೂರು ಜಿಲ್ಲಾ ವಿಭಾಗದಿಂದ 'ಛಾಯಾ ಸಾಧಕ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಯಶಸ್ವಿ ಸಂಧಾನ

ಲಾರಿ ಮುಷ್ಕರ ವಾಪಸ್



ಬೆಂಗಳೂರು, ಏ.17– ಡೀಸೆಲ್ ದರ ಇಳಿಕೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆ ಆಗ್ರಹಿಸಿ ಕಳೆದ ಮೂರು ದಿನಗಳಿಂದ ಪ್ರತಿಭಟನೆ ನಡೆಸುತ್ತಿದ್ದ ಲಾರಿ ಮಾಲೀಕರು ಮತ್ತು ಏಜೆಂಟರ ಸಂಘ ಕೊನೆಗೂ ಮುಷ್ಕರವನ್ನು ವಾಪಸ್ ತೆಗೆದುಕೊಂಡಿದೆ.

ಲಾರಿ ಮಾಲೀಕರ ಬೇಡಿಕೆ ಈಡೇರಿಸುವ ಸಂಬಂಧ ಇಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ನೇತೃತ್ವದಲ್ಲಿ ವಿಧಾನಸೌಧದಲ್ಲಿ ನಡೆದ ಸಂಧಾನ ಸಭೆ ಯಶಸ್ವಿಯಾಗಿದೆ. ಸರಕು ಸಾಗಾಣೆ ದರ ಏರಿಕೆಯೂ ಸೇರಿದಂತೆ ಬಹುತೇಕ ಬೇಡಿಕೆಗಳನ್ನು ಈಡೇರಿಸುವುದಾಗಿ ಸಚಿವರು ಭರವಸೆ ನೀಡಿದ ಹಿನ್ನೆಲೆಯಲ್ಲಿ ಲಾರಿ ಮಾಲೀಕರು ಮುಷ್ಕರವನ್ನು ಹಿಂಪಡೆದಿದ್ದಾರೆ.

ಡೀಸೆಲ್ ಬೆಲೆ ಇಳಿಕೆ ಹಾಗೂ ರಾಜ್ಯ ಹೆದ್ದಾರಿಗಳಲ್ಲಿನ ಟೋಲ್‌ಗಳನ್ನು ತೆಗೆಯುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಮುಂದಿಟ್ಟುಕೊಂಡು ರಾಜ್ಯ ಲಾರಿ ಮಾಲೀಕರು ಮತ್ತು ಏಜೆಂಟರ ಸಂಘ ಕಳೆದ ಮೂರು ದಿನಗಳಿಂದ ಮುಷ್ಕರ ನಡೆಸುತಿತ್ತು.

ಲಾರಿ ಮಾಲೀಕರ ಸಂಘದ ಪ್ರತಿನಿಧಿಗಳು ಮಂಗಳವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ರೆಡ್ಡಿ ಅವರೊಂದಿಗೆ ನಡೆಸಿದ ಮಾತುಕತೆ ವಿಫಲವಾಗಿತ್ತು. ಆದರೆ ಇಂದು ರಾಮಲಿಂಗಾರೆಡ್ಡಿ ಅವರೊಂದಿಗೆ ನಡೆಸಿದ ಸಂಧಾನ ಸಭೆ ಯಶಸ್ವಿಯಾಗಿದ್ದು, ಲಾರಿ ಮುಷ್ಕರವನ್ನು ವಾಪಸ್ ಪಡೆಯುತ್ತಿರುವುದಾಗಿ ರಾಜ್ಯ ಲಾರಿ ಮಾಲೀಕರ ಸಂಘದ ಅಧ್ಯಕ್ಷ ಷಣ್ಮುಗಪ್ಪ ಪಿಟಿಐ ಸುದ್ದಿಸಂಸ್ಥೆಗೆ ತಿಳಿಸಿದರು.


ಡೀಸೆಲ್ ಬೆಲೆ ಕಡಿಮೆ ಮಾಡಲು ಅಥವಾ ರಾಜ್ಯ ಹೆದ್ದಾರಿಗಳಲ್ಲಿನ ಟೋಲ್‌ಗಳನ್ನು ತೆಗೆಯಲು ಸರ್ಕಾರ ಒಪ್ಪಿಲ್ಲ ಆದಾಗ್ಯೂ ಸರಕು ಸಾಗಾಣೆ ಬಾಡಿಗೆ ದರ ಹೆಚ್ಚಿಸುವುದು ಸೇರಿದಂತೆ ಕೆಲವೊಂದು ಬೇಡಿಕೆಗಳ ಈಡೇರಿಸುವುದಾಗಿ ಭರವಸೆ ನೀಡಲಾಗಿದೆ ಹೀಗಾಗಿ ಲಾರಿ ಮುಷ್ಕರವನ್ನು ಹಿಂಪಡೆದಿರುವುದಾಗಿ ತಿಳಿಸಿದರು.

ಚುನಾವಣಾ ನಿಯಮಗಳಿಗೆ ತಿದ್ದುಪಡಿ: ಪ್ರತಿಕ್ರಿಯಿಸಲು ಇಸಿಗೆ ಮೂರು ವಾರ ಕಾಲಾವಕಾಶ ನೀಡಿದ ಸುಪ್ರೀಂಕೋರ್ಟ್

ನವದೆಹಲಿ, ಏ.17– 1961 ರ ಚುನಾವಣಾ ನಿಯಮಗಳಿಗೆ ಇತ್ತೀಚೆಗೆ ಮಾಡಲಾದ ತಿದ್ದುಪಡಿಗಳನ್ನು ಪ್ರಶ್ನಿಸಿ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಮತ್ತು ಇತರರು ಸಲ್ಲಿಸಿದ್ದ ಅರ್ಜಿಗಳಿಗೆ ಪ್ರತಿಕ್ರಿಯಿ ಸಲು ಸುಪ್ರೀಂ ಕೋರ್ಟ್ ಗುರುವಾರ ಚುನಾವಣಾ ಆಯೋಗಕ್ಕೆ ಮೂರು ವಾರಗಳ ಹೆಚ್ಚುವರಿ ಕಾಲಾವಕಾಶ ನೀಡಿದೆ. ಜೈರಾಮ್ ರಮೇಶ್ ಅವರ ಮನವಿಯ ಮೇರೆಗೆ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಮತ್ತು ನ್ಯಾಯಮೂರ್ತಿ ಸಂಜಯ್ ಕುಮಾರ್ ಅವರ ನ್ನೊಳಗೊಂಡ ಪೀಠ ಜನವರಿ 15 ರಂದು ಕೇಂದ್ರ ಮತ್ತು ಚುನಾವಣಾ ಸಮಿತಿಗೆ ನೋಟಿಸ್ ಜಾರಿ ಮಾಡಿ ಪ್ರತಿಕ್ರಿಯೆ ಕೋರಿತ್ತು.

ಚುನಾವಣಾ ಆಯೋಗದ ಪರವಾಗಿ ವಿಚಾರಣೆಗೆ ಹಾಜರಾದ ಹಿರಿಯ ವಕೀಲ ಮಣಿಂದರ್ ಸಿಂಗ್, ಉತ್ತರ ಸಲ್ಲಿಸಲು ಇನ್ನೂ ಮೂರು ವಾರಗಳ ಕಾಲಾವಕಾಶ ಕೋರಿದ್ದರು. ಸಿಂಗ್ ಅವರ ಮನವಿಯನ್ನು ಪುರಸ್ಕರಿಸಿದ ಪೀಠ, ಕಾಲಾವಕಾಶ ನೀಡಿದೆ ಮತ್ತು ಜುಲೈ 21 ಕ್ಕೆ ವಿಚಾರಣೆಗೆ ನಿಗದಿಪಡಿಸಿದೆ ರಮೇಶ್ ಅವರನ್ನು ಹೊರತುಪಡಿಸಿ, ಶ್ಯಾಮ್ ಲಾಲ್‌ಪಾಲ್ ಮತ್ತು ಸಾಮಾಜಿಕ ಕಾರ್ಯ ಕರ್ತೆ ಅಂಜಲಿ ಭಾರದ್ವಾಜ್ ಸಲ್ಲಿಸಿದ ಎರಡು ರೀತಿಯ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದಾರೆ. ಹಿರಿಯ ವಕೀಲರಾದ ಕಪಿಲ್ ಸಿಬಲ್ ಮತ್ತು ಅಭಿಷೇಕ್ ಸಿಂಘ್ವಿ, ಜೈರಾಮ್ ರಮೇಶ್ ಅವರ ಪರ ವಾದ ಮಂಡಿಸಿದರು.

ನಿಧನ



ಜಿ.ಎಸ್.ಪ್ರಸಾದ್

ಮೈಸೂರು, ಏ.17–ಮೈಸೂರಿನ ವಿ.ವಿ.ಮೊಹಲ್ಲಾ 2ನೇ ಮುಖ್ಯರಸ್ತೆಯ ನಿವಾಸಿ, ನಿವೃತ್ತ ಲೋಕೋಪಯೋಗಿ ಎಕ್ಸಿಕ್ಯೂಟಿವ್ ಇಂಜಿನಿಯರ್ ಜಿ.ಎಸ್.ಪ್ರಸಾದ್ (90) ಬುಧವಾರ ವಯೋಸಹಜ ಕಾಯಿಲೆಯಿಂದ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರರು, ಓರ್ವ ಪುತ್ರಿ, ಅಳಿಯ, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಗುರುವಾರ ಗೋಕುಲಂ ಚಿರಶಾಂತಿಧಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜಯಲಕ್ಷ್ಮಿ ಎಸ್.



ಮೈಸೂರಿನ ಯಾದವಗಿರಿ ಬಡಾವಣೆಯ ಪರಮಹಂಸ ರಸ್ತೆ ನಿವಾಸಿ, ನಿವೃತ್ತ ಎಸಿಪಿ ದಿವಂಗತ ಚಲುವರಾಜು ಅವರ ಪತ್ನಿ ಜಯಲಕ್ಷ್ಮಿ ಎಸ್. (63) ಗುರುವಾರ (ಏ.17) ಮಧ್ಯಾಹ್ನ ನಿಧನರಾದರು. ಮೃತರು ಪುತ್ರ ಗುರುವಿನಾಯಕ್ (ನಗರಪಾಲಿಕೆ ಮಾಜಿ ಸದಸ್ಯ), ಪುತ್ರಿ ಗ್ರೀಷ್ಮ ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಏ.18) ಮಧ್ಯಾಹ್ನ ಜೋಡಿ ತೆಂಗಿನಮರ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಗುಡ್ ಫ್ರೈಡೇ ಮುನ್ನ ದಿನ ಚರ್ಚ್‌ಗಳಲ್ಲಿ ವಿಶೇಷ ಪ್ರಾರ್ಥನೆ

ಇಂದು ಶ್ರದ್ಧಾ–ಭಕ್ತಿಯಿಂದ ಯೇಸುಕ್ರಿಸ್ತರ ತ್ಯಾಗದ ಸ್ಮರಣೆ

ಮೈಸೂರು,ಏ.17(ಪಿಎಂ)– ಯೇಸು ಕ್ರಿಸ್ತರ ತ್ಯಾಗ ಮತ್ತು ಬಲಿದಾನ ಸ್ಮರಿಸಿ, ಆರಾಧಿಸುವ ಗುಡ್ ಫ್ರೈಡೇ (ಏ.18, ಶುಭ ಶುಕ್ರವಾರ) ಪ್ರಯುಕ್ತ ಗುರುವಾರ ಮೈಸೂರಿನ ಸಂತ ಫಿಲೋಮಿನಾ ಚರ್ಚ್ ಸೇರಿದಂತೆ ನಗರದ ಚರ್ಚ್‌ಗಳಲ್ಲಿ ವಿಶೇಷ ಪ್ರಾರ್ಥನೆಯೊಂದಿಗೆ ವಿವಿಧ ಧಾರ್ಮಿಕ ವಿಧಿವಿಧಾನಗಳು ನಡೆದವು.

ಸಂತ ಫಿಲೋಮಿನಾ ಚರ್ಚ್‌ನಲ್ಲಿ ಮೈಸೂರು ಧರ್ಮ ಕ್ಷೇತ್ರದ ಪ್ರೇಷಿತ ಆಡಳಿತಾಧಿಕಾರಿ ಡಾ.ಬರ್ನಾರ್ಡ್ ಮೊರಾಸ್ ಅವರ ನೇತೃತ್ವದಲ್ಲಿ ವಿಶೇಷ ಪ್ರಾರ್ಥನೆ ನಡೆಯಿತು. ಯೇಸು ಕ್ರಿಸ್ತರು ತಮ್ಮ ಶಿಷ್ಯರಿಗೆ ಪ್ರೀತಿ, ಸೇವೆ ಮತ್ತು ತ್ಯಾಗ ಮಹತ್ವ ಕುರಿತು ಬೋಧಿಸಿ, ಪಾಲಿಸುವಂತೆ ಸಂದೇಶ ನೀಡಿದ್ದರ ಸ್ಮರಣಾರ್ಥವಾಗಿ ಧರ್ಮಗುರುಗಳ ದಿನದ ಸ್ಥಾಪನೆಯ ವಿಧಿವಿಧಾನ ನೆರವೇರಿಸಲಾಯಿತು.



ಮೈಸೂರಿನ ಸಂತ ಫಿಲೋಮಿನಾ ಚರ್ಚ್‌ನಲ್ಲಿ ಗುಡ್ ಫ್ರೈಡೇ ಮುನ್ನ ದಿನವಾದ ಗುರುವಾರ ಮೈಸೂರು ಧರ್ಮ ಕ್ಷೇತ್ರದ ಪ್ರೇಷಿತ ಆಡಳಿತಾಧಿಕಾರಿ ಡಾ.ಬರ್ನಾರ್ಡ್ ಮೊರಾಸ್ ಅವರ ನೇತೃತ್ವದಲ್ಲಿ ವಿಶೇಷ ಪ್ರಾರ್ಥನೆ ನಡೆಯಿತು.

ಅಲ್ಲದೆ, ಪರಮ ಪ್ರಸಾದ ಸ್ಥಾಪನೆ ಸಹ ನೆರವೇರಿಸಲಾಯಿತು. ಜೊತೆಗೆ ಸಾಮೂಹಿಕ ಹಾಗೂ ವೈಯಕ್ತಿಕ ಪ್ರಾರ್ಥನೆಯಲ್ಲಿ ಅಪಾರ ಸಂಖ್ಯೆಯ ಕ್ರೈಸ್ತ ಬಾಂಧವರು ಪಾಲ್ಗೊಂಡು ಯೇಸುವಿನ ತ್ಯಾಗ ಮತ್ತು ಬಲಿದಾನವನ್ನು ಸ್ಮರಿಸಿ, ಪ್ರಾರ್ಥಿಸಿದರು. ಇದೇ ವೇಳೆ 2025ನೇ ಜುಬಿಲಿ ಪ್ರಯುಕ್ತ ರೋಮ್ ನಗರದ ಧ್ವಜಸ್ತಂಭ ಮಾದರಿಯಲ್ಲಿ ಸಂತ ಫಿಲೋಮಿನಾ ಚರ್ಚ್ ಆವರಣದಲ್ಲಿ ಸ್ಥಾಪಿಸಿರುವ 53 ಅಡಿ ಎತ್ತರದ ಕಲ್ಲಿನ ಧ್ವಜಸ್ತಂಭವನ್ನು ಉದ್ಘಾಟಿಸಲಾಯಿತು. ಚರ್ಚ್‌ನ ಪ್ರಧಾನ ಧರ್ಮಗುರುಗಳಾದ ಫಾದರ್ ಸ್ಟಾನಿ ಡಿ'ಅಲ್ಮೇಡಾ ಸೇರಿದಂತೆ ಇನ್ನಿತರ ಧರ್ಮಗುರುಗಳು ಹಾಜರಿದ್ದರು.

ಪವಿತ್ರ ಶುಕ್ರವಾರ ಯೇಸುಕ್ರಿಸ್ತರು ಶಿಲುಬೇಗೇರಿದ ದಿನವಾದ ಹಿನ್ನೆಲೆಯಲ್ಲಿ ನಾಳೆ (ಏ.18) ಎಲ್ಲಾ ಚರ್ಚ್‌ಗಳಲ್ಲಿ ಬೆಳಗ್ಗೆಯಿಂದ ಸಂಜೆಯವರೆಗೆ ವಿಶೇಷ ಪ್ರಾರ್ಥನೆ ನಡೆಯಲಿದೆ. ಚರ್ಚ್‌ಗಳಲ್ಲಿ ಶನಿವಾರ ರಾತ್ರಿ ಜಾಗರಣೆ ನಡೆಸುವ ಕ್ರೈಸ್ತ ಬಾಂಧವರು ಭಾನುವಾರವೂ ಯೇಸುಕ್ರಿಸ್ತರ ತ್ಯಾಗವನ್ನು ಸ್ಮರಿಸಿ ಆರಾಧನೆಯಲ್ಲಿ ತೊಡಗಲಿದ್ದಾರೆ. ಭಾನುವಾರ ಯೇಸುಕ್ರಿಸ್ತರ ಪುನರುತ್ಥಾನ ದಿನವಾಗಿ ಆಚರಿಸಲಿದ್ದಾರೆ. ನಗರದಲ್ಲಿ ಕ್ರೈಸ್ತ ಬಾಂಧವರು ಶ್ರದ್ಧೆ ಮತ್ತು ಭಕ್ತಿಪೂರ್ವಕವಾಗಿ ಯೇಸುಕ್ರಿಸ್ತರ ತ್ಯಾಗವನ್ನು ಸ್ಮರಿಸಲಿದ್ದಾರೆ.

ಡಾ.ಬರ್ನಾರ್ಡ್ ಮೊರಾಸ್ ಸಂದೇಶ



ಮೈಸೂರು,ಏ.17(ಬಿಎಲ್‌ಯು)–ಗುಡ್‌ಫ್ರೈಡೆಗೆ ಮೈಸೂರಿನ ಪ್ರೇಷಿತ ಆಡಳಿತಾಧಿಕಾರಿಗಳೂ ಆದ ನಿವೃತ್ತ ಮಹಾ ಧರ್ಮಾಧ್ಯಕ್ಷ ಡಾ.ಬರ್ನಾರ್ಡ್ ಮೊರಾಸ್ ಸಂದೇಶ ನೀಡಿದ್ದಾರೆ.

ಅಂದಿನ ಸಾಮಾಜಿಕ ಭೇದ ಭಾವಗಳನ್ನು ವಿರೋಧಿಸಿ ಪ್ರತಿಯೊಬ್ಬ ವ್ಯಕ್ತಿಯಲ್ಲಿ ಒಳಿತನ್ನು, ಸಹಜಾಭಿಮುಕತೆಯನ್ನು ಎತ್ತಿ ಹಿಡಿದ ಕ್ರಿಸ್ತ. ಶುಭ ಶುಕ್ರವಾರದಂದು ಶಿಲುಬೆಯಲ್ಲಿ ಘೋರ ಯಾತನೆಯಲ್ಲಿ ಅಸುನೀಗಿದ ಕ್ರಿಸ್ತ ಸಾಮಾಜಿಕ ಸರ್ವೋದಯಕ್ಕೆ ತನ್ನನ್ನೆ ಧಾರೆ ಎರೆದ ದೇವಪುತ್ರ ತನ್ನ ನಡೆ ನುಡಿ, ಆಚಾರ ವಿಚಾರ ಹಾಗೂ ದೇವತಾ ಕಾರ್ಯಗಳ ಕಾರಣಗಳಿಂದಲೇ ಸರ್ವ ಧರ್ಮಿಯರ ಸರ್ವಕಾಲಿಕ ಮನ್ನಣೆ ಗೌರವಕ್ಕೆ ಪಾತ್ರರು.

ಯೇಸುವಿನ ತ್ಯಾಗ, ಪ್ರೀತಿಯನ್ನು ನಾವು ಧ್ಯಾನಿಸುವಾಗ ಈ ದಿನವನ್ನು ಒಂದು ಶೋಕತಪ್ತ ದಿನವಾಗಿ ನೋಡುತ್ತೇವೆ. ಅವರ ಅನುಭವವನ್ನು ನಮ್ಮದಾಗಿಸುವ ಪ್ರಯತ್ನವಾಗಬೇಕಿದೆ. ನಾವೆಲ್ಲರೂ ಒಂದೇ ದಿಕ್ಕಿನೆಡೆ ನಡೆಯೋಣ. ಒಂದೇ ಗುರಿಯತ್ತ ಒಲವು ತೋರೋಣ. ಪ್ರೀತಿ ಮತ್ತು ತಾಳ್ಮೆಯಲ್ಲಿ ಪರಸ್ಪರ ಗಮನ ಹರಿಸೋಣ. ನಿಮ್ಮ ಶತ್ರುಗಳನ್ನು ಪ್ರೀತಿಸಿರಿ, ನಿಮ್ಮನ್ನು ಪೀಡಿಸುವವರಿಗಾಗಿ ಪ್ರಾರ್ಥಿಸಿರಿ.

ತಪ್ಪು ಮಾಡುವುದು ಮಾನವನ ಸಹಜ ಗುಣ. ತಪ್ಪು ತಿದ್ದಿ ಕ್ಷಮಿಸಿ ಹೊಸತನ ನೀಡುವುದು ದೈವಿ ಗುಣ. ವಿರೋಧಿಗಳಿಗೂ ಸ್ನೇಹಭಾವ ತೋರಿದ್ದಲ್ಲಿ, ಕ್ಷಮೆ ಇದ್ದಲ್ಲಿ ಪ್ರೀತಿ ವಿಶ್ವಾಸ ಮೊಳೆಯಲು ಸಾಧ್ಯ. ಎಲ್ಲಾ ಮಾನವ ಜನಾಂಗ ಒಂದೇ ಎಂಬ ಉದಾತ್ತ ಮನೋಭಾವ ಉಂಟಾದಾಗ ಜಗತ್ತು ಸುಂದರ. ಆಗ ಪ್ರತಿ ಮಾನವ ದೈವತಾ ಸ್ವರೂಪಿಯಾಗಲು ಸಾಧ್ಯ ಎಂಬುವುದೇ ಶಿಲುಬೆಯಲ್ಲಿ ತೂಗಾಡುತ್ತಿರುವ ದೇವಪುತ್ರ ಯೇಸುವಿನ ಬೋಧನೆಯ ಸಾರ. ಭರವಸೆಯ ಪ್ರಯಾಣದಲ್ಲಿ ಸಾಗುತ್ತಿರುವ ನಾವು ಶಾಂತಿ, ಪ್ರವರ್ಧಮಾನಕ್ಕೆ ಬರುವಂತೆ ಕ್ರಿಸ್ತ ನಮ್ಮೆಲ್ಲರಿಗೂ ಪ್ರೇರಕರಾಗಲಿ.

ಮೇ 2, ಆಚಾರ್ಯತ್ರಯರ ಜಯಂತಿ; ಸಾಮೂಹಿಕ ಬ್ರಹ್ಮೋಪದೇಶ



ಮೈಸೂರು,ಏ.17–ಮೈಸೂರಿನ ಶ್ರೀರಾಂಪುರ 2ನೇ ಹಂತದಲ್ಲಿರುವ ಆದರ್ಶ ಸೇವಾ ಸಂಘದಿಂದ ವಿವೇಕಾನಂದನಗರ ಬ್ರಾಹ್ಮಣ ಮಹಾಸಭಾದ ಶ್ರೀ ಲಕ್ಷ್ಮೀ ನರಸಿಂಹ ಧರ್ಮಶಾಲಾ ಆವರಣದಲ್ಲಿ ಮೇ 2ರಂದು ಬೆಳಗ್ಗೆ 9.10ರಿಂದ 10.10 ರೊಳಗೆ ಸಲ್ಲುವ ಶುಭ ಮಿಥುನ ಲಗ್ನದಲ್ಲಿ ಆಚಾರ್ಯತ್ರಯರ ಜಯಂತಿ, ತ್ರಿಮತಸ್ಥ ಬ್ರಾಹ್ಮಣ ವಟುಗಳಿಗೆ ಋಗ್ವೇದ ಪುರಸ್ಸರವಾಗಿ ಸಾಮೂಹಿಕ ಬ್ರಹ್ಮೋಪದೇಶ ಏರ್ಪಡಿಸಲಾಗಿದೆ. ಕಾರ್ಯಕ್ರಮವು ಆದರ್ಶ ಸೇವಾ ರತ್ನ ಹಾಗೂ ಪ್ರಾಚ್ಯವಸ್ತು ಸಂಶೋಧನಾಲಯದ ವಿಶ್ರಾಂತ ಉಪನಿರ್ದೇಶಕ ವಿದ್ವಾನ್ ಡಾ.ಟಿ.ವಿ.ಸತ್ಯನಾರಾಯಣ ಮಾರ್ಗದರ್ಶನದಲ್ಲಿ ನಡೆಯಲಿದೆ. ಮಾಹಿತಿಗೆ ಮೊ.6360156863, 9448468800 ಸಂಪರ್ಕಿಸಬಹುದು.

ಕುಕ್ಕೆ ಸುಬ್ರಹ್ಮಣ್ಯ ದೇವಾಲಯದ ವಾರ್ಷಿಕ ಆದಾಯ ಏರಿಕೆ

ಮಂಗಳೂರು: ಕರ್ನಾಟಕದ ಪ್ರಸಿದ್ಧ ಯಾತ್ರಾ ಕ್ಷೇತ್ರ ಶ್ರೀ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದ ಆದಾಯದಲ್ಲಿ ಭಾರಿ ಹೆಚ್ಚಳವಾಗಿದೆ. 2024–25ನೇ ಸಾಲಿನ ವಾರ್ಷಿಕ ಆದಾಯ 155.95 ಕೋಟಿ ರೂ. ಏರಿಕೆ ಆಗಿದೆ. ಕಳೆದ ವರ್ಷ ವಾರ್ಷಿಕ ಆದಾಯ 146.01 ಕೋಟಿ ರೂ. ಆಗಿತ್ತು. ಅಂದರೆ ಕಳೆದ ವರ್ಷಕ್ಕಿಂತ ಈ ಬಾರಿ 9.94 ಕೋಟಿ ರೂ. ಆದಾಯ ಏರಿಕೆ ಆಗಿದೆ. ಆ ಮೂಲಕ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನ ಮತ್ತೆ ರಾಜ್ಯದ ಶ್ರೀಮಂತ ದೇವಸ್ಥಾನ ಎಂಬ ಹೆಗ್ಗಳಿಕೆ ಪಡೆದುಕೊಂಡಿದೆ. ವರ್ಷದಿಂದ ವರ್ಷಕ್ಕೆ ದೇವಸ್ಥಾನದ ಆದಾಯದಲ್ಲಿ ಭಾರಿ ಹೆಚ್ಚಳವಾಗುತ್ತಿದೆ. ಕಳೆದ ವರ್ಷವೂ ಪ್ರಥಮ ಸ್ಥಾನದಲ್ಲಿತ್ತು. ಈ ಭಾರಿ ಕೂಡ ವಾರ್ಷಿಕ ಆದಾಯದಲ್ಲಿ ಏರಿಕೆಯಿಂದಾಗಿ ಮತ್ತೆ ದೇವಸ್ಥಾನ ತನ್ನ ಪ್ರಥಮ ಸ್ಥಾನ ಭದ್ರಪಡಿಸಿಕೊಂಡಿದೆ. ಶಕ್ತಿ ಯೋಜನೆ ಪರಿಣಾಮ ಕುಕ್ಕೆ ದೇವಸ್ಥಾನದ ಆದಾಯದಲ್ಲಿ ಹೆಚ್ಚಳವಾಗುತ್ತಿದೆ. ಕುಕ್ಕೆ ಶ್ರೀ ಸುಬ್ರಹ್ಮಣ್ಯ ನಾಗಾರಾಧನೆಯ ಪ್ರಮುಖ ಕ್ಷೇತ್ರವಾಗಿದ್ದು, ಹೊರ ರಾಜ್ಯಗಳಿಂದಲೂ ಸಾವಿರಾರು ಭಕ್ತರು ಆಗಮಿಸುತ್ತಾರೆ.

ಹಾಕಿ ಉತ್ಸವದಲ್ಲಿ ಆಕರ್ಷಕ ಶ್ವಾನ ಪ್ರದರ್ಶನ

ಮಡಿಕೇರಿ,ಏ.17– ಮಡಿಕೇರಿಯಲ್ಲಿ ನಡೆಯುತ್ತಿರುವ ಮುದ್ದಂಡ ಕಪ್ ಹಾಕಿ ಉತ್ಸವಕ್ಕೆ ಇಂದು ಶ್ವಾನ ಪ್ರದರ್ಶನ ಮೆರುಗು ನೀಡಿತು. ವಿವಿಧ ತಳಿಯ ಶ್ವಾನಗಳು ಹಾಕಿ ಮೈದಾನದಲ್ಲಿ ತಮ್ಮ ಆಕರ್ಷಣೆ ಮತ್ತು ಚಾಕಚಕ್ಯತೆಯಿಂದ ನೋಡುಗರ ಗಮನ ಸೆಳೆದವು. ಶ್ವಾನ ಪ್ರದರ್ಶನದಲ್ಲಿ ರಾಟ್ ವಿಲ್ಲರ್, ಗ್ರೇಟ್‌ಡೇನ್, ಮ್ಯಾಸ್ಟಿಫ್, ಸೈಬೀರಿಯನ್ ಹಸ್ಕಿ ಪಗ್, ಬುಲ್ ಡಾಗ್, ಗೋಲ್ಡನ್ ರೆಟ್ರೀವರ್, ಬೀಗಲ್, ಲ್ಯಾಬ್ರಡರ್, ಜರ್ಮನ್ ಶಫರ್ಡ್, ಮುಧೋಳ್ ಹೌಂಡ್ ಸೇರಿದಂತೆ 17 ವಿವಿಧ ತಳಿಯ ಅಧಿಕ ಸಂಖ್ಯೆಯ ಶ್ವಾನಗಳು ಆಕರ್ಷಿಸಿದವು. ಎಲ್ಲಾ ಶ್ವಾನಗಳಿಗೆ ಜಿಲ್ಲಾ ಪಶುವೈದ್ಯಕೀಯ ಇಲಾಖೆಯಿಂದ ಉಚಿತ ರೇಬಿಸ್ ಲಸಿಕೆ ಹಾಗೂ ಔಷಧಿ, ಪಾಲಿ ಕ್ಲಿನಿಕ್‌ನಿಂದ ಜಂತು ನಾಶಕ ಲಸಿಕೆ ಹಾಕಲಾಯಿತು.

ಪಶುವೈದ್ಯಕೀಯ ಇಲಾಖೆಯ ಸಹಯೋಗದಲ್ಲಿ ನಡೆದ ಶ್ವಾನ ಪ್ರದರ್ಶನವನ್ನು ಉದ್ಘಾಟಿಸಿ ಮಾತನಾಡಿದ ಅಖಿಲ ಕೊಡವ ಸಮಾಜದ ಅಧ್ಯಕ್ಷ ಪರದಂಡ ಸುಬ್ರಮಣಿ ಮಾನವನ ವಿಶ್ವಾಸ, ನಂಬಿಕೆಗೆ ಅರ್ಹವಾದ ನಿಷ್ಠಾವಂತ ಸಾಕು ಪ್ರಾಣಿಗಳಲ್ಲಿ ಶ್ವಾನ ಅಗ್ರ ಸ್ಥಾನ ಪಡೆದಿದೆ. ಮನೆಯಲ್ಲಿ ಪ್ರಾಣಿಗಳನ್ನು ಸಾಕುವುದರಿಂದ ನಿಷ್ಕಲ್ಮಶವಾದ ಪ್ರೀತಿ ಬೆಳೆಯುತ್ತದೆ. ಪ್ರತಿಯೊಬ್ಬರು ಪ್ರಾಣಿಗಳನ್ನು ಉತ್ತಮ ರೀತಿಯಲ್ಲಿ ಪೋಷಣೆ ಮಾಡಬೇಕು ಎಂದರು.


ಹಾಕಿ ಉತ್ಸವದಲ್ಲಿ ಪಾಲ್ಗೊಂಡಿರುವ ಶ್ವಾನಗಳು.

ಪಶುಸಂಗೋಪನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಜಿಲ್ಲಾ ಉಪನಿರ್ದೇಶಕ ಡಾ.ಲಿಂಗರಾಜು ಹಾ.ದೊಡ್ಡಮನಿ ಮಾತನಾಡಿ, ಪ್ರಾಣಿಗಳನ್ನು ರೇಬಿಸ್ ಕಾಯಿಲೆಯಿಂದ ರಕ್ಷಿಸಲು ಲಸಿಕೆ ಏಕೈಕ ಮಾರ್ಗವಾಗಿದ್ದು, ಜಿಲ್ಲೆಯ ಎಲ್ಲಾ ಪಶು ವೈದ್ಯಕೀಯ ಆಸ್ಪತ್ರೆಯಲ್ಲಿ ಉಚಿತ ಲಸಿಕೆ ನೀಡಲಾಗುತ್ತದೆ. ಸಾರ್ವಜನಿಕರು ತಮ್ಮ ಪ್ರಾಣಿಗಳಿಗೆ ಕಡ್ಡಾಯವಾಗಿ ಲಸಿಕೆ ಹಾಕಿಸುವ ಮೂಲಕ ಮಾರಣಾಂತಿಕ ಕಾಯಿಲೆಯಿಂದ ರಕ್ಷಿಸುವಂತೆ ಸಲಹೆ ನೀಡಿದರು.

ಮುದ್ದಂಡ ಕಪ್ ಹಾಕಿ ಉತ್ಸವ ಸಮಿತಿಯ ಅಧ್ಯಕ್ಷ ಮುದ್ದಂಡ ರಶಿನ್ ಸುಬ್ಬಯ್ಯ ಮಾತನಾಡಿ, ಶ್ವಾನಪ್ರಿಯರಿಗೆ ಉತ್ತೇಜನ ನೀಡುವ ಉದ್ದೇಶದಿಂದ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ವಿವಿಧ ತಳಿಯ ಶ್ವಾನಗಳನ್ನು ನೋಡಲು ಅವಕಾಶವಾಗಿದೆ. ಪ್ರಸ್ತುತ ದಿನಗಳಲ್ಲಿ ರಾಷ್ಟ್ರ, ಅಂತರಾಷ್ಟ್ರೀಯ ಮಟ್ಟದಲ್ಲಿ ಶ್ವಾನಗಳಿಗೆ ಹೆಚ್ಚು ಬೇಡಿಕೆ ಇದೆ ಮನುಷ್ಯನಿಗೆ ಅತೀ ಆತ್ಮೀಯವಾದ ಮತ್ತು ನಂಬಿಕೆ ಪ್ರಾಣಿ ಶ್ವಾನವಾಗಿದ್ದು, ಮುಂದಿನ ವರ್ಷಗಳಲ್ಲಿ ನಡೆಯುವ ಹಾಕಿ ಹಬ್ಬಗಳಲ್ಲೂ ಶ್ವಾನ ಪ್ರದರ್ಶನ ನಡೆಸುವ ಮೂಲಕ ಪ್ರೋತ್ಸಾಹ ನೀಡಬೇಕು ಎಂದರು.

ಪಾಲಿಕ್ಲಿನಿಕ್ ಜಿಲ್ಲಾ ಉಪನಿರ್ದೇಶಕ ಕ್ಯಾಪ್ಟನ್ ಡಾ.ಸಿ.ಪಿ.ತಿಮ್ಮಯ್ಯ ಮಾತನಾಡಿ, ಪ್ರಸ್ತುತ ದಿನಗಳಲ್ಲಿ ಶ್ವಾನವನ್ನು ಸಾಕುವವರ ಸಂಖ್ಯೆ ಹೆಚ್ಚಾಗಿದೆ ನಮ್ಮಿಂದ ಯಾವುದೇ ಪ್ರಾಣಿಗಳನ್ನು ಸಾಕಲು ಸಾಧ್ಯವಾಗದೇ ಇದ್ದಲ್ಲಿ ಶ್ವಾನವನ್ನು ಸಾಕುವಂತೆ ಸಲಹೆ ನೀಡಿದರು.

ಪಶುಸಂಗೋಪನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಪ್ರಸನ್ನ, ನಿವೃತ್ತ ಉಪನಿರ್ದೇಶಕ ಡಾ.ಕೆ.ಪಿ. ಅಯ್ಯಪ್ಪ, ಮುದ್ದಂಡ ಕಪ್ ಹಾಕಿ ಉತ್ಸವ ಸಮಿತಿಯ ಕಾರ್ಯದರ್ಶಿ ಮುದ್ದಂಡ ಆದ್ಯ ಪೂವಣ್ಣ, ಉಪಾಧ್ಯಕ್ಷ ಡೀನ್ ಬೋಪಣ್ಣ ಮತ್ತಿತರ ಪ್ರಮುಖರು ಉಪಸ್ಥಿತರಿದ್ದರು.

ಮಳೆಗಾಲಕ್ಕೂ ಮುನ್ನ ರಸ್ತೆ ಕಾಮಗಾರಿ ಪೂರ್ಣಗೊಳಿಸಿ


ಕಾಂಕ್ರೀಟ್ ರಸ್ತೆಯನ್ನು ಉದ್ಘಾಟಿಸುತ್ತಿರುವ ಶಾಸಕ ಎ.ಎಸ್.ಪೊನ್ನಣ್ಣ.

ವಿರಾಜಪೇಟೆ, ಏ.17– ವಿರಾಜಪೇಟೆ ವ್ಯಾಪ್ತಿಯ ಅನೇಕ ರಸ್ತೆಗಳ ಕಾಮಗಾರಿ ಮುಗಿದಿದೆ. ಇನ್ನು ಕೆಲವು ಮುಗಿಯುವ ಹಂತದಲ್ಲಿದ್ದು, ಬಾಕಿ ಉಳಿದಿರುವ ಎಲ್ಲಾ ರಸ್ತೆಗಳು ಮತ್ತು ಕಾಲು ದಾರಿಗಳ ಅಭಿವೃದ್ಧಿ ಕಾಮಗಾರಿ ಮಳೆ ಹಿಡಿಯುವ ಮುಂಚಿತವಾಗಿ ಮುಗಿಸಬೇಕಾಗಿದೆ ಎಂದು ಸ್ಥಳೀಯ ಶಾಸಕ ಎ.ಎಸ್.ಪೊನ್ನಣ್ಣ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಪುರಸಭೆ ವ್ಯಾಪ್ತಿಯ 9ನೇ ವಾರ್ಡ್ ವಿದ್ಯಾನಗರ ಮತ್ತು ಸೆಲ್ವನಗರದ ಮೂರು ಕಡೆಗಳಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ 45 ಲಕ್ಷ ರೂ. ವಿಶೇಷ ಅನುದಾನದಲ್ಲಿ ನಿರ್ಮಾಣಗೊಂಡ ನೂತನ ಕಾಂಕ್ರೀಟ್ ರಸ್ತೆ ಉದ್ಘಾಟಿಸಿ ಮಾತನಾಡಿದ ಅವರು, ಮಳೆಯ ನೀರು ಹರಿದು ಹೋಗಲು ಎಲ್ಲಾ ರಸ್ತೆಗಳ ಬದಿ ಚರಂಡಿಗಳನ್ನು ಅಗತ್ಯವಾಗಿ ಮಾಡಬೇಕು. ಇದಕ್ಕೆ ಮುಂದಿನ ದಿನ ದಲ್ಲಿ ಹೆಚ್ಚಿನ ಅನುದಾನ ಬರಲಿದೆ. ಹೊಸ ಯೋಜನೆ ಗಳನ್ನು ಸರಕಾರ ಜಾರಿಗೆ ತರಲಿದೆ ಎಂದರು.

ಕಾಂಕ್ರೀಟ್ ರಸ್ತೆ ಉದ್ಘಾಟನೆಯಲ್ಲಿ ಪುರಸಭೆ ಅಧ್ಯಕ್ಷೆ ಎಂ.ಕೆ.ದೇಚಮ್ಮ, ಉಪಾಧ್ಯಕ್ಷೆ ಫಸಿಹಾ ತಬಸಮ್, ಮುಖ್ಯಧಿಕಾರಿ ಪಿ.ಕೆ.ನಾಚಪ್ಪ, ಸ್ಥಳೀಯ ವಾರ್ಡ್ ಸದಸ್ಯ ಕೆ.ಹೆಚ್.ಮಹಮದ್ ರಫಿ, ಪುರಸಭೆ ಸದಸ್ಯರಾದ ರಂಜಿ ಪೂಣಚ್ಚ, ಎಸ್.ಹೆಚ್.ಮತೀನ್, ಡಿ.ಪಿ.ರಾಜೇಶ್, ಅಗಸ್ಟಿನ್ ಬೆನ್ನಿ, ಆಸೀಫ್ ಮನ್ನಾ, ಅಲ್ಪಸಂಖ್ಯಾತರ ಘಟಕದ ಜಿಲ್ಲಾ ಅಧ್ಯಕ್ಷ ಪಿ.ಎ.ಹನೀಫ್, ವಿರಾಜಪೇಟೆ ಬ್ಲಾಕ್ ಕಾಂಗ್ರೆಸ್ ಅಲ್ಪಸಂಖ್ಯಾತರ ಘಟಕದ ಕೋಲುಮಂಡ ರಫೀಕ್, ಗ್ಯಾರಂಟಿ ಅನುಷ್ಠಾನದ ಸಿ.ಎ.ನಾಸೀರ್, ಸ್ಥಳೀಯ ನಿವಾಸಿ ಅಶ್ರಫ್ ಹಾಗೂ ಮುಂತಾದವರು ಹಾಜರಿದ್ದರು.

ಮುದ್ದಂಡ ಕಪ್ ಹಾಕಿ ಉತ್ಸವದಲ್ಲಿ ಹಲವು ತಂಡಗಳು ಮುನ್ನಡೆ


ನಾಪಂಡ–ಕೊಂಡ್ಯೋಳಂಡ ತಂಡಗಳ ನಡುವಿನ ಪಂದ್ಯಾಟ.

ಮಡಿಕೇರಿ,ಏ.17– ಮುದ್ದಂಡ ಕಪ್ ಹಾಕಿ ಉತ್ಸವದ ಏ.17ರಂದು ನಡೆದ ಪಂದ್ಯಾವಳಿಯ ಕುಪ್ಪಂಡ (ಕೈಕೇರಿ), ಮತ್ರಂಡ, ಪರದಂಡ, ಮುಕ್ಕಾಟಿರ(ಬೋಂದ), ಐನಂಡ, ನೆಲ್ಲಮಕ್ಕಡ, ನಾಪಂಡ, ಕೋಳೆರ, ಚೆಕ್ಕೇರ, ಕೂತಂಡ ಪೆಮ್ಮಂಡ ತಂಡಗಳು ಮುನ್ನಡೆ ಸಾಧಿಸಿವೆ.

ಏ.18ರ ಪಂದ್ಯಾವಳಿಗಳು

ಮೈದಾನ–1 : ಬೆಳಿಗ್ಗೆ 9 ಗಂಟೆಗೆ ಚೋಯಮಾಡಂಡ–ಕೋಟೇರ, 10 ಗಂಟೆಗೆ ಕುಮ್ಮಂಡ–ಪುದಿಯೊಕ್ಕಡ, 11 ಗಂಟೆಗೆ ಮುಕ್ಕಾಟಿರ(ಬೋಂದ)–ಚಂಗುಲಂಡ, ಮಧ್ಯಾಹ್ನ 1 ಗಂಟೆಗೆ ಅಟ್ರಂಗಡ–ಮಳವಂಡ, 2 ಗಂಟೆಗೆ ಕಾಯಪಂಡ–ಮೇಕೇರಿರ, 3 ಗಂಟೆಗೆ ನಂಬುಡುಮಾಡ–ಅಂಜಪರವಂಡ

ಮೈದಾನ–2 : ಬೆಳಿಗ್ಗೆ 2 ಗಂಟೆಗೆ ಅಮ್ಮಣಿಚಂಡ–ಅಜ್ಜಮಾಡ, 10 ಗಂಟೆಗೆ ಮೇರಿಯಂಡ–ಬೊವ್ವೆರಿಯಂಡ, 11 ಗಂಟೆಗೆ ನೆರವಂಡ–ಚೆರುಮಂದಂಡ, ಮಧ್ಯಾಹ್ನ 1 ಗಂಟೆಗೆ ಮುರುವಂಡ–ಮಂಡೇಪಂಡ, 2 ಗಂಟೆಗೆ ಪುಲ್ಲಂಗಡ–ಸಣ್ಣುವಂಡ, 3 ಗಂಟೆಗೆ ಸೋಮೆಯಂಡ–ಕಲಿಯಂಡ ತಂಡಗಳ ನಡುವೆ ಪಂದ್ಯಾಟ ನಡೆಯಲಿದೆ.

ನಾಳೆಯಿಂದ ಕಲ್ತೋಡು ಮುತ್ತಪ್ಪ ಜಾತ್ರೆ

ಗೋಣಿಕೊಪ್ಪ,ಏ.17– ಮಾಯಮುಡಿ ಗ್ರಾಮದ ಕಲ್ತೋಡು ಮುತ್ತಪ್ಪ ದೇವರ ವಾರ್ಷಿಕೋತ್ಸವ ಏ.19, 20 ರಂದು ಜರುಗಲಿದೆ. ಶನಿವಾರ ಬೆಳಗ್ಗೆ 7 ಗಂಟೆಗೆ ಗಣಪತಿ ಹೋಮ, ಸಂಜೆ 7 ಗಂಟೆಗೆ ಮುತ್ತಪ್ಪನ್ ವೆಳ್ಳಾಟಂ, 8 ಗಂಟೆಗೆ ಅನ್ನಸಂರ್ಪಣೆ ನೆರವೇರಲಿದೆ. ಭಾನುವಾರ ವಿವಿಧ ಆಚರಣೆಗಳು ನಡೆಯಲಿದೆ. ಭಕ್ತರು ಪೈಂಗುತ್ತಿ, ಮುತ್ತಪ್ಪನ್ ವೆಳ್ಳಾಟಂ ಸೇವೆಗಳನ್ನು ಕೂಡ ಪಡೆದುಕೊಳ್ಳಬಹುದಾಗಿದೆ ಎಂದು ದೇವಾಲಯದ ಪ್ರಕಟಣೆ ತಿಳಿಸಿದೆ.

ಮದ್ದೂರಮ್ಮನ ಅದ್ದೂರಿ ಕೊಂಡೋತ್ಸವ


ಸಾವಿರಾರು ಭಕ್ತರ ಸಮ್ಮುಖದಲ್ಲಿ ಮದ್ದೂರಮ್ಮ ಕೊಂಡೋತ್ಸವ ಅದ್ದೂರಿಯಿಂದ ನಡೆಯಿತು.

ಮದ್ದೂರು: ಪಟ್ಟಣದ ಪುರಾಣ ಪ್ರಸಿದ್ಧ ಶಕ್ತಿ ದೇವತೆ ಶ್ರೀ ಮದ್ದೂರಮ್ಮನವರ ಕೊಂಡೋತ್ಸವ ಸಾವಿರಾರು ಭಕ್ತಾಧಿಗಳ ಸಮ್ಮುಖದಲ್ಲಿ ಸಡಗರ ಸಂಭ್ರಮದಿಂದ ಬುಧವಾರ ಅದ್ದೂರಿಯಾಗಿ ನೆರವೇರಿತು.

ದೇಗುಲದ ಆವರಣದಲ್ಲಿ ಶ್ರವಣ ನಕ್ಷತ್ರ ಶುಭ ಬ್ರಾಹ್ಮಿ ಮುಹೂರ್ತದಲ್ಲಿ ನಡೆದ ಕೊಂಡೋತ್ಸವದಲ್ಲಿ ಅರ್ಚಕ ತೇಜಸ್ ದೇವರ ಪಟ ಹೊತ್ತು ಜಿನಿ ಜಿನಿ ಕೆಂಡದ ಮೇಲೆ ಕೊಂಡ ಹಾಯ್ದಾಗ ಭಕ್ತರ ಉದ್ಘೋಷ ಮುಗಿಲು ಮುಟ್ಟಿತ್ತು. ಜಿಲ್ಲೆ ಸೇರಿದಂತೆ ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿದ್ದ ಸಾವಿರಾರು ಭಕ್ತರು ಕೊಂಡೋತ್ಸವಕ್ಕೆ ಸಾಕ್ಷಿಯಾದರು.

ಹೆಚ್ಚಿನ ಪ್ರಮಾಣದಲ್ಲಿ ಕೊಂಡೋತ್ಸವಕ್ಕೆ ಭಕ್ತಾಧಿಗಳು ಆಗಮಿಸಿದ್ದ ಹಿನ್ನೆಲೆಯಲ್ಲಿ ಕೊಂಡೋತ್ಸವ ನೋಡಲು ಅನುಕೂಲವಾಗುವಂತೆ 2 ಎಲ್‌ಇಡಿ ವಾಲ್‌ಗಳನ್ನು ಹಾಕಲಾಗಿತ್ತು. ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ಕೊಂಡೋತ್ಸವ ಮುಗಿದ ನಂತರ ಭಕ್ತಾಧಿಗಳಿಗೆ ಪ್ರಸಾದ ವಿತರಣೆ ಮಾಡಲಾಯಿತು.

ಮಂಗಳ ವಾದ್ಯದೊಂದಿಗೆ ಶಿಂಷಾ ನದಿಗೆ ತೆರಳಿ, ನದಿಯ ದಡದಲ್ಲಿ ಶ್ರೀ ಮದ್ದೂರಮ್ಮನವರಿಗೆ ನೂರೊಂದು ಚಂದ್ರ ಭಂಡಾರ, ಎಡೆಪೂಜೆ, ಹೂ–ಹೊಂಬಾಳೆ ಪೂಜೆ, ಕರಗ ಪೂಜೆ ಮಾಡಿಕೊಂಡು ಊರಿನ ಪ್ರಮುಖ ಬೀದಿಗಳಲ್ಲಿ ಭವ್ಯ ಮೆರವಣಿಗೆಯೊಂದಿಗೆ ಮಠಮನೆ ತಲುಪಿತು. ನಂತರ ಮಠಮನೆಯಿಂದ ಪ್ರಮುಖ ಬೀದಿಗಳಲ್ಲಿ ಬೃಹತ್ ಮೆರವಣಿಗೆಯೊಂದಿಗೆ ದೇಗುಲಕ್ಕೆ ಆಗಮಿಸಿತು. ಈ ವೇಳೆ ದಾರಿಯುದ್ದಕ್ಕೂ ಭಕ್ತಾಧಿಗಳು ಮದ್ದೂರಮ್ಮನಿಗೆ ವಿಶೇಷ ಸಲ್ಲಿಸಿದರು.

ಕೊಂಡೋತ್ಸವ ಅಂಗವಾಗಿ ದೇಗುಲದಲ್ಲಿ ವಿಶೇಷ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಸಂಜೆ ಹೆಣ್ಣು ಮಕ್ಕಳಿಂದ ಶ್ರೀ ಮದ್ದೂರಮ್ಮನವರಿಗೆ ಹಾಲರವಿ ಯಶಸ್ವಿಯಾಗಿ ಜರುಗಿತು.

ಏ.17 ರ ಸಂಜೆ 4 ಗಂಟೆಗೆ ಪಟ್ಟಣದ ಮಠಮನೆಯಿಂದ ಭಕ್ತರಿಂದ ಬಾಯಿ ಬೀಗ ಸೇವೆ ಸಮೇತ ಶ್ರೀ ಸಿಡಿರಣ್ಣ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಬೃಹತ್ ಮೆರವಣಿಗೆಯೊಂದಿಗೆ ಮದ್ದೂರಮ್ಮನ ದೇಗುಲಕ್ಕೆ ಆಗಮಿಸಿದ ನಂತರ ಸಿಡಿ ಉತ್ಸವ ಅತ್ಯಂತ ವೈಭವದಿಂದ ನಡೆಯಿತು.

ಜಾತಿ ಗಣತಿ ವರದಿ ಕಸದ ಬುಟ್ಟಿಗೆ ಎಸೆದು ಬಿಜೆಪಿ ವಿನೂತನ ಪ್ರತಿಭಟನೆ

'ಜಾತಿ ಜನ ಗಣತಿ ವರದಿ ಒಣ ಕಸ' ಎಂದು ಆಕ್ರೋಶ ವ್ಯಕ್ತಪಡಿಸಿದ ಪ್ರತಿಭಟನಾಕಾರರು


ಜಾತಿ ಗಣತಿ ವರದಿಯನ್ನು ಚೀಲದಲ್ಲಿ ತುಂಬಿ ಕಸಕ್ಕೆ ಬಿಸಾಕಲು ಮುಂದಾಗಿರುವುದು.

ಮಂಡ್ಯ, ಏ.17– ರಾಜ್ಯ ಸರ್ಕಾರದ ಜಾತಿ ಗಣತಿ ವರದಿಯಲ್ಲಿ ಹಿಂದುಳಿದವರ್ಗ, ದಲಿತ ವರ್ಗ ಸೇರಿದಂತೆ ಇನ್ನಿತರೆ ಸಮುದಾಯಗಳಿಗೆ ಅನ್ಯಾಯವೆಸಗಿ ಅಲ್ಪಸಂಖ್ಯಾತ ತುಷ್ಟೀಕರಣ ಮಾಡಲಾಗಿದೆ ಎಂದು ಆರೋಪಿಸಿ, ಜಾತಿ ಜನಗಣತಿ ಸಮೀಕ್ಷಾ ವರದಿಯನ್ನು ಕಸದ ಬುಟ್ಟಿಗೆ ಎಸೆದು ಬಿಜೆಪಿ ವಿಭಿನ್ನ ಪ್ರತಿಭಟನೆ ನಡೆಸಿತು. ಮಂಡ್ಯದ ನಗರಸಭೆ ಆವರಣದಲ್ಲಿ ಚೀಲವೊಂದರಲ್ಲಿ ಕಟ್ಟಿ ತಂದಿದ್ದ ಜಾತಿ ಗಣತಿ ವರದಿಯನ್ನು 'ಜಾತಿ ಜನ ಗಣತಿ ವರದಿ ಒಣ ಕಸ' ಎಂದು ಚೀಲದ ಮೇಲೆ ಬರೆದು ನಗರ ಸಭೆ ಕಸದ ವಾಹನಕ್ಕೆ ಎಸೆಯಲಾಯಿತು.

ವೀರಶೈವ ಲಿಂಗಾಯಿತ ಸಮುದಾಯಕ್ಕೆ ವರದಿಯಲ್ಲಿ ಅನ್ಯಾಯವಾಗಿದೆ. ಶಾಶ್ವತ ಹಿಂದುಳಿದ ಆಯೋಗದ ಅಧ್ಯಕ್ಷರಾಗಿದ್ದ ಜಯಪ್ರಕಾಶ್ ಹೆಗ್ಡೆ ನೀಡಿರುವ ಜಾತಿ ಗಣತಿ ವರದಿ ಶುದ್ಧ ಸುಳ್ಳಾಗಿದ್ದು, ಸರ್ಕಾರ 80 ಹೊಸ ಜಾತಿಗಳನ್ನು ಹುಟ್ಟು ಹಾಕಿದೆ. ಅಲ್ಪ ಸಂಖ್ಯಾತ ಸಮುದಾಯದ ತುಷ್ಟೀಕರಣ ರಾಜ್ಯದಲ್ಲಿ ನಡೆಯುತ್ತಿದೆ. ಹಿಂದೂಗಳನ್ನು ಒಡೆದು ಅಲ್ಪಸಂಖ್ಯಾತರನ್ನು ರಾಜ್ಯ ಸರ್ಕಾರ ಒಂದು ಮಾಡಲು ಹೊರಟಿದ್ದು, ಈ ಜಾತಿ ಗಣತಿಯೊಂದು ಒಣ ಕಸ ಎಂದು ಪ್ರತಿಭಟನಾಕಾರರು ಕಿಡಿಕಾರಿದರು.

ಸಿದ್ದರಾಮಯ್ಯ ಈ ವರದಿ ಆರ್ಥಿಕ ಮತ್ತು ಶೈಕ್ಷಣಿಕ ವರದಿ ಎಂದಿದ್ದಾರೆ. ಆದರೆ ಇದು ಸಿಎಂ ಹೇಳಿದ ವರದಿಯಲ್ಲ. ಜಾತಿ ಸಮೀಕ್ಷೆ ಹೆಸರಿನಲ್ಲಿ ಹಿಂದೂ ಧರ್ಮದ ಹಲವು ಸಮುದಾಯಗಳನ್ನು ಒಡೆಯುವ ಹುನ್ನಾರವಾಗಿದೆ ಅದೇ ರೀತಿ ಮುಸ್ಲಿಂ ಧರ್ಮದಲ್ಲೂ ಅನೇಕ ಪಂಗಡಗಳಿವೆ. ಆದರೆ ಅವುಗಳನ್ನು ವಿಂಗಡಣೆ ಮಾಡದೇ ಅವರನ್ನೇ ಹೆಚ್ಚಾಗಿ ತೋರಿಸಿದ್ದಾರೆ. ಒಕ್ಕಲಿಗ, ವೀರಶೈವ, ತಿಗಳ ಸೇರಿದಂತೆ ಹಲವು ಸಮುದಾಯಗಳ ಜನಗಣತಿಯನ್ನು ಕಡಿಮೆ ತೋರಿ ಸಲಾಗಿದೆ. ಇದರ ಜೊತೆಗೆ ಹಲವು ಹೊಸ ಜಾತಿಗಳನ್ನು ಹುಟ್ಟು ಹಾಕಿದ್ದಾರೆ ಎಂದು ದೂರಿದರು.

80 ಜಾತಿಗಳನ್ನು ವರದಿಯಲ್ಲಿ ಹೊಸದಾಗಿ ಸೇರಿಸಿದ್ದು, ಇದೊಂದು ಅವೈಜ್ಞಾನಿಕ ವರದಿಯಾಗಿದೆ. ಸರ್ಕಾರದ ಹಣದ ಹೆಸರಿನಲ್ಲಿ ಮನೆಯಲ್ಲೇ ಕುಳಿತು ಬರೆದಿರುವ ವರದಿ ಇದಾಗಿದ್ದು, ಈ ವರದಿಯನ್ನು ಒಣಕಸಕ್ಕೆ ಹಾಕುವ ಮೂಲಕ ನಾವು ಪ್ರತಿಭಟನೆ ನಡೆಸಿದ್ದೇವೆ ಎಂದರು.

ಜಿಲ್ಲಾ ಬಿಜೆಪಿ ವಕ್ತಾರ ಸಿ.ಟಿ.ಮಂಜುನಾಥ್, ಮುಖಂಡ ಶಿವಕುಮಾರ್ ಆರಾಧ್ಯ, ನಗರಸಭೆ ಮಾಜಿ ಸದಸ್ಯ ಚಾಮರಾಜು ಸೇರಿದಂತೆ ಹಲವು ಮಂದಿ ಭಾಗವಹಿಸಿದ್ದರು.

ಕಾರು ಡಿಕ್ಕಿ ಹೊಡೆದು ಬೆಂಗಳೂರು–ಮೈಸೂರು ಹೆದ್ದಾರಿ ದಾಟುತ್ತಿದ್ದ ಮಹಿಳೆ ಧಾರುಣ ಸಾವು

ಗ್ರಾಮಸ್ಥರಿಂದ ಆಕ್ರೋಶ, ರಸ್ತೆ ತಡೆ, ಸಂಚಾರ ಅಸ್ತವ್ಯಸ್ತ

ಮಂಡ್ಯ, ಏ.17– ಮಂಡ್ಯ–ಹನಕೆರೆ ಬಳಿ ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ ದಾಟುತ್ತಿದ್ದ ಮಹಿಳೆಗೆ ಅಪರಿಚಿತ ವಾಹನ ಢಿಕ್ಕಿ ಹೊಡೆದು ಮಹಿಳೆ ದಾರುಣವಾಗಿ ಸಾವನ್ನಪ್ಪಿರುವ ಘಟನೆ ಗುರುವಾರ ಸಂಜೆ ಸಂಭವಿಸಿದೆ.

ಬಿ.ಗೌಡಗೆರೆ ಗ್ರಾಮದ ಜಿ.ಕೆ.ಕೆಂಪೇಗೌಡರ ಪತ್ನಿ ಯಶೋದಮ್ಮ ಮೃತಪಟ್ಟವರು. ಮಂಡ್ಯದಿಂದ ಗ್ರಾಮಕ್ಕೆ ತೆರಳುವಾಗ ರಾಷ್ಟ್ರೀಯ ಹೆದ್ದಾರಿಯಲ್ಲಿ ರಸ್ತೆ ದಾಟಲು ಮುಂದಾದಾಗ ವೇಗವಾಗಿ ಬಂದ ಕಾರು ಡಿಕ್ಕಿ ಹೊಡೆದು ಸ್ಥಳದಲ್ಲಿ ನಿಲ್ಲಿಸದೇ ಪರಾರಿಯಾಗಿದೆ. ಘಟನೆಯಲ್ಲಿ ಮಹಿಳೆಯ ಮೃತದೇಹ ಛಿದ್ರಗೊಂಡಿದ್ದು, ಸುತ್ತಮುತ್ತಲ ಗ್ರಾಮಸ್ಥರ ಆಕ್ರೋಶಕ್ಕೆ ಕಾರಣವಾಗಿದೆ. ಗ್ರಾಮಸ್ಥರು ಎರಡು ಬದಿಯ ಹೆದ್ದಾರಿ ತಡೆದು ಆಕ್ರೋಶ ವ್ಯಕ್ತಪಡಿಸಿದರು. ಇದರಿಂದಾಗಿ ಎಕ್ಸ್‌ಪ್ರೆಸ್‌ವೇ ರಸ್ತೆ ಸಂಚಾರ ಕೆಲಕಾಲ ಅಸ್ತವ್ಯಸ್ತಗೊಂಡಿತ್ತು. ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಮತ್ತು ಗ್ರಾಮಾಂತರ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಅಪರಿಚಿತ ವಾಹನ ಡಿಕ್ಕಿ: ದಂಪತಿ ಸಾವು




ಮಂಡ್ಯ: ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ಬೈಕ್‌ನಲ್ಲಿ ಜಾತ್ರೆಗೆ ಬರುತ್ತಿದ್ದ ದಂಪತಿ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕಿನ ಕದಬಹಳ್ಳಿ ಗ್ರಾಮದ ಬಳಿ ಜರುಗಿದೆ.

ಶ್ವೇತಾ(38) ಮತ್ತು ನಾಗರಾಜು(45) ಮೃತ ದುರ್ದೈವಿಗಳು.

ಕೆ.ಆರ್.ಪೇಟೆ ತಾಲೂಕಿನ ಗದ್ದೇಹೊಸೂರು ಗ್ರಾಮದ ಶ್ವೇತಾ ಅವರನ್ನು ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲೂಕಿನ ಬಿದರಕ, ಗ್ರಾಮದ ನಾಗರಾಜು ಅವರೊಂದಿಗೆ ಮದುವೆ ಮಾಡಿಕೊಡಲಾಗಿತ್ತು ಇಬ್ಬರೂ ಬೆಂಗಳೂರಿನಲ್ಲಿ ಕೆಲಸ ಮಾಡಿಕೊಂಡು ಜೀವನ ನಡೆಸುತ್ತಿದ್ದರು.

ಗ್ರಾಮದಲ್ಲಿ ಜಾತ್ರೆ ಇದ್ದ ಕಾರಣ ಬೆಂಗಳೂರಿನಿಂದ ತಮ್ಮ ಗ್ರಾಮಕ್ಕೆ ಬೈಕ್‌ನಲ್ಲಿ ಬರುತ್ತಿದ್ದ ವೇಳೆ ಕದಬಹಳ್ಳಿ ಗ್ರಾಮದ ಬಳಿ ಅಪರಿಚಿತ ವಾಹನ ಡಿಕ್ಕಿ ಹೊಡೆದು ಪರಾರಿಯಾಗಿದ್ದು, ಸ್ಥಳದಲ್ಲೇ ದಂಪತಿ ಸಾವನ್ನಪ್ಪಿದ್ದಾರೆ. ಘಟನೆ ಸಂಬಂಧ ನಾಗಮಂಗಲ ತಾಲೂಕಿನ ಬಿಂಡಿಗನ ನವಿಲೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಪರಿಚಿತ ವಾಹನ ಡಿಕ್ಕಿ: ಬಾಲಕ ಸಾವು



ಭಾರತೀನಗರ, ಏ.17– ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ಬಾಲಕ ನೋರ್ವ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಬಿದರಹೊಸಹಳ್ಳಿ ಗೇಟ್ ಬಳಿ ಬುಧವಾರ ರಾತ್ರಿ ಸಂಭವಿಸಿದೆ.

ಮೆಣಸಗೆರೆ ಗ್ರಾಮ ಪಂಚಾಯಿತಿ ಸದಸ್ಯೆ ಲಲಿತಾಂಬ ನಾಗರಾಜು ಅವರ ಪುತ್ರ ಗಂಗಾಧರ್ (16) ಮೃತ ಬಾಲಕ.

ಮದ್ದೂರು–ಮಳವಳ್ಳಿ ಹೆದ್ದಾರಿಯಲ್ಲಿ ಹೋಗುತ್ತಿದ್ದಾಗ ಬಿದರ ಹೊಸಹಳ್ಳಿ ಗೇಟ್ ಸಮೀಪ ಮಳವಳ್ಳಿ ಕಡೆಯಿಂದ ಬಂದ ಅಪರಿಚಿತ ವಾಹನ ಡಿಕ್ಕಿ ಹೊಡೆದಿದೆ. ಡಿಕ್ಕಿ ಹೊಡೆದ ರಭಸಕ್ಕೆ ಆತ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಮೃತ ಬಾಲಕನ ಶವವನ್ನು ಕೆ.ಎಂ.ದೊಡ್ಡಿ ಆಸ್ಪತ್ರೆಯಲ್ಲಿ ಪಂಚನಾಮೆ ನಡೆಸಿ, ವಾರಸುದಾರರಿಗೆ ಒಪ್ಪಿಸಲಾಯಿತು. ಕೆ.ಎಂ.ದೊಡ್ಡಿ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ.

ನೀಲಮ್ಮ ನಿಧನ



ಕೆ.ಆರ್.ಪೇಟೆ,ಏ.17– ತಾಲೂಕಿನ ಕಸಬಾ ಹೋಬಳಿಯ ಚಿಲ್ಲದಹಳ್ಳಿ ಗ್ರಾಮದ ಪಟೇಲ್ ಕೃಷ್ಣೇಗೌಡರ ಪತ್ನಿ ನೀಲಮ್ಮ(90) ಗುರುವಾರ ಮುಂಜಾನೆ ನಿಧನ ಹೊಂದಿದ್ದಾರೆ.

ಮೃತರು ಪುತ್ರ ಹಿರಿಯ ಮುಖಂಡ ಪಟೇಲ್ ನಾಗೇಗೌಡ ಸೇರಿದಂತೆ ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಮೊಮ್ಮಗ ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಸಿ.ಎನ್.ಯತೀಶ್ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಗುರುವಾರ ಮಧ್ಯಾಹ್ನ ಸ್ವಗ್ರಾಮ ಚಿಲ್ಲದಹಳ್ಳಿ ಗ್ರಾಮದಲ್ಲಿ ನಡೆಯಿತು.

ನಾಳೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ, ಏ.17– ಸಂತೇಮರಹಳ್ಳಿ ಉಪಕೇಂದ್ರದಿಂದ ಹೊರ ಹೊಮ್ಮುವ ಮಂಗಲ ಕುಡಿಯುವ ನೀರಿನ ಫೀಡರ್‌ನ ನಿರ್ವಹಣಾ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಏ.19ರಂದು ಬೆಳಿಗ್ಗೆ 9ರಿಂದ ಸಂಜೆ 4 ಗಂಟೆಯವರೆಗೆ ಚುಂಗಡೀಪುರ, ನಡುಕಲ ಮೋಳೆ, ಮಹಂತಾಳಪುರ, ಕೆಂಪನಪುರ, ಯಡಿಯೂರು, ಕರಡಿಮೋಳೆ, ಹುಲ್ಲೇಪುರ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಹಿಂದೂ ಜಾಗೃತಿ ವೇದಿಕೆಯಿಂದ ಮಜ್ಜಿಗೆ ವಿತರಣೆ



ಚಾಮರಾಜನಗರ: ಡಾ.ಬಿ.ಆರ್. ಅಂಬೇಡ್ಕರ್ ಜನ್ಮದಿನಾಚರಣೆ ಅಂಗವಾಗಿ ನಗರದ ನಗರಸಭಾ ಕಚೇರಿ ಬಳಿ ಹಿಂದೂ ಜಾಗೃತಿ ವೇದಿಕೆ ವತಿಯಿಂದ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ವಿಶೇಷ ಪೂಜೆ ಮಾಡಿ ನಂತರ ಮೆರವಣಿಯಲ್ಲಿ ಬಂದವರಿಗೆ ಮಜ್ಜಿಗೆ, ವಿತರಣೆ ಮಾಡಲಾಯಿತು.

ಹಿಂದೂ ಜಾಗೃತಿ ವೇದಿಕೆಯ ಅಧ್ಯಕ್ಷ ಶ್ರೀಕಂಠಸ್ವಾಮಿ ಮಾತನಾಡಿ, ಭಾರತದ ಸಂವಿಧಾನ ಶಿಲ್ಪಿ ಅಂಬೇಡ್ಕರ್ ವಿಶ್ವಕ್ಕೆ ಮಾದರಿಯಾಗಿದ್ದಾರೆ ಎಂದರು. ಕಾರ್ಯಕ್ರಮದಲ್ಲಿ ವೇದಿಕೆಯ ಸಂಚಾಲಕ ಕೃಷ್ಣಕುಮಾರ್, ಮಹೇಶ್, ಇತರರು ಇದ್ದರು.

ಶ್ರೀ ಕ್ಷೇತ್ರ ಮಲೆ ಮಹದೇಶ್ವರಬೆಟ್ಟದ ಹುಂಡಿ ಎಣಿಕೆ

35 ದಿನದಲ್ಲಿ 3.26 ಕೋಟಿ ದಾಖಲೆ ಸಂಗ್ರಹ


ಹುಂಡಿಯಲ್ಲಿ ಸಂಗ್ರಹವಾಗಿದ್ದ ಹಣವನ್ನು ಎಣಿಸುತ್ತಿರುವ ಸಿಬ್ಬಂದಿ

ಹನೂರು: ತಾಲೂಕಿನ ಶ್ರೀ ಕ್ಷೇತ್ರ ಮಲೆ ಮಹದೇಶ್ವರ ಬೆಟ್ಟದ ಇತಿಹಾಸದಲ್ಲಿಯೇ ಬುಧವಾರ ನಡೆದ ಹುಂಡಿ ಹಣ ಎಣಿಕೆಯಲ್ಲಿ ಈ ಬಾರಿ 35 ದಿನಗಳ ಅವಧಿಯಲ್ಲಿ 3.26 ಕೋಟಿ ರೂ. ಸಂಗ್ರಹವಾಗಿದೆ.

ಮ.ಬೆಟ್ಟದ ಬಸ್ ನಿಲ್ದಾಣದ ಬಳಿಯ ವಾಣಿಜ್ಯ ಸಂಕೀರ್ಣದಲ್ಲಿ ಸಾಲೂರು ಬೃಹನ್ ಮಠದ ಅಧ್ಯಕ್ಷರಾದ ಶ್ರೀ ಶಾಂತ ಮಲ್ಲಿಕಾರ್ಜುನ ಸ್ವಾಮಿರವರ ಸಮ್ಮುಖದಲ್ಲಿ ಹುಂಡಿಗಳನ್ನು ತೆರೆಯಲಾಯಿತು. ಬಳಿಕ ಸಿಸಿ ಕ್ಯಾಮೆರಾ ಕಣ್ಗಾವಲಿನಲ್ಲಿ ಎಣಿಕೆ ಕಾರ್ಯ ಪ್ರಾರಂಭಿಸಲಾಯಿತು. ಎಣಿಕೆ ಕಾರ್ಯವು ಸಂಜೆ 10 ಗಂಟೆಯವರೆಗೂ ನಡೆಯಿತು.

ಸರ್ಕಾರಿ ರಜಾ ದಿನ, ಪಾದಯಾತ್ರಿಗಳು, ಯುಗಾದಿ ಅಮಾವಾಸ್ಯೆ ಜಾತ್ರಾ ಮಹೋತ್ಸವ ಸೇರಿದಂತೆ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿಯ ಯೋಜನೆಗಳಲ್ಲೊಂದಾದ ಶಕ್ತಿ ಯೋಜನೆಯ ಉಚಿತ ಪ್ರಯಾಣದ ಹಿನ್ನೆಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ದೇವಸ್ಥಾನಕ್ಕೆ ಭೇಟಿ ನೀಡಿದ್ದರಿಂದ ಹರಕೆಯ ರೂಪದಲ್ಲಿ 3,26,95,339 ನಗದು 47 ಗ್ರಾಂ ಚಿನ್ನ ಹಾಗೂ 2,200 ಬೆಳ್ಳಿ ಪದಾರ್ಥಗಳನ್ನು ಹುಂಡಿಗೆ ಹಾಕಿದ್ದಾರೆ.

ಇದಲ್ಲದೆ ಇ ಹುಂಡಿಯಿಂದ 59,0002 ವಿದೇಶಿ 11 ನೋಟುಗಳು ಇದಲ್ಲದೆ ಚಲಾವಣೆಯಲ್ಲಿ ಇಲ್ಲದ 2000 ಮುಖಬೆಲೆಯ 20 ನೋಟುಗಳು ಹುಂಡಿಯಲ್ಲಿ ಹಾಕಿದ್ದಾರೆ.

ಕಳೆದ ಮಹಾಶಿವರಾತ್ರಿ ಜಾತ್ರಾ ಮಹೋತ್ಸವದಲ್ಲಿ 3 ಕೋಟಿ 18 ಲಕ್ಷ ಇದುವರೆಗಿನ ಹುಂಡಿ ಎಣಿಕೆ ದಾಖಲೆಯ ಮೊತ್ತ ಸಂಗ್ರಹವಾಗಿತ್ತು. ಯುಗಾದಿ ಜಾತ್ರಾ ಮಹೋತ್ಸವ ಹಾಗೂ ಇನ್ನಿತರ ವಿಶೇಷ ದಿನಗಳಲ್ಲಿ ಹೆಚ್ಚಿನ ಭಕ್ತಾದಿಗಳು ಶ್ರೀ ಕ್ಷೇತ್ರ ಮಲೆ ಮಹದೇಶ್ವರ ಬೆಟ್ಟಕ್ಕೆ ಆಗಮಿಸಿದ ಹಿನ್ನೆಲೆ ಬೆಟ್ಟದ ಇತಿಹಾಸದಲ್ಲಿಯೇ 3.26 ಕೋಟಿ ದಾಖಲೆ ಮೊತ್ತ ಸಂಗ್ರಹವಾಗಿದೆ. ಶ್ರೀ ಮಲೆ ಮಹದೇಶ್ವರ ಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎ.ಈ. ರಘು, ಉಪ ಕಾರ್ಯದರ್ಶಿ ಚಂದ್ರಶೇಖರ್, ಲೆಕ್ಕ ಅಧೀಕ್ಷಕ ಗುರುಮಲ್ಲಯ್ಯ, ಪ್ರಾಧಿಕಾರದ ನಾಮನಿರ್ದೇಶಕ ಸದಸ್ಯರುಗಳಾದ ಮಹಾದೇವಪ್ಪ, ಮರಿಸ್ವಾಮಿ, ಚಾಮರಾಜನಗರ ಜಿಲ್ಲಾಡಳಿತ ಕಚೇರಿಯ ಕಲ್ಯಾಣಮ್ಮ, ಕೊಳ್ಳೇಗಾಲ ಬ್ಯಾಂಕ್ ಆಫ್ ಬರೋಡ ವ್ಯವಸ್ಥಾಪಕರು, ಪೊಲೀಸ್ ಅಧಿಕಾರಿಗಳು ಹಾಗೂ ಪ್ರಾಧಿಕಾರದ ಸಿಬ್ಬಂದಿ ಎಣಿಕೆ ಕಾರ್ಯದಲ್ಲಿ ಭಾಗವಹಿಸಿದ್ದರು.

ಹಿಮವದ್ ಗೋಪಾಲಸ್ವಾಮಿ ಬೆಟ್ಟದಲ್ಲಿ ಮಲೆಯಾಳಂ ಚಿತ್ರದ ಶೂಟಿಂಗ್

ಅರಣ್ಯಾಧಿಕಾರಿಗಳ ಅಮಾನತಿಗೆ ಆಗ್ರಹಿಸಿ ರೈತರ ಪ್ರತಿಭಟನೆ


ಗುಂಡ್ಲುಪೇಟೆ ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಅರಣ್ಯಾಧಿಕಾರಿಗಳ ಅಮಾನತಿಗೆ ಒತ್ತಾಯಿಸಿ ರಸ್ತೆ ತಡೆ ನಡೆಸಿದ್ದ ರೈತರೊಂದಿಗೆ ಶಾಸಕ ಗಣೇಶ್ ಪ್ರಸಾದ್ ಮಾತುಕತೆ ನಡೆಸಿದರು. ಮಹದೇವಪ್ಪ, ಡಾ.ಗುರುಪ್ರಸಾದ್, ಸಂಪತ್ತು ಇದ್ದರು.

ಗುಂಡ್ಲುಪೇಟೆ,ಏ.17–ಹಿಮವದ್ ಗೋಪಾಲಸ್ವಾಮಿಬೆಟ್ಟದಲ್ಲಿ ಮಲೆಯಾಳಂ ಚಿತ್ರದ ಶೂಟಿಂಗ್ ನಡೆಸಲು ಅವಕಾಶ ನೀಡಿದ ಅರಣ್ಯಾಧಿಕಾರಿಗಳ ಅಮಾನತಿಗೆ ಒತ್ತಾಯಿಸಿ ರೈತ ಸಂಘ ಹಾಗೂ ಹಸಿರು ಸೇನೆ ಕಾರ್ಯಕರ್ತರು ಪಟ್ಟಣದಲ್ಲಿ ಪ್ರತಿಭಟನೆ ನಡೆಸಿದರು.

ಹಸಿರು ಸೇನೆ ಹಾಗೂ ರೈತ ಸಂಘದ ರಾಜ್ಯ ಉಪಾಧ್ಯಕ್ಷ ಡಾ.ಗುರುಪ್ರಸಾದ್ ಹಾಗೂ ಜಿಲ್ಲಾ ಕಾರ್ಯಾಧ್ಯಕ್ಷ ಮಾಡ್ರಹಳ್ಳಿ ಮಹದೇವಪ್ಪ ನೇತೃತ್ವದಲ್ಲಿ ಗುರುವಾರ ಪಟ್ಟಣದ ಪ್ರವಾಸಿ ಮಂದಿರದಿಂದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆಯಲ್ಲಿ ಸಾಗಿದ ರೈತ ಸಂಘದ ಕಾರ್ಯಕರ್ತರು ಬಸವೇಶ್ವರ ವೃತ್ತದಲ್ಲಿ ಸುಮಾರು ಒಂದು ಗಂಟೆಗಳ ಕಾಲ ಹೆದ್ದಾರಿಯಲ್ಲಿ ಕುಳಿತು ಅರಣ್ಯಾಧಿಕಾರಿಗಳ ವಿರುದ್ಧ ಕ್ರಮಕ್ಕೆ ಒತ್ತಾಯಿಸಿದರು.

ಅರಣ್ಯಾಧಿಕಾರಿಗಳು ನಿಯಮಬಾಹಿರವಾಗಿ ನಡೆದುಕೊಳ್ಳುತ್ತಿದ್ದಾರೆ. ಸರ್ಕಾರದ ಗಮನಕ್ಕೆ ತರದೆ ಅಧಿಕಾರಿಗಳೇ ಚಿತ್ರತಂಡದಿಂದ ಲಕ್ಷಾಂತರ ರೂಪಾಯಿ ಹಣ ಪಡೆದು ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಮುಜರಾಯಿ ಇಲಾಖೆಯ ಗಮನಕ್ಕೂ ತರದೆ ಮಲೆಯಾಳಂ ಚಲನ ಚಿತ್ರದ ಶೂಟಿಂಗ್‌ಗೆ ಅವಕಾಶ ನೀಡಿದ್ದಾರೆ. ಸಾರ್ವಜನಿಕರನ್ನು ಸಂಜೆ 4 ಗಂಟೆ ನಂತರ ಬೆಟ್ಟಕ್ಕೆ ಬಿಡಲು ನಿರ್ಬಂಧಿಸುವ ಅಧಿಕಾರಿಗಳು ಹಣದಾಸೆಗೆ ತಮಗೆ ಬೇಕಾದವರನ್ನು ಮಾತ್ರ ಬಿಟ್ಟು ಕಳಿಸುತ್ತಿದ್ದಾರೆ. ಈ ಬಗ್ಗೆ ಮಾಧ್ಯಮಗಳ ಗಮನಕ್ಕೆ ತಂದವರ ವಿರುದ್ಧ ಪ್ರತೀಕಾರಕ್ಕೆ ಮುಂದಾಗಿದ್ದು ಬೆಟ್ಟದ ತಪ್ಪಲಿನಲ್ಲಿ ಹತ್ತಾರು ವರ್ಷಗಳಿಂದ ಹೋಟೆಲ್ ಅಂಗಡಿ ನಡೆಸುತ್ತಾ ಜೀವನ ಸಾಗಿಸುತ್ತಿರುವವರನ್ನು ಎತ್ತಂಗಡಿ ಮಾಡಲು ಮುಂದಾಗಿದ್ದಾರೆ. ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಯಂತ್ರಗಳ ಬಳಕೆ ನಿರ್ಬಂಧಿಸಿದ್ದರೂ ಅರಣ್ಯದೊಳಗೆ ಜೆಸಿಬಿಗಳನ್ನು ಬಳಸಿ ಕಾಮಗಾರಿ ನಡೆಸುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಸ್ತೆ ತಡೆ ತೆರವುಗೊಳಿಸಲು ಪೊಲೀಸರು ಮಾಡಿದ ಪ್ರಯತ್ನ ವಿಫಲವಾದ ಹಿನ್ನೆಲೆಯಲ್ಲಿ ಸ್ಥಳಕ್ಕೆ ಆಗಮಿಸಿದ ಶಾಸಕ ಹೆಚ್.ಎಂ. ಗಣೇಶ್ ಪ್ರಸಾದ್ ಮಾತನಾಡಿ, ಚಿತ್ರೀಕರಣ ನಡೆಸಿದ ಬಗ್ಗೆ ತಾವು ಮಾಹಿತಿ ಪಡೆದುಕೊಂಡಿದ್ದು ಅರಣ್ಯ ಪ್ರದೇಶದಲ್ಲಿ ಚಿತ್ರೀಕರಣಕ್ಕೆ ಅವಕಾಶ ನೀಡಲು ಸಾಧ್ಯವಿದೆ. ಆದರೆ ಕಂದಾಯ ಇಲಾಖೆಯ ಗಮನಕ್ಕೆ ತರದಿರುವ ಬಗ್ಗೆ ತಾವು ಸಚಿವರ ಮತ್ತು ಸರ್ಕಾರದ ಗಮನಕ್ಕೆ ತಂದು ಕ್ರಮ ಕೈಗೊಳ್ಳುವುದಾಗಿ ಹೇಳಿದರು.

ತಮ್ಮ ಮನವಿಯನ್ನು ನನಗೆ ಕೊಟ್ಟರೆ ಇದೇ ತಿಂಗಳ 24ರಂದು ನಡೆಯುವ ಸಚಿವ ಸಂಪುಟದ ಸಭೆಯಲ್ಲಿ ಕ್ರಮಕೈಗೊಳ್ಳಲಾಗುವುದು ಎಂದು ಹೇಳಿದರು.

ನಿಯಮಬಾಹಿರವಾಗಿ ನಡೆದುಕೊಳ್ಳುತ್ತಿರುವ ಅರಣ್ಯಾಧಿಕಾರಿಗಳನ್ನು ಕೂಡಲೇ ಅಮಾನತು ಮಾಡಿ ಪ್ರಕರಣವನ್ನು ತನಿಖೆ ಮಾಡಿಸಬೇಕು ಎಂದು ರೈತ ಮುಖಂಡರು ಒತ್ತಾಯಿಸಿದರು. ನಾನು ಜವಾಬ್ದಾರಿಯುತ ಶಾಸಕನಾಗಿದ್ದು ಜನತೆಯಿಂದ ಆಯ್ಕೆಯಾಗಿದ್ದೇನೆ. ಮುಂದಿನ ದಿನಗಳಲ್ಲಿ ಹಿರಿಯ ಅಧಿಕಾರಿಗಳ ಸಮ್ಮುಖದಲ್ಲಿ ರೈತರ ಮತ್ತು ಅಧಿಕಾರಿಗಳ ಸಭೆ ನಡೆಸಲು ಅವಕಾಶ ಮಾಡಿಕೊಡುವುದಾಗಿ ಹೇಳಿ ಸಾರ್ವಜನಿಕರ ಹಿತಾಸಕ್ತಿಯಿಂದ ರಸ್ತೆ ತಡೆ ತೆರವುಗೊಳಿಸಿ ಎಂದು ಮನವರಿಕೆ ಮಾಡಿದ ನಂತರ ರಸ್ತೆ ತಡೆ ತೆರವುಗೊಳಿಸಲಾಯಿತು.


ಅಕ್ಕಮ್ಮ ನಿಧನ



ಆಲೂರು: ಚಾಮರಾಜನಗರ ತಾಲೂಕಿನ ಆಲೂರು ಹೊಮ್ಮ ಗ್ರಾಮದ ನಿವಾಸಿ ಹಂಡ್ರಕಳ್ಳಿ ಲೇಟ್ ಮರಪ್ಪನವರ ಧರ್ಮಪತ್ನಿ ಅಕ್ಕಮ್ಮ (91) ಗುರುವಾರ ನಿಧನರಾದರು.

ದಿವಂಗತರು ಮೂವರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ನಾಳೆ (ಶುಕ್ರವಾರ) ಮಧ್ಯಾಹ್ನ 2 ಘಂಟೆಗೆ ತೋಟದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪಿಜ್ಜಾ ಡೆಲಿವರಿ ಬಾಯ್ ಶಿವರಾಜ್‌ಕುಮಾರ್ !



ಸೆಂಚುರಿ ಸ್ಟಾರ್ ಶಿವರಾಜ್ ಕುಮಾರ್ ಅವರು ತಮ್ಮ ಅನಾರೋಗ್ಯದ ಹಿನ್ನೆಲೆಯಲ್ಲಿ ಸಿನಿಮಾ ಚಟುವಟಿಕೆಗಳಿಂದ ಒಂದಷ್ಟು ದಿನ ಬ್ರೇಕ್ ತೆಗೆದುಕೊಂಡಿದ್ದರು. ಹೆಚ್ಚು ಕಡಿಮೆ ಆರೇಳು ತಿಂಗಳು ಸಿನಿಮಾ ಸಂಬಂಧಿ ಚಟುವಟಿಕೆಗಳಿಂದ ದೂರವಿದ್ದರು. ಅಮೆರಿಕದಲ್ಲಿ ಕ್ಯಾನ್ಸರ್ ಚಿಕಿತ್ಸೆ ಪಡೆದು ಫಿಟ್ ಅಂಡ್ ಫೈನ್ ಆಗಿ ಮರಳಿ ಬಂದಿರುವ ಶಿವರಾಜ್‌ಕಮಾರ್ ಈಗಾಗಲೇ ಮತ್ತೆ ಆಕ್ಟಿವ್ ಆಗಿದ್ದು, ಶೂಟಿಂಗ್‌ನಲ್ಲೂ ಭಾಗವಹಿಸುತ್ತಿದ್ದಾರೆ. ಈಗಾಗಲೇ ಶಿವಣ್ಣ ಒಪ್ಪಿಕೊಂಡಿರುವ ಸಿನಿಮಾಗಳು ಒಂದೊಂದಾಗಿಯೇ ಟೇಕಾಫ್ ಆಗುತ್ತಿವೆ. ಟಾಲಿವುಡ್‌ನ ರಾಮ್‌ಚರಣ್ ನಟಿಸುತ್ತಿರುವ ಸಿನಿಮಾಗೆ ಇತ್ತೀಚೆಗೆ ಲುಕ್‌ಟೆಸ್ಟ್ ಕೂಡ ನಡೆದಿದೆ. ಈ ಮಧ್ಯೆ ಪುತ್ರಿ ನಿವೇದಿತಾ ನಿರ್ಮಾಣದ ಫೈರ್‌ಫ್ಲೈ ಸಿನಿಮಾದ ಪ್ರಚಾರದಲ್ಲಿ ಶಿವಣ್ಣ ಬ್ಯುಸಿಯಾಗಿದ್ದಾರೆ. ಹೌದು, ಪುತ್ರಿ ನಿವೇದಿತಾ ಶಿವರಾಜಕುಮಾರ್ ನಿರ್ಮಿಸಿರುವ ಫೈರ್‌ಫ್ಲೈ ಸಿನಿಮಾ ರಿಲೀಸ್‌ಗೆ ರೆಡಿಯಾಗಿದ್ದು, ಚಿತ್ರದ ಪ್ರಚಾರ ಕಾರ್ಯ ನಡೆಯುತ್ತಿದೆ. ಕಳೆದ ಭಾನುವಾರ ಸಂಜೆ ಶಿವಣ್ಣ ಅವರ ನಿವಾಸದಲ್ಲಿ ಈ ಚಿತ್ರದ ಟ್ರೈಲರ್ ಲಾಂಚ್ ಆಗಿದೆ. ಟ್ರೈಲರ್‌ನ ಕೊನೆಯಲ್ಲಿ ಸೆಂಚುರಿ ಸ್ಟಾರ್ ಶಿವರಾಜಕುಮಾರ್ ಅವರು ಒಬ್ಬ ಪಿಜ್ಜಾ ಡೆಲಿವರಿ ಬಾಯ್ ಅವತಾರದಲ್ಲಿ ಎಂಟ್ರಿ ಕೊಟ್ಟಿದ್ದು , ಅದನ್ನು ಕಂಡು ಅವರ ಅಭಿಮಾನಿಗಳು ಥ್ರಿಲ್ ಆಗಿದ್ದಾರೆ. ಈ ಟ್ರೈಲರ್‌ನಲ್ಲಿ ಶಿವಣ್ಣ ಅವರ ಎಂಟ್ರಿಯೇ ಸರ್‌ಪ್ರೈಸಿಂಗ್ ಆಗಿದೆ.

ಇದುವರೆಗೆ ಈ ಚಿತ್ರದಲ್ಲಿ ಶಿವಣ್ಣ ಅವರು ನಟಿಸುತ್ತಿದ್ದಾರೆ ಎನ್ನುವ ಚಿಕ್ಕದೊಂದು ಸುಳಿವನ್ನು ಸಹ ಚಿತ್ರತಂಡ ಬಿಟ್ಟುಕೊಟ್ಟಿರಲಿಲ್ಲ. ಟ್ರೈಲರ್ ರಿಲೀಸ್ ಆಗುವವರೆಗೂ ಆ ಗೌಪ್ಯತೆಯನ್ನು ಹಾಗೇ ಕಾಪಾಡಿಕೊಂಡೇ ಬಂದಿದ್ದರು. ಈಗ ಟ್ರೈಲರ್‌ನಲ್ಲಿ ಹ್ಯಾಟ್ರಿಕ್ ಹೀರೋ ಹಿಂದೆಂದೂ ಕಾಣಿಸದ ಗೆಟಪ್‌ನಲ್ಲಿ ಎಂಟ್ರಿ ಕೊಟ್ಟಿದ್ದಾರೆ. ಟ್ರೈಲರ್‌ನ ಕೊನೆಯಲ್ಲಿ ಫಿಜ್ಜಾ ಡೆಲಿವರಿ ಬಾಯ್ ಅವತಾರದಲ್ಲಿ ಶಿವಣ್ಣ ಎಂಟ್ರಿ ಕೊಟ್ಟಿದ್ದಾರೆ. ಲಿಫ್ಟ್ ಓಪನ್ ಆಗುತ್ತಿದ್ದಂತೆ ಶರ್ಟ್ ಮೇಲೆ 'ದಿ ಕಿಂಗ್ಸ್ ಪಿಜ್ಜಾ' ಅನ್ನೋದು ಕಾಣಿಸುತ್ತೆ. ಹೆಡ್‌ಫೋನ್ ಹಾಕೊಂಡು, ಕೈಯಲ್ಲಿ ಪಿಜ್ಜಾ ಇಟ್ಕೊಂಡು ರೆಡಿ ಎನ್ನುತ್ತಾ ಶಿವಣ್ಣ ಎಂಟ್ರಿ ಕೊಡುತ್ತಾರೆ. ಕೆಲವೇ ಸೆಕೆಂಡುಗಳಲ್ಲಿ ಎಂಟ್ರಿ ಕೊಟ್ಟು ಮರೆಯಾಗುವ ಶಿವಣ್ಣ ಅವರ ಲುಕ್‌ಗೆ ಫ್ಯಾನ್ಸ್ ಫಿದಾ ಆಗಿದ್ದಾರೆ. ಇದರಲ್ಲಿ ಶಿವಣ್ಣ ಸಿಕ್ಕಾಪಟ್ಟೆ ಯಂಗ್ ಆಗಿ ಕಾಣಿಸಿಕೊಂಡಿರೋದು ಮತ್ತೊಂದು ವಿಶೇಷ. ಈ ಜನರೇಷನ್‌ನ ಯಂಗ್ ಡೆಲಿವರಿ ಬಾಯ್ ಲುಕ್‌ನಲ್ಲಿ ಶಿವಣ್ಣ ಸಿಕ್ಕಾಪಟ್ಟೆ ಇಷ್ಟ ಆಗುತ್ತಾರೆ. ಅತಿಥಿ ಪಾತ್ರದಲ್ಲಿ ಶಿವಣ್ಣನ ಎಂಟ್ರಿ ಫೈರ್‌ಫ್ಲೈ ಚಿತ್ರದ ಕುತೂಹಲವನ್ನು ಹೆಚ್ಚಿಸಿದೆ, ಈ ಸಿನಿಮಾವನ್ನು ವಂಶಿ ಅವರು ನಿರ್ದೇಶನ ಮಾಡುವ ಜತೆಗೆ ಅವರೇ ಚಿತ್ರದ ನಾಯಕನಾಗೂ ಕಾಣಿಸಿಕೊಂಡಿದ್ದಾರೆ, ಇವರ ಜತೆ ನಾಯಕಿಯಾಗಿ ನಟಿ ರಚನಾ ಇಂದರ್ ಅವರು ನಟಿಸಿದ್ದಾರೆ. ಇನ್ನು ಕನ್ನಡದ ಹಿರಿಯ ಕಲಾವಿದರಾದ ಸುಧಾರಾಣಿ, ಅಚ್ಯುತ್‌ಕುಮಾರ್ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ಇನ್ನು ಫೈರ್‌ಫ್ಲೈ ಸಿನಿಮಾ ಇದೇ ಏಪ್ರಿಲ್ 24ರಂದು ಅಣ್ಣಾವ್ರ ಹುಟ್ಟುಹಬ್ಬದ ವಿಶೇಷವಾಗಿ ಗ್ರ್ಯಾಂಡಾಗಿ ರಿಲೀಸಾಗುತ್ತಿದೆ. ಈ ನ್ಯೂ ಏಜ್ ಸಿನಿಮಾಗೆ ಪ್ರೇಕ್ಷಕರ ಪ್ರತಿಕ್ರಿಯೆ ಹೇಗಿರುತ್ತೆ ಅನ್ನೋದು ಮುಂದಿನ ದಿನಗಳಲ್ಲಿ ಗೊತ್ತಾಗಲಿದೆ.

ಬ್ಯಾಂಕ್ ಆಫ್ ಭಾಗ್ಯಲಕ್ಷ್ಮಿಯಲ್ಲಿ ಶಿವನ ಹಾಡು



ರಂಗಿತರಂಗ, ಅವನೇ ಶ್ರೀಮನ್ನಾರಾಯಣದಂತಹ ಹಿಟ್ ಚಿತ್ರಗಳ ನಿರ್ಮಾಪಕ ಹೆಚ್.ಕೆ.ಪ್ರಕಾಶ್ ನಿರ್ಮಾಣದ, ದೀಕ್ಷಿತ್‌ಶೆಟ್ಟಿ, ಬೃಂದಾ ಆಚಾರ್ಯ ಪ್ರಮುಖ ಪಾತ್ರಗಳಲ್ಲಿ ನಟಿಸಿರುವ ಹಾಗೂ ಅಭಿಷೇಕ್ ಎಂ. ನಿರ್ದೇಶನದ ಬ್ಯಾಂಕ್ ಆಫ್ ಭಾಗ್ಯಲಕ್ಷ್ಮಿ ಚಿತ್ರದ ಮೊದಲ ಹಾಡಿನ ಬಿಡುಗಡೆ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು. ನಾಗಾರ್ಜುನ ಶರ್ಮ ರಚನೆಯ, ಶಿವನ ಕುರಿತಾದ ಹರ ಓಂ ಎಂಬ ಸಾಹಿತ್ಯ ಇರುವ ಹಾಡು ಇದಾಗಿದೆ. ಕನ್ನಡ, ತೆಲುಗು ಸೇರಿದಂತೆ ಎರಡು ಭಾಷೆಗಳಲ್ಲಿ ಈ ಚಿತ್ರ ನಿರ್ಮಾಣವಾಗುತ್ತಿದೆ. ಕನ್ನಡದಲ್ಲಿ ಶಿಲ್ಪ ಹಾಗೂ ತೆಲುಗಿನಲ್ಲಿ ಗಾಯಕಿ ಮಂಗ್ಲಿ ಹಾಡಿದ್ದಾರೆ. ಜ್ಯೂಡಾ ಸ್ಯಾಂಡಿ ಅವರ ಸಂಗೀತ ಸಂಯೋಜನೆಯ ಈ ಹಾಡಿಗೆ ಉಷಾ ಭಂಡಾರಿ ಹಾಗೂ ದರ್ಶನ್ ನೃತ್ಯಸಂಯೋಜನೆ ಮಾಡಿದ್ದಾರೆ.

ನಿರ್ದೇಶಕ ಅಭಿಷೇಕ್ ಮಾತನಾಡುತ್ತಾ, ಇದು ನನ್ನ ಮೊದಲ ನಿರ್ದೇಶನದ ಚಿತ್ರ ನಾನು, ರಕ್ಷಿತ್‌ಶೆಟ್ಟಿ ಹಾಗೂ ಸಚಿನ್ ಸೇರಿ ಪಿನಾಕ ಎಂಬ ವಿಎಫ್‌ಎಕ್ಸ್ ಸ್ಟುಡಿಯೋ ನಡೆಸುತ್ತಿದ್ದೇವೆ. ಪ್ರಕಾಶ್ ಅವರು ಅವನೇ ಶ್ರೀಮನ್ನಾರಾಯಣ ಚಿತ್ರದಿಂದಲೂ ಪರಿಚಯ. ಈ ಚಿತ್ರದ ಕಥೆ ಕೇಳಿ ಅವರು ನಿರ್ಮಾಣಕ್ಕೆ ಮುಂದಾದರು. ಬ್ಯಾಂಕ್ ಆಫ್ ಭಾಗ್ಯಲಕ್ಷ್ಮಿ ವಿಭಿನ್ನ ಕಥಾಹಂದರ ಹೊಂದಿರುವ ಚಿತ್ರ. ಈಗಾಗಲೇ ಚಿತ್ರದ ಚಿತ್ರೀಕರಣ ಮುಕ್ತಾಯವಾಗಿದ್ದು, ಹರ ಓಂ ಚಿತ್ರದ ಪ್ರೀ ಕ್ಲೈಮ್ಯಾಕ್ಸ್‌ನಲ್ಲಿ ಬರುವ ಹಾಡಾಗಿದ್ದು, ಕನ್ನಡ ಹಾಗೂ ತೆಲುಗು ಭಾಷೆಗಳಲ್ಲಿ ಏಕಕಾಲಕ್ಕೆ ಬಿಡುಗಡೆಯಾಗಿದೆ ಚಿತ್ರದ ಕಥೆಗೆ ಹಾಗೂ ಈ ಹಾಡಿಗೂ ಒಂದು ಸಂಬಂಧವಿದೆ. ಅದೇನೆಂದು ಚಿತ್ರದಲ್ಲೇ ನೋಡಬೇಕು ಎಂದು ಹೇಳಿದರು, ಈ ವರ್ಷದ ಮಧ್ಯದಲ್ಲಿ ಚಿತ್ರವನ್ನು ತೆರೆಗೆ ತರುವ ಸಿದ್ಧತೆ ನಡೆಯುತ್ತಿದೆ ಎಂದರು.

ನಿರ್ಮಾಪಕ ಪ್ರಕಾಶ್ ಮಾತನಾಡುತ್ತಾ, ರಂಗಿತರಂಗ ಚಿತ್ರದಿಂದ ನಿರ್ಮಾಪಕನಾದೆ. ಇದು ನನ್ನ ನಿರ್ಮಾಣದ ಆರನೇ ಚಿತ್ರ, ರಂಗಿತರಂಗ ಹಾಡುಗಳು ಲಹರಿ ಸಂಸ್ಥೆಯಿಂದ ಬಿಡುಗಡೆಯಾಗಿತ್ತು. ಈ ಚಿತ್ರದ ಹಾಡುಗಳು ಸಹ ಲಹರಿಯಲ್ಲೇ ಬಿಡುಗಡೆಯಾಗಿದೆ ನಿರ್ದೇಶಕ ಅಭಿಷೇಕ್ ಒಂದು ಉತ್ತಮ ಕಥೆ ಮಾಡಿದ್ದಾರೆ. ರಂಗಿ ತರಂಗ ಹತ್ತು ವರ್ಷಗಳ ಹಿಂದೆ ಜುಲೈನಲ್ಲಿ ಬಿಡುಗಡೆಯಾಗಿತ್ತು ಬ್ಯಾಂಕ್ ಆಫ್ ಭಾಗ್ಯಲಕ್ಷ್ಮಿ ಚಿತ್ರವನ್ನು ಸಹ ಜುಲೈನಲ್ಲೇ ಬಿಡುಗಡೆ ಮಾಡುತ್ತೇವೆ ಎಂದರು.



ಇಂದು ಬಿಡುಗಡೆಯಾಗಿರುವ ಹಾಡಿನ ವಿಶೇಷವೆಂದರೆ ಇದರಲ್ಲಿ ನನ್ನ ಗುರುಗಳು ಹಾಗೂ ನಾನು ಪಾಠ ಹೇಳಿ ಕೊಟ್ಟಿರುವ ಹುಡುಗರು ಅಭಿನಯಿಸಿದ್ದಾರೆ ಎಂದು ನಾಯಕ ದೀಕ್ಷಿತ್ ಶೆಟ್ಟಿ ತಿಳಿಸಿದರು. ನನ್ನ ದಿನಚರಿ ಆರಂಭವಾಗುವುದೇ ಶಿವನಾಮ ಸ್ಮರಣೆಯಿಂದ ನಮ್ಮ ಚಿತ್ರದ ಈ ಹಾಡನ್ನು ಕೇಳಿದ ಮೇಲಂತೂ ಅದನ್ನು ಎಷ್ಟುಸಲ ಗುನುಗಿದ್ದೇನೊ ಲೆಕ್ಕವಿಲ್ಲ. ಅಷ್ಟು ಅದ್ಭುತವಾಗಿದೆ ಹರ ಓಂ ಹಾಡು ಎಂದು ನಾಯಕಿ ಬೃಂದಾ ಆಚಾರ್ಯ ಹೇಳಿದರು.

ಮೇ 9ಕ್ಕೆ ಚಂದನ್ ಶೆಟ್ಟಿಯ 'ಸೂತ್ರಧಾರಿ' ತೆರೆಗೆ



ಈಗಲ್ ಮೀಡಿಯಾ ಕ್ರಿಯೇಷನ್ಸ್‌ನ ನವರಸನ್ ಅವರು ನಿರ್ಮಿಸಿರುವ ಚಿತ್ರ ಸೂತ್ರಧಾರಿ. ನವರಸನ್ ಅವರ ನಿರ್ಮಾಣದ ಐದನೇ ಚಿತ್ರ ಇದಾಗಿದ್ದು, ಗಾಯಕ ಹಾಗೂ ಸಂಗೀತ ನಿರ್ದೇಶಕ ಚಂದನ್ ಶೆಟ್ಟಿ ಅವರು ಈ ಚಿತ್ರದಲ್ಲಿ ನಾಯಕನಾಗಿ ಕಾಣಿಸಿಕೊಂಡಿದ್ದಾರೆ. ನಾಯಕಿಯಾಗಿ ಕೃಷ್ಣ ಟಾಕೀಸ್ ಖ್ಯಾತಿಯ ಅಪೂರ್ವ ಅವರು ನಟಿಸಿದ್ದಾರೆ. ಇತ್ತೀಚೆಗೆ ಈ ಚಿತ್ರವನ್ನು ವೀಕ್ಷಿಸಿದ ಪ್ರಾದೇಶಿಕ ಸೆನ್ಸಾರ್ ಮಂಡಳಿ ಯು/ಎ ಪ್ರಮಾಣ ಪತ್ರ ನೀಡಿ ಬಿಡುಗಡೆಗೆ ಅನುಮತಿಸಿದೆ. ಮೇ 9ರಂದು ಈ ಚಿತ್ರ ರಾಜ್ಯಾದ್ಯಂತ ತೆರೆಕಾಣಲಿದೆ.

ಚಂದನ್ ಶೆಟ್ಟಿ ಅವರೇ ಸಂಗೀತ ನೀಡಿರುವ ಈ ಚಿತ್ರದ ಹಾಡುಗಳು ಈಗಾಗಲೇ ಟ್ರೆಂಡಿಂಗ್‌ನಲ್ಲಿದೆ. ಡ್ಯಾಶ್ ಸಾಂಗ್ ಅಂತೂ ನಿರೀಕ್ಷೆಗೂ ಮೀರಿ ಜನಪ್ರಿಯವಾಗಿದೆ. ಟೀಸರ್ ಹಾಗೂ ಹಾಡುಗಳ ಮೂಲಕ ಮೋಡಿ ಮಾಡಿರುವ ಸೂತ್ರಧಾರಿ ಚಿತ್ರದ ಬಿಡುಗಡೆಗೆ ಚಂದನ್ ಶೆಟ್ಟಿ ಅಭಿಮಾನಿಗಳು ಕಾತುರದಿಂದ ಕಾಯುತ್ತಿದ್ದಾರೆ. ಕ್ರೈಮ್ ಥ್ರಿಲ್ಲರ್ ಕಥಾಹಂದರ ಹೊಂದಿರುವ ಈ ಚಿತ್ರವನ್ನು ಕಿರಣ್‌ಕುಮಾರ್ ಅವರು ನಿರ್ದೇಶಿಸಿದ್ದಾರೆ.

ಪಿಕೆಹೆಚ್ ದಾಸ್ ಅವರ ಛಾಯಾಗ್ರಹಣ, ಸತೀಶ್ ಚಂದ್ರಯ್ಯ ಅವರ ಸಂಕಲನ ಹಾಗೂ ಮೋಹನ್ ಅವರ ನೃತ್ಯ ನಿರ್ದೇಶನ ಸೂತ್ರಧಾರಿ ಚಿತ್ರಕ್ಕಿದೆ.

ಚಂದನ್ ಶೆಟ್ಟಿ ಜತೆ ನಾಯಕಿಯಾಗಿ ನಟಿ ಅಪೂರ್ವ ಬಣ್ಣ ಹಚ್ಚಿದ್ದಾರೆ. ಸಂಜನಾ ಆನಂದ್ ಈ ಚಿತ್ರದ ಹಾಡೊಂದಕ್ಕೆ ಹೆಜ್ಜೆ ಹಾಕಿದ್ದಾರೆ. ತಬಲನಾಣಿ, ಪ್ರಶಾಂತ್ ನಟನ ಮುಂತಾದವರು ಈ ಚಿತ್ರದ ಪ್ರಮುಖ ತಾರಾಬಳಗದಲ್ಲಿದ್ದಾರೆ.

ವಿಶ್ವದಲ್ಲೇ ಮೊದಲ ಬಾರಿಗೆ ಎಐ ತಂತ್ರಜ್ಞಾನದ 'ಲವ್ ಯು'



ಜಗತ್ತಿನಲ್ಲಿ ಈಗ ಎಲ್ಲಿ ನೋಡಿದರೂ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನದ್ದೇ ಮಾತು. ನಿಧಾನವಾಗಿ ಒಂದೊಂದೇ ಕ್ಷೇತ್ರವನ್ನು ಆವರಿಸಿಕೊಂಡು ಬರುತ್ತಿರುವ ಕೃತಕ ಬುದ್ಧಿಮತ್ತೆ(ಎಐ) ಈಗಾಗಲೇ ಚಿತ್ರರಂಗವನ್ನೂ ಸ್ಪರ್ಶಿಸಿದೆ. ಸಿನಿಮಾಗಳ ಹಲವು ವಿಭಾಗಗಳಲ್ಲಿ, ಪ್ರೀ ಪ್ರೊಡಕ್ಷನ್ ಮತ್ತು ಪೋಸ್ಟ್ ಪ್ರೊಡಕ್ಷನ್ ಕೆಲಸಗಳಲ್ಲಿ ಎಐ ತಂತ್ರಜ್ಞಾನದ ಬಳಕೆ ನಿಧಾನವಾಗಿ ಹೆಚ್ಚಾಗುತ್ತಿದೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿರುವ ಚಿತ್ರ ತಂಡವೊಂದು ಸಂಪೂರ್ಣವಾಗಿ ಎಐ ತಂತ್ರಜ್ಞಾನದ ಮೂಲಕ 'ಲವ್ ಯು' ಎಂಬ ಚಲನಚಿತ್ರವನ್ನು ನಿರ್ಮಿಸಿದೆ.

ವಿಶ್ವದಲ್ಲೇ ಮೊದಲ ಬಾರಿಗೆ ಈ ಚಿತ್ರವನ್ನು ಸಂಪೂರ್ಣ ಎಐ ಟೆಕ್ನಾಲಜಿಯಲ್ಲಿ ನಿರ್ಮಿಸಲಾಗಿದೆ. ಚಿತ್ರರಂಗದಲ್ಲಿ ಇಂಥದೊಂದು ಸಾಹಸ ಹಿಂದೆಂದೂ ನಡೆದಿಲ್ಲ ಮೊದಲ ಬಾರಿಗೆ ಕನ್ನಡದಲ್ಲಿ ನಡೆದಿರುವುದು ನಮಗೆಲ್ಲ ಹೆಮ್ಮೆಯ ವಿಷಯವೇ. ಈ ಚಿತ್ರದ ನಿರ್ದೇಶನ ಹೊರತುಪಡಿಸಿದರೆ, ಮತ್ತೆಲ್ಲ ಕೆಲಸಗಳನ್ನೂ ಎಐ ತಂತ್ರಜ್ಞಾನದಿಂದಲೇ ಮಾಡಲಾಗಿದೆ ಎನ್ನುತ್ತಾರೆ ನಿರ್ದೇಶಕ ಎಸ್.ನರಸಿಂಹಮೂರ್ತಿ.

ನಮ್ಮ ಸಿನಿಮಾದಲ್ಲಿ ಬರುವ ಪಾತ್ರಗಳು, ಸಂಭಾಷಣೆ, ಸಂಗೀತ, ಛಾಯಾಗ್ರಹಣ, ಸೌಂಡ್ ಡಿಸೈನ್, ಬ್ಯಾಕ್‌ಗ್ರೌಂಡ್ ಲೊಕೇಶನ್‌ಗಳು ಹೀಗೆ ಎಲ್ಲವನ್ನೂ ಎಐ ತಂತ್ರಜ್ಞಾನದಿಂದಲೇ ಮಾಡಲಾಗಿದೆ ಎಂದು ಅವರು ಹೇಳುತ್ತಾರೆ. ಅಂದಹಾಗೆ, 95 ನಿಮಿಷಗಳ ಅವಧಿಯ ಲವ್ ಯು ಸಿನಿಮಾದಲ್ಲಿ ಬರೋಬ್ಬರಿ 12 ಹಾಡುಗಳಿವೆ. ಅವೆಲ್ಲವೂ ಎಐ ಮೂಲಕ ಸಂಯೋಜಿಸಲ್ಪಟ್ಟು, ಮುದ್ರಣಗೊಂಡಿವೆ. ಈಗಾಗಲೇ ಲವ್ ಯು ಸಿನಿಮಾದ ಬಹುತೇಕ ಕೆಲಸಗಳು ಪೂರ್ಣಗೊಂಡಿದ್ದು, ಇತ್ತೀಚೆಗೆ ಚಿತ್ರವನ್ನು ವೀಕ್ಷಿಸಿದ ಸೆನ್ಸಾರ್ ಮಂಡಳಿ ಚಿತ್ರಕ್ಕೆ ಯು/ಎ ಪ್ರಮಾಣ ಪತ್ರ ನೀಡಿದೆ. ಲವ್ ಯು ಚಿತ್ರವನ್ನು ಮೇ ಅಥವಾ ಜೂನ್ ವೇಳೆಗೆ ತೆರೆಗೆ ತರುವ ಯೋಜನೆ ಚಿತ್ರ ತಂಡಕ್ಕಿದೆ.

ಕಲಿಗಾಲ ಗೀತೆಗೆ ವಿಜಯ್ ಪ್ರಕಾಶ್ ಧ್ವನಿ



ಸಮಾಜದಲ್ಲಿ ನಡೆಯುವ ಅತ್ಯಾಚಾರ, ಕೊಲೆ ಸುಲಿಗೆಗಳನ್ನು ಕಂಡಾಗ ಸಾಮಾನ್ಯವಾಗಿ ನಾವೆಲ್ಲ ಇದೆಲ್ಲ ಕಲಿಗಾಲದ ಮಹಿಮೆ ಎಂದು ಹೇಳುತ್ತೇವೆ. ಇದೀಗ ಇದೇ ಪದ ಚಲನಚಿತ್ರವೊಂದರ ಶೀರ್ಷಿಕೆಯಾಗಿದೆ. ಸದ್ಯದಲ್ಲೇ ತೆರೆಗೆ ಬರಲು ಸಿದ್ಧವಾಗುತ್ತಿರುವ ಕಲಿಗಾಲ ಚಿತ್ರದ ಶೀರ್ಷಿಕೆ ಗೀತೆಗೆ ಪಳನಿ.ಡಿ. ಸೇನಾಪತಿ ಅವರು ಸಂಗೀತ ಸಂಯೋಜನೆ ಮಾಡಿದ್ದಾರೆ. ಅಲ್ಲದೆ ಈ ಚಿತ್ರದ ಶೀರ್ಷಿಕೆ ಗೀತೆಗೆ ವಿಜಯ್ ಪ್ರಕಾಶ್ ಅವರು ದನಿಯಾಗಿದ್ದಾರೆ, ವಿಜಯ್ ಪ್ರಕಾಶ್ ಅವರ ಕಂಠದಲ್ಲಿ ಈ ಚಿತ್ರದ ಹಾಡಿನ ಧ್ವನಿಮುದ್ರಣ ಕಾರ್ಯ ಇತ್ತೀಚೆಗೆ ಹಂಸಲೇಖಾ ಅವರ ಸ್ಟುಡಿಯೋದಲ್ಲಿ ನಡೆಯಿತು. ಎಸ್‌ಜಿಆರ್ ಮೂವೀ ಮೇಕರ್ಸ್ ಅಡಿಯಲ್ಲಿ ಎನ್.ರಾಜು ಸುಲ್ತಾನ್‌ಪಾಳ್ಯ ಅವರು ಈ ಚಿತ್ರವನ್ನು ನಿರ್ಮಿಸಿದ್ದಾರೆ. ನಿರ್ಮಾಣದ ಜತೆಗೆ ಪ್ರಮುಖ ಪಾತ್ರದಲ್ಲೂ ಸಹ ಕಾಣಿಸಿಕೊಂಡಿದ್ದಾರೆ. ಈ ಚಿತ್ರಕ್ಕೆ ದಯಾಕರರಾವ್.ವಿ. ಚಿತ್ರಕಥೆ ಬರೆದು ಆಕ್ಷನ್‌ಕಟ್ ಹೇಳಿದ್ದಾರೆ.

ಚಿತ್ರದ ನಾಯಕನಾಗಿ ಪ್ರತಾಪ್ ರಾಜ್ ಕಾಣಿಸಿಕೊಳ್ಳುತ್ತಿದ್ದು, ನಾಯಕಿಯ ಆಯ್ಕೆ ಪ್ರಕ್ರಿಯೆ ನಡೆಯುತ್ತಿದೆ. ಉಳಿದಂತೆ ಅಪೂರ್ವ ಶ್ರೀ, ಸೂರ್ಯ ಕುಂದಾಪುರ, ಸಿಲ್ಲಿಲಲ್ಲಿ ಶ್ರೀನಿವಾಸ್, ವೆಂಕಟಾಚಲ, ಅರಸಿಕೆರೆ ರಾಜು, ಚಂದ್ರು, ಕೆಇಬಿ ಮಂಜು, ದಿವ್ಯ, ಶಂಖನಾದ ಆಂಜನಪ್ಪ ಮುಂತಾದವರು ನಟಿಸುತ್ತಿದ್ದಾರೆ.

ನಾರಾಯಣ್.ಸಿ. ಅವರ ಛಾಯಾಗ್ರಹಣ, ಮಂಜೇಗೌಡ ಅವರ ಕಥೆ, ಹೆಚ್.ಕೆ. ಪ್ರಕಾಶ್ ಹೆಸರುಘಟ್ಟ ಅವರ ಸಾಹಿತ್ಯ, ಆರ್.ದೊರೈರಾಜ್ ಸಂಕಲನ ಈ ಚಿತ್ರಕ್ಕಿದೆ. ಈಗಾಗಲೇ ಕಲಿಗಾಲ ಚಿತ್ರಕ್ಕೆ ಶೇಕಡ 80ರಷ್ಟು ಚಿತ್ರೀಕರಣವನ್ನು ಹೆಸರುಘಟ್ಟದ ಸುತ್ತಮುತ್ತ ನಡೆಸಲಾಗಿದೆ. ಬಾಕಿ ಉಳಿದ ಮೂರು ಹಾಡುಗಳು ಹಾಗೂ ಮಾತಿನಭಾಗದ ದೃಶ್ಯಗಳನ್ನು ಸೆರೆಹಿಡಿಯಲು ಚಿತ್ರತಂಡ ಯೋಜನೆ ರೂಪಿಸಿಕೊಂಡಿದೆ. ಚಿತ್ರದ ನಿರ್ಮಾಪಕರು ಎನ್.ರಾಜು ಅಲ್ಲದೆ ಚಿತ್ರಕಥೆ ಮತ್ತು ನಿರ್ದೇಶನ ದಯಾಕರರಾವ್.ವಿ. ಅವರದಾಗಿದೆ.

ಸಿನಿಪದಬಂಧ-573



ಉಮ್ಮತ್ತೂರು ಇಂದುಶೇಖರ್
ಮೊ.9880820462

1			■	2				3		■
	■	■	■		■	■	■		■	4
5		■	6		■	7				
	■	■	■	8			■		■	
9		10	■		■		■	11		
	■		■		■		■		■	
12				■	■		■	■	13	■
	■		■	14						
	■	15		■	■		■	■		■
■	■		■	16			■	17		
■	18			■	■	■	■	■		■

ಹೆಸರು ______
ವಿಳಾಸ ______
______
ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1. ವೃಕ್ಷದ ನಡುವೆ ಸಿಕ್ಕ ಗಂಡು ನವಿಲು 3
2. ತಾಯಿಯ ನುಡಿ ಚಿತ್ರದ ನಾಯಕ 6
5. ಸಂಜು __ ಗೀತಾ 2
6. ಗುರಿ ಚಿತ್ರದ ನಿರ್ದೇಶಕ ಇಲ್ಲಿ ಇನ್ಸಿಲ್ ಕಳೆದುಕೊಂಡಿದ್ದಾನೆ 2
7. ಹೆಂಡತಿಯಪ್ಪನ ಗೃಹ 5
8. ಪ್ರಾಣಿಯೊಂದರ ಮಧ್ಯೆ ಬಾರಿಸಿದ ಚರ್ಮ ವಾದ್ಯ 3
9. ಭಕ್ತ ಪ್ರಹ್ಲಾದ ಚಿತ್ರದ ಸರಿತಾಳ ಪಾತ್ರ ಇಲ್ಲಿ ತಿರುಗಿದೆ 3
11. ಜಗಳಗಂಟಿ ಹೆಣ್ಣಿಗೆ ಹೀಗೊಂದು ಪದ 3
12. ಗೆಲುವು ಕಂಡ ಲಕ್ಷ್ಮಣನ ಸಹೋದರ ಇಲ್ಲಿ ತಿರುಗಿದ್ದಾನೆ 4
14. ಕಲ್ಪನಾ ಅಭಿನಯದಲ್ಲಿ ಅರಳಿದ ಪುಷ್ಪ 7
15. ಅಂತ ಚಿತ್ರದ ನಾಯಕಿ 2
16. ಶ್ರೀನಾಥ್- ಮಂಜುಳಾ ಅಭಿನಯದ ಚಿತ್ರ ಬಂಧಿಸಿದೆ 3
17. ಅನಂತ್ ನಾಗ್- ಖುಷ್ಬೂವಿನ ಆಕಾಶ 3
18. ವಿಜಯ ಶಾಂತಿ ಹಿಡಿದ ಅಸ್ತ್ರ 3

ಮೇಲಿನಿಂದ ಕೆಳಕ್ಕೆ

1. ಗೀತಪ್ರಿಯ ನಿರ್ದೇಶನದಲ್ಲಿ ಮೂರು ಬಾರಿ ನಡೆದ ವಿವಾಹ 9
2. ಸ್ವಪ್ನ ನಿಜವಾಗಿದೆ 6
3. "ನಾನೇ ವೀಣೆ ನೀನೆ ತಂತಿ ಅವನೇ ವೈಣಿಕ.... ", ಗೀತೆಯ ಚಿತ್ರ 6
4. ಮಾವನ ಗೃಹದಲ್ಲೇ ಠಿಕಾಣಿ ಹೂಡಿದ ಮಗಳ ಗಂಡ 5
7. ಪ್ರಾಣಿಯೊಂದರ ಮೇಲೆ ಊರದೇವಿಯ ದೃಷ್ಟಿ 8
10. ದುನಿಯಾ ಚಿತ್ರದ ಹಾಡೊಂದರ ಸಾಲು 7
13. ಅಂಬರೀಷ್ - ಮಾಲಾಶ್ರೀಯ ಪ್ರೀತಿಯ ಮಿಲನ 5

ಸಿನಿ ಪದಬಂಧ 572ರ ಉತ್ತರ

ಮಾ	ರ್ಜಾ	ಲ	■	ಅ	ಜ	ಯ್	ವಿ	ಜ	ಯ್	■
ವ	■	■	■	ಳಿ	■	■	■	ನು	■	ಅಂ
ನಿ	ತ್ಯಾ	■	ಗಾ	ಯ	■	ಜ	ನು	ಮ	ದಾ	ತ
ಗೆ	■	■	■	ಗೆ	ಳೆ	ಯ	■	ದ	■	ರಾ
ತ	ರಿ	ಸ	■	ಳೆ	■	ತು	■	ಜೋ	ಗು	ಳ
ಕ್ಕ	■	ವಿ	■	ಯ	■	ಜ	■	ಡಿ	■	■
ಅ	ವ	ಸ	ರ	■	■	ಯ	■	■	ನೇ	■
ಳಿ	■	ವಿ	■	ಒ	ಲ	ವಿ	ನ	ಆ	ಸ	ರೆ
ಯ	■	ನೆ	ಮ	■	■	ತ	■	■	ರ	■
■	■	ನ	■	ಕ	ಮ	ಲ	■	ವಿ	ನೋ	ದ್
■	ನೂ	ಪು	ರ	■	■	■	■	■	ಡು	■

ವಿಜೇತರು: ಧನ್ಯಾ ಎಸ್.ಎಲ್., ನಂ.53, 4ನೇ ಕ್ರಾಸ್, ಜ್ಞಾನ ಮಾರ್ಗ, ಗೌತಮ ಬಡಾವಣೆ, ನಂಜನಗೂಡು

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

15 ತಿಂಗಳೊಳಗೆ ಗುಂಪು ಮನೆ ಕಾಮಗಾರಿ ಪೂರ್ಣ

ಶಾಸಕ ಡಿ.ರವಿಶಂಕರ್ ಭರವಸೆ


ಗುಂಪು ಮನೆ ಕಾಮಗಾರಿಯನ್ನು ಶಾಸಕ ಡಿ.ರವಿಶಂಕರ್ ಪರಿಶೀಲಿಸಿದರು.

ಕೆಆರ್.ನಗರ, ಏ.17– ರಾಜೀವ್ ಗಾಂಧಿ ವಸತಿ ನಿಗಮದಿಂದ ಪಟ್ಟಣದ 4 ಭಾಗಗಳಲ್ಲಿ ನಿರ್ಮಿಸುತ್ತಿರುವ ಗುಂಪು ಮನೆ ಕಾಮಗಾರಿಯನ್ನು ಮುಂದಿನ 15 ತಿಂಗಳೊಳಗೆ ಪೂರ್ಣಗೊಳಿಸುವುದಾಗಿ ಶಾಸಕ ಡಿ.ರವಿಶಂಕರ್ ಭರವಸೆ ನೀಡಿದರು.

ಪಟ್ಟಣದ ಮಧುವನಹಳ್ಳಿ ಬಡಾವಣೆ ಬಳಿ ನಿರ್ಮಿಸುತ್ತಿರುವ ಗುಂಪು ಮನೆ ಕಾಮಗಾರಿ ಪರಿಶೀಲಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪುರಸಭೆ ವ್ಯಾಪ್ತಿಯ 1ನೇ ವಾರ್ಡ್‌ನ ದಿಡ್ಡೇದಮ್ಮ ದೇವಾಲಯದ ಆವರಣ, 12ನೇ ವಾರ್ಡ್‌ನ ಲಾಲನಹಳ್ಳಿ ರಸ್ತೆಯ ಸಮೀಪ, 21ನೇ ವಾರ್ಡ್‌ನ ಮುಸ್ಲಿಂ ಬಡಾವಣೆಯಲ್ಲಿರುವ ರೇಷ್ಮೆ ಇಲಾಖೆ ಕಚೇರಿ ಹಿಂಭಾಗ ಮತ್ತು 23ನೇ ವಾರ್ಡ್‌ನ ಮಧುವನಹಳ್ಳಿ ಇಟ್ಟಿಗೆ ಕಾರ್ಖಾನೆ ಹತ್ತಿರ 4 ಕಡೆ ಬಹು ಮಹಡಿ ಮನೆಗಳನ್ನು ನಿರ್ಮಿಸಲಾಗುತ್ತದೆ ಎಂದರು.

ಒಟ್ಟು 488 ಮನೆಗಳನ್ನು ನಿರ್ಮಿಸಲು ಕ್ರಿಯಾಯೋಜನೆ ತಯಾರಿಸಲಾಗಿದ್ದು, ಪ್ರಸ್ತುತ 53 ಮನೆಗಳ ನಿರ್ಮಾಣಕ್ಕೆ ನಿವೇಶನದ ಕೊರತೆ ಉಂಟಾಗಿದ್ದು, ಕೂಡಲೇ ಅಗತ್ಯವಿರುವ ಸ್ಥಳ ನಿಗದಿಪಡಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

ಮನೆಗಳ ನಿರ್ಮಾಣಕ್ಕೆ 7.35 ಎಕರೆ ಜಾಗ ನಿಗದಿಪಡಿಸಲಾಗಿದ್ದು, ಈಗಾಗಲೇ 801 ಮಂದಿ ಫಲಾನುಭವಿಗಳು ತಮ್ಮ ಪಾಲಿನ ಕಂತಿನ ಹಣ ಪಾವತಿಸಿದ್ದು, ಉಳಿದ ಅರ್ಹರು ನಿಗದಿತ ಅವಧಿಯೊಳಗೆ ಹಣ ಸಂದಾಯ ಮಾಡಬೇಕೆಂದು ಕೋರಿದರು.

ಈವರೆಗೆ ಫಲಾನುಭವಿಗಳಿಂದ ಸಂಗ್ರಹವಾಗಿರುವ 123.08 ಕೋಟಿ ಹಣದ ಪೈಕಿ ಪುರಸಭೆ ವತಿಯಿಂದ ಈಗಾಗಲೇ ರಾಜೀವ್ ಗಾಂಧಿ ವಸತಿ ನಿಗಮಕ್ಕೆ 1.18 ಕೋಟಿ ಹಣ ಪಾವತಿ ಮಾಡಲಾಗಿದ್ದು, ಮನೆ ನಿರ್ಮಾಣ ಸಂಬಂಧ ಅಗತ್ಯವಿರುವ ಎಲ್ಲಾ ಕ್ರಮ ಕೈಗೊಳ್ಳಲಾಗಿದೆ ಎಂದು ಪ್ರಕಟಿಸಿದರು.

ಮನೆ ನಿರ್ಮಾಣದ ನಂತರ ಲಾಟರಿ ಮೂಲಕ ಫಲಾನುಭವಿಗಳಿಗೆ ಮನೆಗಳನ್ನು ಹಂಚಿಕೆ ಮಾಡಲಿದ್ದು, ಈ ವಿಚಾರದಲ್ಲಿ ಯಾವುದೇ ಪಕ್ಷಪಾತ ಮತ್ತು ಹಸ್ತಕ್ಷೇಪ ಮಾಡುವುದಿಲ್ಲ ಎಂದು ಸ್ಪಷ್ಟಪಡಿಸಿದ ಶಾಸಕರು ಪ್ರತಿ ಮನೆಯ ಅಳತೆ 19x22 ಇರಲಿದೆ ಎಂದು ನುಡಿದರು.

ರಾಜೀವ್ ಗಾಂಧಿ ವಸತಿ ನಿಗಮದ ಯೋಜನೆಯಡಿ ಮನೆ ಪಡೆಯಲು ಅರ್ಜಿ ಸಲ್ಲಿಸಿರುವ ಸಾಮಾನ್ಯ ವರ್ಗದ ಫಲಾನುಭವಿಗಳು 5.44 ಲಕ್ಷ ರೂ. ಪಾವತಿಸಬೇಕಿದ್ದು, ಉಳಿದ 4.8 ಲಕ್ಷ ಮೊತ್ತವನ್ನು ಬ್ಯಾಂಕ್ ಸಾಲವನ್ನಾಗಿ ಮಂಜೂರು ಮಾಡಿಸಿಕೊಳ್ಳಬೇಕು. ಯೋಜನೆಯಡಿ ಪ್ರತಿ ಮನೆಗೆ ಕೇಂದ್ರ ಸರ್ಕಾರ 1.5 ಲಕ್ಷ ಮತ್ತು ರಾಜ್ಯ ಸರ್ಕಾರ 2 ಲಕ್ಷ ಹಣ ಸಹಾಯ ಧನವನ್ನಾಗಿ ನೀಡಲಿದೆ ಎಂದು ದಾಖಲೆ ಪ್ರದರ್ಶಿಸಿದರು.

ಈ ವೇಳೆ ಪುರಸಭೆ ಅಧ್ಯಕ್ಷ ಶಿವುನಾಯಕ್, ಸದಸ್ಯರಾದ ಪ್ರಕಾಶ್, ನಟರಾಜು, ಶಂಕರ್, ಕಾಂಗ್ರೆಸ್ ನಗರಾಧ್ಯಕ್ಷ ಎಂ.ಜೆ.ರಮೇಶ್, ಮುಖಂಡರಾದ ಶ್ರೀನಿವಾಸ್, ಚಂದ್ರು, ಆದರ್ಶ, ಧರ್ಮೇಂದ್ರ ಮೋಹನ್, ರಾಮನಾಥ್ ವಿನಯ್ ಇನ್ನಿತರರಿದ್ದರು.

ಪ್ರತಿಯೊಬ್ಬರೂ ಅಂಬೇಡ್ಕರ್ ಚಿಂತನೆಗಳನ್ನು ಪಾಲಿಸಿ


ಮಾವಿನಹಳ್ಳಿ ಗ್ರಾಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ನಡೆಯಿತು.

ತಲಕಾಡು, ಏ.17– ದೇಶದ ಪ್ರತಿಯೊಬ್ಬರಿಗೂ ಸಮಾನತೆ ನೀಡಿದ ಅಂಬೇಡ್ಕರ್ ಅವರ ಚಿಂತನೆಗಳನ್ನು ಎಲ್ಲರೂ ಪಾಲಿಸಬೇಕು ಎಂದು ಟಿ.ದೊಡ್ಡಪುರ ಗ್ರಾಪಂ ಸದಸ್ಯ ಮಾವಿನಹಳ್ಳಿ ರಾಜೇಶ್ ತಿಳಿಸಿದರು.

ಇಲ್ಲಿನ ಮಾವಿನಹಳ್ಳಿ ಗ್ರಾಮದಲ್ಲಿ ನಡೆದ ಡಾ.ಬಿ.ಆರ್.ಅಂಬೇಡ್ಕರ್ ಅವರ 134ನೇ ಜಯಂತಿಯಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ದೇಶದ ಜನರಿಗೆ ಭದ್ರ ಬುನಾದಿ ಹಾಕಿಕೊಡಲು ಪ್ರಪಂಚದಾದ್ಯಂತ ಸಂಚರಿಸಿ ಅಪಾರ ಅಧ್ಯಯನ ನಡೆಸಿದ ಅಂಬೇಡ್ಕರ್ ಅವರು ಭಾರತೀಯರಿಗೆ ಶ್ರೇಷ್ಠ ಸಂವಿಧಾನ ನೀಡಿ ಪ್ರತಿಯೊಬ್ಬರಿಗೂ ಸಮಾನತೆ, ವಾಕ್ ಸ್ವಾತಂತ್ರ್ಯ ಕಲ್ಪಿಸಿದ್ದಾರೆ. ಅಂಬೇಡ್ಕರ್ ಅವರ ದೀರ್ಘಕಾಲದ ಅಧ್ಯಯನ, ಅನೇಕ ವಿಚಾರಗಳು ಇಂದಿಗೂ ಜೀವಂತವಾಗಿದ್ದು, ಅವರ ಚಿಂತನೆಗಳು, ವಿಚಾರಗಳನ್ನು ನಾವುಗಳು ಪಾಲನೆ ಮಾಡಬೇಕಿದೆ ಎಂದರು.

ಡಾ.ಬಿ.ಆರ್.ಅಂಬೇಡ್ಕರ್ ಇಡೀ ವಿಶ್ವವೇ ಮೆಚ್ಚುವ ಶ್ರೇಷ್ಠ ಸಂವಿಧಾನವನ್ನು ಭಾರತೀಯರಿಗೆ ನೀಡಿದ್ದಾರೆ. ಅಂಬೇಡ್ಕರ್ ಅವರು ಭಾರತ ಕಂಡ ಅತ್ಯುನ್ನತ ಹಾಗೂ ಮಾನವರಿಗೆ ಸಮಾನತೆ ನೀಡಿದ ದೈವಿ ಪುರುಷರಾಗಿದ್ದು, ಅವರ ಜನ್ಮದಿನವನ್ನು ವಿಶ್ವ ಜ್ಞಾನ ದಿನವನ್ನಾಗಿಯೂ ಆಚರಿಸಲಾಗುತ್ತಿದೆ ಎಂದರು.

ಇದೇ ವೇಳೆ ಅಂಬೇಡ್ಕರ್ ರಥ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿತು. ಎಲ್ಲರಿಗೂ ಅನ್ನ ಸಂತರ್ಪಣೆ ಹಮ್ಮಿಕೊಳ್ಳಲಾಗಿತ್ತು. ಈ ವೇಳೆ ಗ್ರಾಪಂ ಸದಸ್ಯರಾದ ಮಾವಿನಹಳ್ಳಿ ಸುರೇಶ, ರಾಚಯ್ಯ, ರಮೇಶ, ಮುಖಂಡರಾದ ಲಿಂಗರಾಜು, ನಾಗರಾಜು, ನಾಗ, ಕುಮಾರ, ರಘು, ಅರುಣ, ಜ್ಯೋತಿ, ರಮೇಶ ಹಾಗೂ ಅಂಬೇಡ್ಕರ್ ಯುವಕರ ಬಳಗದ ಸಂಘದ ಸದಸ್ಯರು, ಗ್ರಾಮದ ಯಜಮಾನರು, ಮುಖಂಡರು ಭಾಗವಹಿಸಿದ್ದರು.

ಉನ್ನತ ಶ್ರೇಣಿಯಲ್ಲಿ ತೇರ್ಗಡೆ



ತಿ.ನರಸೀಪುರ, ಏ.17– ದ್ವಿತೀಯ ಪಿಯು ಪರೀಕ್ಷೆಯಲ್ಲಿ ಬನ್ನೂರಿನ ವಿವೇಕಾನಂದ ಶಿಕ್ಷಣ ಸಂಸ್ಥೆ ವಿಜ್ಞಾನ ವಿಭಾಗದ ವಿದ್ಯಾರ್ಥಿನಿ ಎನ್.ಅಭಿನಯ 535 ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಈಕೆ ತಾಲೂಕಿನ ಕೈಯಂಬಳ್ಳಿ ಗ್ರಾಮದ ಉಮಾ ಹಾಗೂ ನಂಜುಂಡಸ್ವಾಮಿ ದಂಪತಿ ಪುತ್ರಿ.

ಜಿ.ಅಮೃತಗೆ ಶೇ.91ರಷ್ಟು ಅಂಕ



ಬನ್ನೂರು, ಏ.17– ಮೈಸೂರಿನ ಸದ್ವಿದ್ಯಾ ಪ್ರೌಢಶಾಲೆ ವಿದ್ಯಾರ್ಥಿನಿ ಹಾಗೂ ಪಟ್ಟಣದ ನಿವಾಸಿ ಎಸ್.ಗಂಗಾಧರ ಮತ್ತು ಶಶಿಕಲಾ ದಂಪತಿ ಪುತ್ರಿ ಜಿ.ಅಮೃತ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.91ರಷ್ಟು ಅಂಕ ಗಳಿಸಿದ್ದಾಳೆ. ಕನ್ನಡ 97, ಇಂಗ್ಲಿಷ್ 92, ಭೌತಶಾಸ್ತ್ರ 95, ರಸಾಯನಶಾಸ್ತ್ರ 84, ಗಣಿತ 82, ಜೀವಶಾಸ್ತ್ರದಲ್ಲಿ 96 ಅಂಕ ಪಡೆದಿದ್ದಾಳೆ.

ಈಡಿಗ ಸಮಾಜ ಶಿಕ್ಷಣಕ್ಕೆ ಹೆಚ್ಚು ಮಹತ್ವ ನೀಡಬೇಕು


ಶ್ರೀಕೋದಂಡರಾಮ ದೇವಸ್ಥಾನದ ಬೆಳ್ಳಿ ಹಬ್ಬ ಸೇರಿದಂತೆ ಇನ್ನಿತರ ಕಾರ್ಯಕ್ರಮ ನಡೆಯಿತು.

ಸರಗೂರು, ಏ.17– ಆರ್ಯ ಈಡಿಗರ ಸಮಾಜ ಶಿಕ್ಷಣಕ್ಕೆ ಹೆಚ್ಚು ಮಹತ್ವ ನೀಡಬೇಕು ಎಂದು ಮೈಸೂರು ಹಾಗೂ ಚಾಮರಾಜನಗರ ಜಿಲ್ಲಾ ಆರ್ಯ ಈಡಿಗರ ಸಂಘದ ಅಧ್ಯಕ್ಷ ಪ್ರೋತರಾಜ್ ತಿಳಿಸಿದರು.

ಪಟ್ಟಣದಲ್ಲಿ ಆರ್ಯ ಈಡಿಗರ ಸಮಾಜ ಆಯೋಜಿಸಿದ್ದ ಶ್ರೀಕೋದಂಡರಾಮ ದೇವಸ್ಥಾನದ ಬೆಳ್ಳಿ ಹಬ್ಬ, 25ನೇ ವರ್ಷದ ಶ್ರೀ ರಾಮನವಮಿ ವರ್ಧಂತಿ ಮಹೋತ್ಸವ ಹಾಗೂ ನಾರಾಯಣಗುರು ಸಮುದಾಯ ಭವನ ಗುದ್ದಲಿ ಪೂಜೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಾನವೀಯ ಮೌಲ್ಯ ಮತ್ತು ಆಚರಣೆಗಳನ್ನು ಉತ್ತೇಜಿಸಲು ಸಮಾಜವನ್ನು ಸಾಮಾಜಿಕ ಸುಧಾರಣೆಯೊಂದಿಗೆ ಸಮಾಜದ ಉನ್ನತ್ತಿಗಾಗಿ ಆರ್ಯ ಈಡಿಗರ ಸಮಾಜ ಶಿಕ್ಷಣಕ್ಕೆ ಹೆಚ್ಚು ಮಹತ್ವ ನೀಡಬೇಕು. ಕಾರ್ಯಕ್ರಮ ಯಶಸ್ವಿಯಾಗಲಿ. ಸಮುದಾಯ ಭವನ ನಿರ್ಮಾಣಕ್ಕೆ ಸಮುದಾಯದ ಮುಖಂಡರು ಸಹಕಾರ ನೀಡಬೇಕು. ನಿಮ್ಮೊಂದಿಗೆ ನಾನು ಸಹಕಾರ ನೀಡುತ್ತೇನೆ ಎಂದರು.

ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘ ಅಧ್ಯಕ್ಷ ತಿಮ್ಮೇಗೌಡ ಮಾತನಾಡಿ, ನ್ಯಾಯಯುತ ಮತ್ತು ಸಮಾನ ಸಮಾಜಕ್ಕಾಗಿ ಶ್ರಮಿಸುವ ಜೊತೆಗೆ ಅಜ್ಞಾನ ದೂರವಿಟ್ಟು ಜ್ಞಾನ ಸ್ವೀಕರಿಸಬೇಕು. ಯುವಪೀಳಿಗೆ ಸಮಾಜ ಕಟ್ಟುವ ಕಾರ್ಯ ರೂಪಿಸಿ ಮಾದರಿ ಸಮಾಜ ಎಂಬ ಹೆಗ್ಗಳಿಕೆಗೆ ಹೆಸರಾಗಬೇಕು. ಆರ್ಯ ಈಡಿಗರ ಸಮಾಜದ ಶಿಕ್ಷಣ ಸಂಸ್ಥೆ ಪ್ರಾರಂಭಿಸಲು ಸಲಹೆ ನೀಡಿದರು.

ಸೋಲೂರು ಆರ್ಯ ಈಡಿಗ ಮಹಾ ಸಂಸ್ಥಾನ ಮಠದ ಪೀಠಾಧಿಪತಿ ಶ್ರೀರೇಣುಕಾನಂದ ಸ್ವಾಮೀಜಿ ಆರ್ಶೀವಚನ ನೀಡಿ ಮಾತನಾಡಿದರು. ಇದಕ್ಕೂ ಮುನ್ನ ಶ್ರೀ ಎಲ್ಲಮ್ಮ, ಶ್ರೀನಾರಾಯಣಗುರು, ಡಾ.ರಾಜ್‌ಕುಮಾರ್ ಹಾಗೂ ಪವರ್‌ಸ್ಟಾರ್ ಪುನೀತ್ ರಾಜ್‌ಕುಮಾರ್ ಭಾವಚಿತ್ರಕ್ಕೆ ಗಣ್ಯರು ಪುಷ್ಪನಮನ ಸಲ್ಲಿಸಿದರು.

ಈ ವೇಳೆ ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘದ ಉಪಾಧ್ಯಕ್ಷ ಟಿ.ಶಿವಕುಮಾರ್, ಗೋವಿಂದರಾಜು, ತಾಲೂಕು ಆರ್ಯ ಈಡಿಗರ ಸಂಘ ಅಧ್ಯಕ್ಷ ಎಸ್.ಎನ್.ನಾಗರಾಜು, ಗೌರವಾಧ್ಯಕ್ಷ ಎಸ್.ಕೆ.ನಾಗರಾಜು, ಉಪಾಧ್ಯಕ್ಷ ಎಸ್.ಎನ್.ನಾಗರಾಜು, ಕಾರ್ಯದರ್ಶಿ ಎಸ್.ಎಂ.ಶ್ರೀನಿವಾಸ್, ಖಜಾಂಚಿ ಟಿ.ಕರಿಯಪ್ಪ ಯಜಮಾನರಾದ ವೆಂಕಟೇಶ್, ಉದ್ಯಮಿ ಎನ್.ವಿ.ಕೃಷ್ಣಪ್ಪ, ಪಪಂ ಅಧ್ಯಕ್ಷೆ ರಾಧಿಕಾ, ಸದಸ್ಯರಾದ ನೂರಾಳಸ್ವಾಮಿ, ಚೈತ್ರ, ಆರ್ಯ ಈಡಿಗರ ಯುವಕ ಸಂಘ ಅಧ್ಯಕ್ಷ ಗಣೇಶ್, ಯುವ ವೇದಿಕೆ ಸಂಘದ ಅಧ್ಯಕ್ಷ ಎಸ್.ಟಿ.ರಾಜು, ಮುಖಂಡರಾದ ರಾಮಚಂದ್ರ, ನಾಗರಾಜು, ರವಿಗೌಡ್ರು, ಎಸ್.ಎಸ್.ಲೋಕನಾಥ್, ಎಸ್.ಎನ್.ಕೃಷ್ಣಪ್ಪ ರಂಗಪ್ಪ ರಾಜಣ್ಣ, ನರಸಿಂಹ, ಶ್ರೀನಿವಾಸ್, ಅಶ್ವತ್, ಲೋಡರ್ಸ್ ಸಂಘದ ಮಾಜಿ ಶ್ರೀನಿವಾಸ್, ಶ್ರೀನಾಥ್, ದಾಸೇಗೌಡ, ಮಹಿಳಾ ಸಮಾಜದ ಸಂಘದವರು ಇದ್ದರು.

ಕೆಂಪಿಸಿದ್ದನಹುಂಡಿ ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ


ಅಧ್ಯಕ್ಷರಾಗಿ ಎನ್.ನಂಜಯ್ಯ, ಉಪಾಧ್ಯಕ್ಷೆಯಾಗಿ ಹೆಚ್.ಎಸ್.ಶೋಭಾ ಆಯ್ಕೆಯಾದರು.

ನಂಜನಗೂಡು, ಏ.17– ತಾಲೂಕಿನ ಕೆಂಪಿಸಿದ್ದನಹುಂಡಿ ಗ್ರಾಪಂ ನೂತನ ಅಧ್ಯಕ್ಷರಾಗಿ ಎನ್.ನಂಜಯ್ಯ, ಉಪಾಧ್ಯಕ್ಷೆಯಾಗಿ ಹೆಚ್.ಎಸ್.ಶೋಭಾ ಆಯ್ಕೆಯಾಗಿದ್ದಾರೆ.

14 ಸದಸ್ಯ ಬಲದ ಗ್ರಾಪಂನ ಅಧ್ಯಕ್ಷ ಸ್ಥಾನ ಸಾಮಾನ್ಯ ವರ್ಗ, ಉಪಾಧ್ಯಕ್ಷ ಸ್ಥಾನ ಎಸ್ಸಿ ಮಹಿಳೆಗೆ ಮೀಸಲಾಗಿತ್ತು. ಅಧ್ಯಕ್ಷ ಸ್ಥಾನಕ್ಕೆ ಎನ್.ನಂಜಯ್ಯ ಮತ್ತು ಕೆ.ಜೆ.ಆನಂದ, ಉಪಾಧ್ಯಕ್ಷ ಸ್ಥಾನಕ್ಕೆ ಹೆಚ್.ಎಸ್.ಶೋಭಾ, ಶಿವಕುಮಾರಿ ನಾಮಪತ್ರ ಸಲ್ಲಿಸಿದ್ದರು. ಗ್ರಾಪಂ ಕಚೇರಿಯಲ್ಲಿ ನಡೆದ ಚುನಾವಣೆಯಲ್ಲಿ ಎನ್.ನಂಜಯ್ಯ 8 ಮತ ಪಡೆದು ಅಧ್ಯಕ್ಷರಾಗಿ ಆಯ್ಕೆಯಾದರೇ, ಪ್ರತಿಸ್ಪರ್ಧಿ ಕೆ.ಜೆ.ಆನಂದ 6 ಮತ ಪಡೆದು ಪರಾಭವಗೊಂಡರು.

ಹೆಚ್.ಎಸ್.ಶೋಭಾ 9 ಮತ ಪಡೆದು ಉಪಾಧ್ಯಕ್ಷೆಯಾಗಿ ಆಯ್ಕೆಯಾದರೆ ಪ್ರತಿಸ್ಪರ್ಧಿ ಶಿವಕುಮಾರಿ 5 ಮತ ಪಡೆದು ಪರಾಭವಗೊಂಡರು. ಚುನಾವಣಾಧಿಕಾರಿ ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಸೋಮಶೇಖರ್ ನೂತನ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆಯನ್ನು ಘೋಷಿಸಿದರು.

ನೂತನ ಅಧ್ಯಕ್ಷ ಎನ್.ನಂಜಯ್ಯ ಮಾತನಾಡಿ, ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅನುದಾನಗಳನ್ನು ಬಳಸಿಕೊಂಡು ಗ್ರಾಪಂ ವ್ಯಾಪ್ತಿಯಎಲ್ಲಾ ಗ್ರಾಮಗಳಿಗೂ ಮೂಲ ಸೌಕರ್ಯ ಒದಗಿಸುವ ಮೂಲಕ ಮಾದರಿ ಗ್ರಾಪಂ ಆಗಿ ರೂಪಿಸಲು ಶ್ರಮಿಸುತ್ತೇನೆ ಎಂದರು.

ಈ ವೇಳೆ ಗ್ರಾಪಂ ಸದಸ್ಯರಾದ ಗಿರೀಶ್, ಮನು, ಗಂಗಾಧರ್, ಪದ್ಮಪಾಣಿ, ಶೃತಿ, ಚಿನ್ನೂರಮ್ಮ, ಮುಖಂಡರಾದ ಸಿದ್ದರಾಜು, ಶಿವನಂಜು, ಪ್ರಸನ್ನ ಸೇರಿದಂತೆ ಹಲವರಿದ್ದರು.

ಪ್ರತ್ಯೇಕ ಪ್ರಕರಣ: ಇಬ್ಬರು ಬೈಕ್ ಸವಾರರ ಸಾವು

ನಂಜನಗೂಡು/ಬೈಲಕುಪ್ಪೆ, ಏ.17– ಪ್ರತ್ಯೇಕ ಪ್ರಕರಣಗಳಲ್ಲಿ ಇಬ್ಬರು ಬೈಕ್ ಸವಾರರು ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ನಂಜನಗೂಡು, ಬೈಲಕುಪ್ಪೆಯಲ್ಲಿ ನಡೆದಿದೆ.

ನಂಜನಗೂಡು: ರಸ್ತೆ ಬದಿ ನಿಂತಿದ್ದ ಲಾರಿಗೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಬುಧವಾರ ರಾತ್ರಿ ತಾಂಡ್ಯ ಕೈಗಾರಿಕಾ ಪ್ರದೇಶದ ಯುಬಿ ಕಾರ್ಖಾನೆ ಬಳಿ ನಡೆದಿದೆ.

ತಾಲೂಕಿನ ತೊರೆಮಾವು ಗ್ರಾಮದ ಪ್ರವೀಣ್ ಕುಮಾರ್ (36) ಮೃತಪಟ್ಟವರು. ಕಾಲ್ಸ್ ಬರ್ಗ್ ಕಾರ್ಖಾನೆಯಲ್ಲಿ ಅರೆಕಾಲೀಕ ಉದ್ಯೋಗಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ ಪ್ರವೀಣ್ ಕುಮಾರ್ ಬುಧವಾರ ರಾತ್ರಿ ಕೆಲಸ ಮುಗಿಸಿಕೊಂಡು ತನ್ನ ಸ್ಪ್ಲೆಂಡರ್ ಪ್ಲಸ್ ಬೈಕ್‌ನಲ್ಲಿ ಕಾರ್ಖಾನೆಯಿಂದ ಮನೆಗೆ ಹೋಗುತ್ತಿದ್ದರು. ಮಳೆ ಬರುತ್ತದೆ ಎಂದು ಬೈಕ್ ಅನ್ನು ವೇಗವಾಗಿ ಚಾಲನೆ ಮಾಡುತ್ತಿದ್ದ ವೇಳೆ ಲಾರಿ ಮುಷ್ಕರದಿಂದಾಗಿ ಸರಕು ತುಂಬಿಕೊಂಡು ಯುಬಿ ಕಾರ್ಖಾನೆ ಮುಂಭಾಗ ರಸ್ತೆ ಬದಿ ನಿಂತಿದ್ದ ಲಾರಿಗೆ ಡಿಕ್ಕಿ ಹೊಡೆದಿದ್ದಾನೆ. ಪರಿಣಾಮ ತೀವ್ರ ಗಾಯಗೊಂಡ ಪ್ರವೀಣ್ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ ಎಂದು ಸಂಚಾರಿ ಠಾಣೆ ಪೊಲೀಸರು ತಿಳಿಸಿದ್ದಾರೆ.

ಸ್ಥಳಕ್ಕೆ ಸಂಚಾರಿ ಠಾಣೆ ಎಸ್‌ಐ ಸಿದ್ದರಾಜು ಭೇಟಿ ನೀಡಿ ಪರಿಶೀಲಿಸಿ, ಶವವನ್ನು ಮರಣೋತ್ತರ ಪರೀಕ್ಷೆಗೆ ಒಳಪಡಿಸಿ ವಾರಸುದಾರರಿಗೆ ಹಸ್ತಾಂತರಿಸಿದರು. ಈ ಸಂಬಂಧ ಸಂಚಾರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಬೈಲಕುಪ್ಪೆ: ಬೈಕ್‌ಗೆ ಲಾರಿ ಡಿಕ್ಕಿ ಹೊಡೆದ ಪರಿಣಾಮ ಸವಾರ ಸ್ಥಳದಲ್ಲೇ ಸಾವನ್ನಪ್ಪಿ, ಹಿಂಬದಿ ಸವಾರ ಗಾಯಗೊಂಡಿರುವ ಘಟನೆ ಪಿರಿಯಾಪಟ್ಟಣ ತಾಲೂಕಿನ ಕೊಪ್ಪ ಗ್ರಾಮದಲ್ಲಿ ಗುರುವಾರ ನಡೆದಿದೆ.

ಮಡಿಕೇರಿ ತಾಲೂಕಿನ ಕಡಗನಹಳ್ಳಿ ಗ್ರಾಮದ ನಿವಾಸಿ ಸ್ಯಾಮಿಲ್ (22) ಸಾವನ್ನಪ್ಪಿದ್ದು, ಹಿಂಬದಿ ಸವಾರ ನವೀನ್(26) ತೀವ್ರ ಗಾಯಗೊಂಡವರು. ಸ್ಯಾಮಿಲ್ ತನ್ನ ಹೀರೋ ಹೋಂಡಾ ಬೈಕ್‌ನಲ್ಲಿ ತನ್ನ ಸ್ನೇಹಿತನೊಂದಿಗೆ ಕೊಪ್ಪ ಮಾರ್ಗವಾಗಿ ಕುಶಾಲನಗರಕ್ಕೆ ತೆರಳುತ್ತಿದ್ದರು. ಈ ವೇಳೆ ಕುಶಾಲನಗರದಿಂದ ಪಿರಿಯಾಪಟ್ಟಣ ಕಡೆಗೆ ಬರುತ್ತಿದ್ದ ಲಾರಿ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಸ್ಯಾಮಿಲ್ ಸ್ಥಳದಲ್ಲೇ ಸಾವನ್ನಪ್ಪಿದರೇ, ತೀವ್ರ ಗಾಯಗೊಂಡ ನವೀನ್‌ನನ್ನು ಕುಶಾಲನಗರ ಸಾರ್ವಜನಿಕ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಲಾಗಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಬೈಲುಕೊಪ್ಪ ಪೊಲೀಸರು ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಅಂಬೇಡ್ಕರ್ ಆದರ್ಶಗಳನ್ನು ಅಳವಡಿಸಿಕೊಳ್ಳಿ



ಸಾಲಿಗ್ರಾಮದಲ್ಲಿ ಅಂಬೇಡ್ಕರ್ ಜಯಂತಿ ನಡೆಯಿತು.

ಸಾಲಿಗ್ರಾಮ, ಏ.17– ಪ್ರತಿಯೊಬ್ಬರೂ ಡಾ.ಬಿ.ಆರ್.ಅಂಬೇಡ್ಕರ್ ಅವರ ಆದರ್ಶ ಗುಣಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ತಹಸೀಲ್ದಾರ್ ಎಸ್.ಎನ್.ನರಗುಂದ ಹೇಳಿದರು.

ಪಟ್ಟಣದ ತಾಲೂಕು ಕಚೇರಿಯಲ್ಲಿ ಆಯೋಜಿಸಿದ್ದ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿಯಲ್ಲಿ ಮಾತನಾಡಿದ ಅವರು, ಅಂಬೇಡ್ಕರ್ ಅವರು ನಾಡಿಗೆ ಹಾಗೂ ಸಮಾಜಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಹೀಗಾಗಿ ಅವರನ್ನು ವರ್ಷಕ್ಕೆ ಒಂದು ದಿನ ನೆನಪಿಸಿಕೊಳ್ಳದೇ, ನಿತ್ಯ ನೆನಪು ಮಾಡಿಕೊಳ್ಳಬೇಕು. ಅವರು ನಡೆದು ಬಂದ ಹಾದಿಯಲ್ಲಿ ಸರ್ವರೂ ಸಾಗುವ ಮೂಲಕ ಅವರಿಗೆ ಗೌರವ ಸಲ್ಲಿಸಬೇಕು ಎಂದರು.

ಬ್ಲಾಕ್ ಕಾಂಗ್ರೆಸ್ ಸಮಿತಿ ಎಸ್‌ಸಿ ಘಟಕದ ಅಧ್ಯಕ್ಷ ಕಂಠಿಕುಮಾರ್ ಮಾತನಾಡಿ, ಪಟ್ಟಣದಲ್ಲಿ ವಿವಿಧ ಕಾರ್ಯ ಚಟುವಟಿಕೆ ಹಮ್ಮಿಕೊಳ್ಳಲು ಅಂಬೇಡ್ಕರ್ ಸಮುದಾಯ ಭವನವಿಲ್ಲ. ಭವನ ನಿರ್ಮಾಣಕ್ಕೆ ನಿವೇಶನ ನೀಡುವಂತೆ ತಾಲೂಕು ಆಡಳಿತಕ್ಕೆ ಸಾಕಷ್ಟು ಬಾರಿ ಮನವಿ ಮಾಡಿದರೂ ಇದುವರೆಗೂ ಈಡೇರಿಲ್ಲ. ಈ ಬಗ್ಗೆ ಸೂಕ್ತ ಕ್ರಮ ವಹಿಸುವಂತೆ ಮನವಿ ಮಾಡಿದರು.

ಈ ವೇಳೆ ತಾಪಂ ಇಓ ರವಿ, ಗ್ರೇಡ್–2 ತಹಸೀಲ್ದಾರ್ ಸಣ್ಣರಾಮಪ್ಪ, ಶಿರಸ್ತೇದಾರ್‌ಗಳಾದ ಸತೀಶ್ ಕುಮಾರ್, ತಿಮ್ಮಯ್ಯ, ಗ್ರಾಪಂ ಉಪಾಧ್ಯಕ್ಷೆ ಶಶಿಕಲಾ, ಮಾಜಿ ಅಧ್ಯಕ್ಷ ಎಸ್.ಆರ್.ಪ್ರಕಾಶ್, ಸದಸ್ಯರಾದ ಎಸ್.ಡಿ.ಗಂಗಾಧರ್, ಲೋಕೇಶ್, ದಸಂಸ ಜಿಲ್ಲಾ ಸಂಚಾಲಕ ಚಂದ್ರು, ಮುಖಂಡರಾದ ಸಂತೋಷ, ಶಿವು, ಕಾಂತರಾಜು, ಸಣ್ಣಯ್ಯ, ಸುಧಾಕರ, ಎಸ್.ಬಿ.ಗುಣಚಂದ್ರ ಕುಮಾರ್, ಅರುಣ್, ಪ್ರೀತಮ್, ಅಧ್ಯಾಪಕ ರಾಜೇಶ್, ಉಪನ್ಯಾಸಕ ನಾಗರಾಜು, ಪೇದೆ ಕುಮಾರ್, ಕಾರ್ಮಿಕ ಇಲಾಖೆ ಧನುಷ್, ವಾರ್ಡನ್‌ಗಳಾದ ದೇವರಾಜು, ಭಾರತಿ, ತಾಲೂಕು ಕಚೇರಿ ಹಾಗೂ ನಾಡಕಚೇರಿ ಸಿಬ್ಬಂದಿಗಳಾದ ಕೃಷ್ಣಮೂರ್ತಿ, ಶಶಿಕಾಂತ್, ಮುನಿರೆಡ್ಡಿ, ಸಂದೇಶ, ಶಂಕರ, ಹಂಸ, ರಾಕೇಶ್, ದೇವೇಂದ್ರ, ಸುನೀಲ್, ಲೋಕೇಶ್, ಶಿವು, ಪ್ರಮೀಳಾ, ಆಶಾ, ರೇಖಾ ಸೇರಿದಂತೆ ಹಲವರಿದ್ದರು.

ಸ್ಥಾಯಿ ಸಮಿತಿ ಅಧ್ಯಕ್ಷರ ಕಚೇರಿ ಉದ್ಘಾಟನೆ


ಸ್ಥಾಯಿ ಸಮಿತಿ ಅಧ್ಯಕ್ಷರ ಕಚೇರಿಯನ್ನು ಅಧ್ಯಕ್ಷೆ ಬಿ.ವಸಂತ ಶ್ರೀಕಂಠ ಉದ್ಘಾಟಿಸಿದರು.

ತಿ.ನರಸೀಪುರ, ಏ.17– ಅಂಬೇಡ್ಕರ್ ಅವರ ಪ್ರಜಾಪ್ರಭುತ್ವದ ಆಶಯ ಮತ್ತು ರಾಜಕೀಯ ಧ್ಯೇಯೋದ್ದೇಶಗಳನ್ನು ಅರ್ಥೈಸಿಕೊಂಡು ಸ್ಥಳೀಯ ಜನಪ್ರತಿನಿಧಿಗಳಾಗಿ ಸಾರ್ವಜನಿಕ ಕೆಲಸವನ್ನು ಬದ್ಧತೆ ಯಿಂದ ಮಾಡುವುದು ನಮ್ಮೆಲ್ಲರ ಜವಾಬ್ದಾರಿ ಎಂದು ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಸಿ.ಪ್ರಕಾಶ್ ತಿಳಿಸಿದರು.


ಪಟ್ಟಣದ ಪುರಸಭೆ ಆವರಣದಲ್ಲಿ ನಡೆದ ಸ್ಥಾಯಿ ಸಮಿತಿ ಅಧ್ಯಕ್ಷರ ಕಚೇರಿ ಉದ್ಘಾಟನೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅಂಬೇಡ್ಕರ್ ಅವರ ರಾಜಕೀಯ ಮತ್ತು ಸಾಮಾಜಿಕ ಚಿಂತನೆಗಳನ್ನು ಸಾಕಾರಗೊಳಿಸಲು ಪ್ರತಿಯೊಬ್ಬ ಜನಪ್ರತಿನಿಧಿಯೂ ಕಾರ್ಯ ನಿರ್ವಹಿಸಬೇಕಿದೆ ಎಂದರು.

ಸಿಎಂ ಸಿದ್ದರಾಮಯ್ಯ ಸೇರಿದಂತೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಎಂಎಲ್‌ಸಿ ಡಾ.ಯತೀಂದ್ರ ಹಾಗೂ ಸಂಸದ ಸುನೀಲ್ ಬೋಸ್ ಮಾರ್ಗದರ್ಶನದಲ್ಲಿ ಪಟ್ಟಣದ ಅಭಿವೃದ್ಧಿಗೆ ಹಾಗೂ ನಾಗರಿಕರಿಗೆ ಮೂಲ ಸೌಕರ್ಯ ಕಲ್ಪಿಸಲು ಪುರಸಭೆ ಸದಸ್ಯರೆಲ್ಲರೂ ಸಿಕ್ಕಂತಹ ಅವಕಾಶದಲ್ಲಿ ಬದ್ಧತೆಯಿಂದ ಕಾರ್ಯ ನಿರ್ವಹಿಸುತ್ತಿದ್ದೇವೆ ಎಂದರು.

ಸದಸ್ಯ ಟಿ.ಎಂ.ನಂಜುಂಡಸ್ವಾಮಿ ಮಾತನಾಡಿ, ಸಮಸ್ತ ಭಾರತೀಯರು ಶಾಂತಿ ಮತ್ತು ಸೌಹಾರ್ದತೆಯಿಂದ ನೆಮ್ಮದಿ ಬದುಕನ್ನು ನಡೆಸಲೆಂದು ಪೂರಕವಾದ ಸಂವಿಧಾನವನ್ನು ಅಂಬೇಡ್ಕರ್ ರಚಿಸಿದ್ದಾರೆ. ಅಂತಹ ಮಹಾನ್ ನಾಯಕರನ್ನು ಯಾವುದೇ ಒಂದು ಸಮುದಾಯದ ಚೌಕಟ್ಟಿನೊಳಗೆ ನೋಡುವುದು ಸರಿಯಲ್ಲ. ಅಂಬೇಡ್ಕರ್ ಅವರು ಸಮಸ್ತ ಭಾರತೀಯರ ಕಣ್ಮಣಿ ಎಂದರು.

ಸ್ಥಾಯಿ ಸಮಿತಿ ಅಧ್ಯಕ್ಷರ ಕಚೇರಿಯನ್ನು ಅಧ್ಯಕ್ಷೆ ಬಿ.ವಸಂತ ಶ್ರೀಕಂಠ ಸದಸ್ಯರು ಹಾಗೂ ಮುಖ್ಯಾಧಿಕಾರಿಗಳೊಂದಿಗೆ ಉದ್ಘಾಟಿಸಿದರು. ಸದ್ಯಸರಾದ ಎನ್. ಸೋಮಣ್ಣ, ಎಸ್.ಕೆ.ಕಿರಣ್, ಬಾದಾಮಿ ಮಂಜು, ಸಿಸ್ಟಮ್ ಸಿದ್ದು, ರೂಪಶ್ರೀ ಪರಮೇಶ್, ಮುಖ್ಯಾಧಿಕಾರಿ ಬಿ.ಕೆ. ವಸಂತಕುಮಾರಿ, ತಾ.ಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ, ಸಮುದಾಯ ಸಂಘಟಕ ಮಹದೇವ, ಮುಖಂಡರಾದ ಪುಳ್ಳಾರಿ ಮಾದೇಶ, ಶ್ರೀಕಂಠ, ಹೇಮಂತ್ ಕುಮಾರ್ ಹಾಗೂ ಸಿಬ್ಬಂದಿ ಇದ್ದರು.

ನಂಜನಗೂಡು ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ


ನಂಜನಗೂಡಿನ ಶ್ರೀಕಂಠೇಶ್ವರ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಅಧ್ಯಕ್ಷರಾಗಿ ಹಗಿನವಾಳು ಹೆಚ್.ಕೆ.ಚೆನ್ನಪ್ಪ ಹಾಗೂ ಉಪಾಧ್ಯಕ್ಷರಾಗಿ ಕೆಂಪಿಸಿದ್ದನಹುಂಡಿ ಕೆಂಪಣ್ಣ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ನಾಳೆ ಬೃಹತ್ ಉದ್ಯೋಗ ಮೇಳ, ರಕ್ತದಾನ ಶಿಬಿರ


ಸುದ್ದಿಗೋಷ್ಠಿಯಲ್ಲಿ ವಕೀಲರಾದ ಪ್ರಶಾಂತ್ ಮೇತಲ್ ಮಾತನಾಡಿದರು.

ಹುಣಸೂರು, ಏ.17– ಉದ್ಯಮಿ ರಾಜು ಶಿವರಾಜೇಗೌಡರ 48ನೇ ಹುಟ್ಟುಹಬ್ಬವನ್ನು ಏ.19ರಂದು ಅವರ ಅಭಿಮಾನಿ ಸ್ನೇಹ ಬಳಗದಿಂದ ಸಾಮಾಜಿಕ ಸೇವಾ ಕಾರ್ಯಕ್ರಮಗಳ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ವಕೀಲರಾದ ಪ್ರಶಾಂತ್ ಮೇತಲ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿರುವ ಉದ್ಯಮಿ ರಾಜು ಶಿವರಾಜೇಗೌಡರು ಹುಣಸೂರು ತಾಲೂಕಿನವರಾ ಗಿದ್ದು, ಅವರ ಹುಟ್ಟುಹಬ್ಬದಂದು ನಗರದ ಕನಕ ಭವನದಲ್ಲಿ 30ಕ್ಕೂ ಹೆಚ್ಚು ಕಂಪನಿಗಳ ಸಹಯೋಗದೊಂದಿಗೆ ಬೃಹತ್ ಉದ್ಯೋಗ ಮೇಳ ಆಯೋಜಿಸಲಾಗಿದೆ. ನಿರುದ್ಯೋಗಿ ಯುವಕ, ಯುವತಿಯರು ಇದರ ಸದುಪಯೋಗಪಡಿಸಿಕೊಳ್ಳಬೇಕು. ಅಲ್ಲದೇ ಆಸರೆ ಆಸ್ಪತ್ರೆ ಸಹ ಯೋಗದಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ, ಆರೋಗ್ಯ ಶಿಬಿರ, ಮೈಸೂರಿನ ಜೀವಧಾರ ರಕ್ತನಿಧಿ ಕೇಂದ್ರದ ವತಿ ಯಿಂದ ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದಲ್ಲಿ ಭಾಗವಹಿಸುವ ಎಲ್ಲರಿಗೂ ದಾಸೋಹದ ವ್ಯವಸ್ಥೆ ಮಾಡಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಉದ್ಯಮಿಗಳಾದ ನಂಜುಂಡಸ್ವಾಮಿ, ಟಿ.ಕೃಷ್ಣ, ಮೋಹನ್ ಅಜ್ಗರ್ ಪಾಷ ಇದ್ದರು.

ಏ.20, ದೇವಸ್ಥಾನದ ನೂತನ ಶಿಖರ, ಕಳಸಾರೋಹಣ, ಸಂಪ್ರೋಕ್ಷಣೆ ಕಾರ್ಯಕ್ರಮ


ಸುದ್ದಿಗೋಷ್ಠಿಯಲ್ಲಿ ಎಸ್.ಬಿ.ಸುಗಂಧರಾಜು ಮಾತನಾಡಿದರು.

ತಿ.ನರಸೀಪುರ, ಏ.17– ತಾಲೂಕಿನ ಶಂಭುದೇವನಪುರದಲ್ಲಿ ಅಂದಾಜು 20 ಲಕ್ಷ ರೂ. ವೆಚ್ಚದಲ್ಲಿ ಜೀರ್ಣೋದ್ಧಾರಗೊಂಡಿರುವ ಶ್ರೀಶಂಭುಲಿಂಗೇಶ್ವರಸ್ವಾಮಿ ದೇವಸ್ಥಾನದ ನೂತನ ಶಿಖರ, ಕಳಸಾರೋಹಣ, ದೇವಾಲಯ ಸಂಪ್ರೋಕ್ಷಣೆ ಕಾರ್ಯಕ್ರಮ ಏ.20ರಂದು ನಡೆಯಲಿದೆ ಎಂದು ಸಾಂಸ್ಕೃತಿಕ ನಾಯಕ ಶ್ರೀಬಸವೇಶ್ವರ ಸೌಹಾರ್ದ ಸಹಕಾರ ಸಂಘದ ಅಧ್ಯಕ್ಷ ಎಸ್.ಬಿ.ಸುಗಂಧರಾಜು ತಿಳಿಸಿದರು.

ತಾಲೂಕಿನ ಶಂಭುದೇವನಪುರದ ದೇವಸ್ಥಾನದ ಆವರಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಕಾರ್ಯಕ್ರಮದ ಜೊತೆಗೆ ಧಾರ್ಮಿಕ ಸಭೆ ನಡೆಯಲಿದ್ದು, ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಕನಕಪುರ ದೇಗುಲ ಮಠದ ಮುಮ್ಮಡಿ ನಿರ್ವಾಣ ಸ್ವಾಮೀಜಿ ಹಾಗೂ ದೇವನೂರು ಗುರುಮಲ್ಲೇಶ್ವರ ಮಹಾ ಸಂಸ್ಥಾನ ಮಠದ ಶ್ರೀಮಹಾಂತ ಸ್ವಾಮೀಜಿಗಳ ಸಮ್ಮುಖದಲ್ಲಿ ನಡೆಯುವ ಧಾರ್ಮಿಕ ಸಭೆ ಅಧ್ಯಕ್ಷತೆಯನ್ನು ವಾಟಾಳು ಮಠದ ಶ್ರೀಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ವಹಿಸಲಿದ್ದಾರೆ ಎಂದರು.

ಮಲ್ಲನಮೂಲೆ ಗುರು ಕಂಬಳೀಶ್ವರ ಮಠದ ಶ್ರೀಚನ್ನಬಸವಸ್ವಾಮೀಜಿ, ಸಾಲೂರು ಬೃಹನ್ಮಠದ ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಚಾಮರಾಜನಗರ ಸಿದ್ದಮಲ್ಲೇಶ್ವರ ವಿರಕ್ತ ಮಠದ ಚನ್ನಬಸವಸ್ವಾಮೀಜಿ, ಮಾದ್ರಹಳ್ಳಿ ಪಟ್ಟದ ಮಠದ ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಎಂ.ಎಲ್.ಹುಂಡಿ ವಿರಕ್ತ ಮಠದ ಗೌರಿಶಂಕರ ಸ್ವಾಮೀಜಿ ಸೇರಿದಂತೆ ವಿವಿಧ ಮಠಾಧಿಪತಿಗಳು ಭಾಗವಹಿಸಲಿದ್ದಾರೆ. ಹೊಸೂರು ಹುಂಡಿ ದಾಸೋಹ ಮಠದ ಶ್ರೀರಾಜಶೇಖರ ಸ್ವಾಮೀಜಿ ನೇತೃತ್ವದಲ್ಲಿ ನಾಗೇಶ್ ಮತ್ತು ದಯಾನಂದ್ ಪೌರೋಹಿತ್ಯದಲ್ಲಿ ಪೂಜಾ ಕಾರ್ಯ ನಡೆಯಲಿದ್ದು, 5 ಸಾವಿರ ಮಂದಿಗೆ ಪ್ರಸಾದ ವ್ಯವಸ್ಥೆ ಮಾಡಲಾಗಿದೆ ಎಂದರು.

ನಿವೃತ್ತ ಮುಖ್ಯೋಪಾಧ್ಯಾಯ ಪುಟ್ಟಬುದ್ಧಿ ಮಾತನಾಡಿ, ಶಂಭುಲಿಂಗೇಶ್ವರಸ್ವಾಮಿ ಗ್ರಾಮ ದೇವತೆಯಾಗಿದ್ದು, ದೇವಸ್ಥಾನಕ್ಕೆ ಅನೇಕ ವರ್ಷಗಳ ಇತಿಹಾಸವಿದೆ. ಈ ಹಿಂದೆ ಹಿರಿಯ ಮುಖಂಡರಾದ ನಂಜುಂಡಪ್ಪ ಹಾಗೂ ಗೌಡ್ರ ಶಿವಪ್ಪನವರು ದೇವಸ್ಥಾನದ ಸಂಪ್ರೋಕ್ಷಣೆ ಮಾಡಿದ್ದರು. ಮತ್ತೆ ದೇವಸ್ಥಾನ ನವೀಕರಣ ಮಾಡಿ ಗೌಡ್ರ ಮಹದೇವಪ್ಪನವರ ಕಾಲದಲ್ಲಿ ನವಗ್ರಹ, ಗಣೇಶ, ಸುಬ್ರಹ್ಮಣ್ಯ ಗುಡಿ ನಿರ್ಮಾಣವಾಗಿತ್ತು. ಈಗ ಮತ್ತೆ ಮಹದೇವಸ್ವಾಮಿ ಗೌಡ್ರ ಸಮ್ಮುಖದಲ್ಲಿ ಗೋಪುರ ಕಳಸಾರೋಹಣ ಮಾಡಲಾಗುತ್ತಿದೆ. ಯಾರಿಂದಲೂ ದೇಣಿಗೆ ಪಡೆಯದೇ ಗ್ರಾಮಸ್ಥರೇ ನವೀಕರಣಕ್ಕೆ ಹಣ ನೀಡಿದ್ದು, ಏ.19ರಂದು ದೇವಸ್ಥಾನದಲ್ಲಿ ಪೂಜಾ ವಿಧಿ ವಿಧಾನಗಳು ನಡೆಯಲಿದ್ದು, ಅಂದು 2 ಸಾವಿರ ಮಂದಿಗೆ ಪ್ರಸಾದ ವ್ಯವಸ್ಥೆ ಮಾಡಲಾಗಿದೆ ಎಂದರು.

ಈ ವೇಳೆ ಗೌಡ್ರು ಮಹದೇವಸ್ವಾಮಿ, ಗೌಡ್ರು ದೊಡ್ಡೇಗೌಡ, ಎಂ.ಗಿರೀಶ್, ನಿವೃತ್ತ ಉಪ ತಹಸೀಲ್ದಾರ್ ವಿ. ಪ್ರಭುಸ್ವಾಮಿ, ಗಿರೀಶ್, ಬಸವರಾಜು, ಅಂಗಡಿ ಪುಟ್ಟಸ್ವಾಮಿ, ಪರಶಿವ, ಅಡುಗೆ ಕಂಟ್ರಾಕ್ಟರ್ ರಾಜೇಶ್, ಬಸವಲಿಂಗಪ್ಪ, ರಂಗಭೂಮಿ ನಿರ್ದೇಶಕ ಸಿ.ಬಸವಣ್ಣ,ಸಾಮಿಲ್ ಮಾಲೀಕ ಎಸ್. ಎಂ.ಜಯಶಂಕರ ಮೂರ್ತಿ, ಮಹದೇವಪ್ಪ,ಪಿ.ನಾಗರಾಜು ಹಾಗೂ ಗ್ರಾಮಸ್ಥರು ಹಾಜರಿದ್ದರು.

ಬೆಟ್ಟದಪುರದಲ್ಲಿ ಚಿರತೆ ಸೆರೆ



ಬೆಟ್ಟದಪುರ, ಏ.17– ಗ್ರಾಮದ ಹೊರವಲಯದಲ್ಲಿರುವ ಸೀತೆ ಮಂಟಿ ಬಳಿ ಅರಣ್ಯ ಇಲಾಖೆ ಇರಿಸಿದ್ದ ಬೋನಿಗೆ 6 ವರ್ಷದ ಗಂಡು ಚಿರತೆ ಬಿದ್ದಿದೆ.

ಗ್ರಾಮದ ಸುತ್ತಮುತ್ತಲ ಜಮೀನು ಹಾಗೂ ತೋಟಗಳಲ್ಲಿ ಕಾಣಿಸಿಕೊಳ್ಳುತ್ತಿದ್ದ ಚಿರತೆ ನಾಯಿ, ಆಡು, ಕುರಿ, ಕರುವಿನ ಮೇಲೆ ದಾಳಿ ನಡೆಸಿ ಬಲಿ ಪಡೆದು ಈ ಭಾಗದ ಜನರಲ್ಲಿ ಆತಂಕ ಹುಟ್ಟಿಸಿತ್ತು. ಈ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ಒಂದು ತಿಂಗಳ ಹಿಂದಿನಿಂದಲೂ ಚಿರತೆ ಚಲನವಲನ ಗಮನಿಸಿ ಬೋನ್ ಇರಿಸಿದ್ದರು. ಆದರೆ ಬುಧವಾರ ಚಿರತೆ ಬೋನಿನಲ್ಲಿ ಸೆರೆಯಾಗಿದೆ. ಅರಣ್ಯ ಇಲಾಖೆ ಅಧಿಕಾರಿ ಶರಣಪ್ಪ ಹಾಗೂ ಸಿಬ್ಬಂದಿ ಸ್ಥಳಕ್ಕಾಗಮಿಸಿ ಚಿರತೆ ರಕ್ಷಣೆ ಮಾಡಿದರು.

ಚಿರತೆ ನೋಡಲು ಆಗಮಿಸಿದ ಸುತ್ತಮುತ್ತಲ ಗ್ರಾಮಸ್ಥರು ಈ ಭಾಗದಲ್ಲಿ ಇನ್ನೂ 2 ರಿಂದ 3 ಚಿರತೆಗಳಿದ್ದು, ಅವುಗಳನ್ನು ಸೆರೆ ಹಿಡಿಯುವಂತೆ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಮನವಿ ಮಾಡಿದರು. ವೈದ್ಯಾಧಿಕಾರಿ ಮುಜೀಫ್ ಚಿರತೆ ಆರೋಗ್ಯ ತಪಾಸಣೆ ಮಾಡಿದ ಬಳಿಕ ನಾಗರಹೊಳೆ ಸಂರಕ್ಷಣಾ ಕೇಂದ್ರಕ್ಕೆ ಬಿಡಲಾಯಿತು ಎಂದು ಆರ್‌ಎಫ್‌ಓ ಪದ್ಮಶ್ರೀ ತಿಳಿಸಿದ್ದಾರೆ.

ಜಯಮ್ಮ ನಿಧನ



ಹುಣಸೂರು, ಏ.17– ತಾಲೂಕಿನ ಸೋಮನಹಳ್ಳಿ ಗ್ರಾಮದ ನಿವಾಸಿ ವೈರಮುಡಯ್ಯ ಅವರ ಪತ್ನಿ ಜಯಮ್ಮ(62) ಮಂಗಳವಾರ ರಾತ್ರಿ ನಿಧನರಾದರು. ಮೃತರು ಪತಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮೃತರ ಜಮೀನಿನಲ್ಲಿ ಬುಧವಾರ ಸಂಜೆ ನಡೆಯಿತು.

ಐಪಿಎಲ್ ಹಂಗಾಮ

ವಿಲ್ ಜಾಕ್ಸ್ ಆಲ್‌ರೌಂಡ್ ಆಟ: ಮುಂಬೈಗೆ ಜಯ



ಮುಂಬೈ, ಏ.17– ಐಪಿಎಲ್‌ನ ಬಲಾಢ್ಯ ಬ್ಯಾಟಿಂಗ್ ಪಡೆ ಎಂದೇ ಬಣ್ಣಿಸಲ್ಪಟ್ಟಿರುವ ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಬ್ಯಾಟಿಂಗ್ ಸ್ನೇಹಿ ವಾಂಖೇಡೆ ಕ್ರೀಡಾಂಗಣದಲ್ಲಿ ಕಟ್ಟಿ ಹಾಕಿದ ಮುಂಬೈ ಇಂಡಿಯನ್ಸ್ ಸತತ ಎರಡನೇ ಜಯ ದಾಖಲಿಸಿದೆ.

ಆ ಮೂಲಕ ಆಡಿರುವ 7 ಪಂದ್ಯಗಳಲ್ಲಿ 6 ಅಂಕ ಗಳಿಸಿ ಅಂಕಪಟ್ಟಿಯಲ್ಲಿ ಒಂದು ಸ್ಥಾನ ಮೇಲೇರಿದ ಮುಂಬೈ 7ನೇ ಸ್ಥಾನದಲ್ಲಿ ವಿರಾಜಮಾನವಾಗಿದೆ. ಮತ್ತೊಂದೆಡೆ ಹೈದರಾಬಾದ್ ಆಡಿರುವ 7 ಪಂದ್ಯಗಳಲ್ಲಿ 5 ಸೋಲು 2 ಜಯದೊಂದಿಗೆ 4 ಅಂಕಗಳೊಂದಿಗೆ 9ನೇ ಸ್ಥಾನದಲ್ಲೇ ಮುಂದುವರೆದಿದೆ.

ಇಲ್ಲಿನ ವಾಂಖೇಡೆ ಮೈದಾನದಲ್ಲಿ ಗುರುವಾರ ಸಂಜೆ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಎಸ್‌ಆರ್‌ಹೆಚ್ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 162 ರನ್ ಗಳಿಸಿತು. 163 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಮುಂಬೈ 6 ವಿಕೆಟ್ ನಷ್ಟಕ್ಕೆ 166 ರನ್ ಗಳಿಸುವ ಮೂಲಕ ಇನ್ನೂ 11 ಎಸೆತಗಳು ಬಾಕಿ ಉಳಿದಿರುವಂತೆ 4 ವಿಕೆಟ್ ಜಯ ದಾಖಲಿಸಿತು.

ಮುಂಬೈಗೆ ಪರ ರೋಹಿತ್ ಶರ್ಮಾ 16 ಎಸೆತಗಳಲ್ಲಿ 3 ಸಿಕ್ಸರ್ ಒಳಗೊಂಡ 26 ರನ್ ಗಳಿಸಿ ಬಹುಬೇಗ ನಿರ್ಗಮಿಸಿದರು. ಮತ್ತೊಂದೆಡೆ ಉತ್ತಮ ಲಯದಲ್ಲಿದ್ದ ರಯಾನ್ ರಿಕಲ್ಟನ್ 31 ರನ್ ಗಳಿಸಿ ಔಟಾದರು. ಬೌಲಿಂಗ್‌ನಲ್ಲಿ ಮಿಂಚಿದ್ದ ವಿಲ್ ಜಾಕ್ಸ್ ಬ್ಯಾಟಿಂಗ್‌ನಲ್ಲೂ ಮಿಂಚಿದರು. ಅವರು 2 ಸಿಕ್ಸರ್, 3 ಬೌಂಡರಿ ಒಳಗೊಂಡ 36 ರನ್ ಗಳಿಸಿದರೇ, ಸೂರ್ಯಕುಮಾರ್ ಯಾದವ್ 26, ತಿಲಕ್ ವರ್ಮಾ 21ರನ್, ಹಾರ್ದಿಕ್ ಪಾಂಡ್ಯ 9 ಎಸೆತಗಳಲ್ಲಿ 3 ಬೌಂಡರಿ, 1 ಸಿಕ್ಸರ್ ಒಳಗೊಂಡ 21 ರನ್ ಗಳಿಸಿ ತಂಡಕ್ಕೆ ಜಯ ತಂದುಕೊಟ್ಟರು. ಹೈದರಾಬಾದ್ ಪರ ನಾಯಕ ಕಮಿನ್ಸ್ 3, ಇಶಾನ್ ಮಾಲಿಂಗ 2, ಹರ್ಷಲ್ ಪಟೇಲ್ 1 ವಿಕೆಟ್ ಪಡೆದರು.

ಇದಕ್ಕೂ ಮೊದಲು ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಹೈದರಾಬಾದ್, ಮುಂಬೈ ಬೌಲರ್‌ಗಳ ವಿರುದ್ಧ ರನ್ ಗಳಿಸಲು ಒದ್ದಾಡಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಅಭಿಷೇಕ್ ಶರ್ಮಾ, ಟ್ರಾವಿಸ್ ಹೆಡ್ ಮೊದಲ ವಿಕೆಟ್‌ಗೆ 59 ರನ್ ಜೊತೆಯಾಟವಾಡಿ ಉತ್ತಮ ಆರಂಭ ಒದಗಿಸಿದರು. ಈ ವೇಳೆ ಅಭಿಷೇಕ್ ಶರ್ಮಾ 40 ರನ್ ಗಳಿಸಿ ನಿರ್ಗಮಿಸಿದರು. ಇವರ ಹಿಂದೆಯೇ 2 ರನ್ ಗಳಿಸಿ ಇಶಾನ್ ಕಿಶನ್ ಔಟಾದರು. ಟ್ರಾವಿಸ್ ಹೆಡ್ 29 ಎಸೆತಗಳಲ್ಲಿ 28 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಬಳಿಕ ಕ್ರೀಸ್‌ಗಿಳಿದ ಆಲ್‌ರೌಂಡರ್ ನಿತೀಶ್ ಕುಮಾರ್ ರೆಡ್ಡಿ 1 ಬೌಂಡರಿಯೊಂದಿಗೆ 19 ರನ್ ಸಿಡಿಸಿ ಔಟ್ ಆದರು. ಉಳಿದಂತೆ ಹ್ಯಾನ್ರಿಕ್ ಕ್ಲಾಸೇನ್ 37, ಅಂಕಿತ್ ವರ್ಮಾ 18, ಪ್ಯಾಟ್ ಕಮ್ಮಿನ್ಸ್ 8 ರನ್ ಗಳಿಸಿದರು. ವಿಲ್ ಜಾಕ್ಸ್ 2, ಹಾರ್ದಿಕ್ ಪಾಂಡ್ಯ, ಟ್ರೆಂಟ್ ಬೌಲ್ಟ್, ಜಸ್ಪ್ರಿತ್ ಬುಮ್ರಾ ತಲಾ ಒಂದೊಂದು ವಿಕೆಟ್ ಕಿತ್ತರು. ಆಲ್‌ರೌಂಡ್ ಆಟವಾಡಿದ ವಿಲ್ ಜಾಕ್ಸ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ತಂಡದ ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ಡೆಲ್ಲಿ	6	5	1	0	10
ಗುಜರಾತ್	6	4	2	0	8
ಬೆಂಗಳೂರು	6	4	2	0	8
ಪಂಜಾಬ್	6	4	2	0	8
ಲಕ್ನೋ	7	4	3	0	8
ಕೋಲ್ಕತ್ತಾ	7	3	4	0	6
ಮುಂಬೈ	7	3	4	0	6
ರಾಜಸ್ಥಾನ್	7	2	5	0	4
ಹೈದರಾಬಾದ್	7	2	5	0	4
ಚೆನ್ನೈ	7	2	5	0	4

ಇಂದಿನ ಪಂದ್ಯ

ರಾಯಲ್ ಚಾಲೆಂಜರ್ಸ್ ಬೆಂಗಳೂರು
V/S
ಪಂಜಾಬ್ ಕಿಂಗ್ಸ್
ಸಮಯ: ಸಂಜೆ 7.30
ಸ್ಥಳ : ಚಿನ್ನಸ್ವಾಮಿ ಕ್ರೀಡಾಂಗಣ, ಬೆಂಗಳೂರು

ಮೈಸೂರು ಚಿತ್ರಮಂದಿರಗಳಲ್ಲಿ

ಚಿತ್ರಮಂದಿರ / ಚಿತ್ರ	
ಪದ್ಮ ಚಿತ್ರಮಂದಿರ	(ದೂ: 2521923)
ಅರ್ಜುನ್ S/O ವೈಜಯಂತಿ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಗುಡ್ ಬ್ಯಾಡ್ ಅಗ್ಲಿ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಸಿಕಂದರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಒಡೆಲಾ–2 (ತೆ)	4 ಪ್ರದರ್ಶನಗಳು
ಗಾಯಿತ್ರಿ	
ವಿದ್ಯಾಪತಿ (ಕ)	4 ಪ್ರದರ್ಶನಗಳು
ರಾಜಕಮಲ್	
ಒಡೆಲಾ–2 (ತೆ)	4 ಪ್ರದರ್ಶನಗಳು
ಸಂಗಂ	
ವಾಮನ (ಕ)	4 ಪ್ರದರ್ಶನಗಳು
ಲಿಡೋ	
ಅಜ್ಞಾತವಾಸಿ (ಕ) ಜಾಟ್ (ಹಿಂ)	2+2 ಪ್ರದರ್ಶನಗಳು
ತಿಬ್ಬಾದೇವಿ	
ಭಗೀರಥ (ಕ)	4 ಪ್ರದರ್ಶನಗಳು
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

- ಸ್ಕ್ರೀನ್ 1 ಗುಡ್ ಬ್ಯಾಡ್ ಅಗ್ಲಿ (ತ): ಬೆ.10.30ಕ್ಕೆ, ಮ.1.25ಕ್ಕೆ, ಸಂ.4.20ಕ್ಕೆ, ರಾ.7.15ಕ್ಕೆ, ರಾ.10.15ಕ್ಕೆ.
- ಸ್ಕ್ರೀನ್ 2 ಅಲಪ್ಪುಳ ಜಿಮ್ಖಾನ (ಮ): ಬೆ.10.20ಕ್ಕೆ, ಜಾಕ್ (ತೆ): ಮ.1.20ಕ್ಕೆ, ಸಂ.4.15ಕ್ಕೆ, ಅಜ್ಞಾತವಾಸಿ (ಕ): ರಾ.7.15ಕ್ಕೆ, ಬಜೂಕ (ಮ): ರಾ.9.55ಕ್ಕೆ.
- ಸ್ಕ್ರೀನ್ 3 ದಿ ಅಮಚೂರ್ (ಇಂ): ಬೆ.10.40ಕ್ಕೆ, ರಾ.7.15ಕ್ಕೆ, ಅಲಪ್ಪುಳ ಜಿಮ್ಖಾನ (ಮ): ಮ.1.20ಕ್ಕೆ, ರಾ.10ಕ್ಕೆ, ಜಾಟ್ (ಹಿಂ): ಸಂ.4.10ಕ್ಕೆ.
- ಸ್ಕ್ರೀನ್ 4 ವಿದ್ಯಾಪತಿ (ಕ): ಬೆ.10.30ಕ್ಕೆ, ರಾ.7.05ಕ್ಕೆ, ವಾಮನ (ಕ): ಮ.1.20ಕ್ಕೆ, ಸಂ.4.15ಕ್ಕೆ, ಜಾಟ್ (ಹಿಂ): ರಾ.9.55ಕ್ಕೆ.

ಐನಾಕ್ಸ್ ಮೂವೀಸ್
ದೂ : 2533444 / 2433456

- ಸ್ಕ್ರೀನ್ 1 ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
- ಸ್ಕ್ರೀನ್ 2 ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
- ಸ್ಕ್ರೀನ್ 3 ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
- ಸ್ಕ್ರೀನ್ 4 ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

- ಸ್ಕ್ರೀನ್ 1 ವಿದ್ಯಾಪತಿ (ಕ): ಬೆ.10.45ಕ್ಕೆ, ಸಂ.4.15ಕ್ಕೆ, ಸಂ.6.45ಕ್ಕೆ, ಮನದ ಕಡಲು (ಕ): ಮ.1.15ಕ್ಕೆ, ರಾ.9.15ಕ್ಕೆ.
- ಸ್ಕ್ರೀನ್ 2 ಗುಡ್ ಬ್ಯಾಡ್ ಅಗ್ಲಿ (ತ): ಬೆ.10.30ಕ್ಕೆ, ಸಂ.4ಕ್ಕೆ, ವಾಮನ (ಕ): ಮ.1.15ಕ್ಕೆ, ಸಂ.6.50ಕ್ಕೆ, ರಾ.9.30ಕ್ಕೆ.
- ಸ್ಕ್ರೀನ್ 3 ವಾಮನ (ಕ): ಬೆ.10.40ಕ್ಕೆ, ಸಂ.4.05ಕ್ಕೆ, ಗುಡ್ ಬ್ಯಾಡ್ ಅಗ್ಲಿ (ತ): ಮ.1.20ಕ್ಕೆ, ಸಂ.6.45ಕ್ಕೆ, ರಾ.9.30ಕ್ಕೆ.
- ಸ್ಕ್ರೀನ್ 4 ಎಂಪುರನ್ 2 (ಕ): ಮ.12.30ಕ್ಕೆ, ಬಜೂಕ (ಮ): ಮ.3.50ಕ್ಕೆ, ಸಂ.6.40ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಬೆಲೆ ಏರಿಕೆಗೆ ಕೇಂದ್ರದ ನರೇಂದ್ರ ಮೋದಿ ಸರ್ಕಾರವೇ ಕಾರಣ

• ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪ • ಡಾ.ಮನಮೋಹನ್ ಸಿಂಗ್ ಕಾಲದ ವಸ್ತುಗಳ ದರಪಟ್ಟಿ ಹಿಡಿದು ಕೇಂದ್ರದ ವಿರುದ್ಧ ಹರಿಹಾಯ್ದ ಸಿಎಂ



ಬೆಂಗಳೂರು, ಏ.17(ಕೆಎಂಶಿ)–ರಾಷ್ಟ್ರದಲ್ಲಿ ಅಗತ್ಯ ಸಾಮಗ್ರಿಗಳ ಬೆಲೆ ಗಗನಕ್ಕೇರಿದೆ. ಇದಕ್ಕೆ ಕೇಂದ್ರದ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಸರ್ಕಾರವೇ ಕಾರಣ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಆರೋಪಿಸಿದ್ದಾರೆ.

ಡಾ.ಮನಮೋಹನ್ ಸಿಂಗ್ ಸರ್ಕಾರವಿದ್ದಾಗ ಬೆಳಿಕಾಳಿನಿಂದ ಚಿನ್ನ–ಬೆಳ್ಳಿವರೆಗೂ ಬಡವರು, ಸಾಮಾನ್ಯರು ಖರೀದಿ ಮಾಡಬಹುದಿತ್ತು. ಆದರೆ, ನರೇಂದ್ರ ಮೋದಿ ಪ್ರಧಾನಿ ಆದ ನಂತರ ಎಲ್ಲಾ ವಸ್ತುಗಳ ಬೆಲೆ ಗಗನಕ್ಕೆ ಮುಟ್ಟಿದೆ.

ಬಿಜೆಪಿ ಸರ್ಕಾರದ ಬೆಲೆ ಏರಿಕೆ ಪರ್ವ ಖಂಡಿಸಿ ಫ್ರೀಡಂಪಾರ್ಕ್‌ನಲ್ಲಿ ನಡೆದ ಪ್ರತಿಭಟನಾ ಸಮಾವೇಶದಲ್ಲಿ ಮಾತನಾಡಿದ ಅವರು, ಕೇಂದ್ರದ ಬೆಲೆ ಏರಿಕೆ ವಿರುದ್ಧ ಜನಾಂದೋಲನ ನಡೆಸುವಂತೆ ಕಾರ್ಯಕರ್ತರಿಗೆ ಕರೆ ನೀಡಿದರು.

ಹೋಬಳಿಯಿಂದ ಜಿಲ್ಲಾ ಕೇಂದ್ರದವರೆಗೂ ಪ್ರತಿಭಟನೆ ನಡೆಸಿ, ಕೇಂದ್ರದ ಬೆಲೆ ಏರಿಕೆಯನ್ನು ಸಾರ್ವಜನಿಕರ ಗಮನಕ್ಕೆ ತರಬೇಕು. ಇದರ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ನಡೆಯಬೇಕು.

ರಾಜಕೀಯ ಎಂದರೆ, ಬರೀ ಅಧಿಕಾರ ಅಲ್ಲ, ಸೈದ್ಧಾಂತಿಕ ಸ್ಪಷ್ಟತೆಯಿಂದ ಜನರ ಪರವಾಗಿ ನಿಂತು ನಿರಂತರ ಹೋರಾಟ ನಡೆಸುವ ಬದ್ಧತೆಯಾಗಿದೆ.

ಸುಳ್ಳೇ ಬಿಜೆಪಿ ಮನೆ ದೇವರು, ಆರ್‌ಎಸ್‌ಎಸ್ ಸುಳ್ಳಿನ ಮಹಾ ಕಾರ್ಖಾನೆ, ತಮ್ಮ ನೇತೃತ್ವದ ಕೇಂದ್ರ ಸರ್ಕಾರ ಎಲ್ಲಾ ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡಿ ಬಡವರು ಮತ್ತು ಮಧ್ಯಮ ವರ್ಗದವರ ಸುಲಿಗೆ ಮಾಡುತ್ತಿದೆ.

ಇದನ್ನು ಪ್ರಶ್ನಿಸಿದರೆ, ಇಲ್ಲವೇ ಅವರ ಭ್ರಷ್ಟಾಚಾರವನ್ನು ಬಯಲು ಮಾಡಿದರೆ, ಅಂತಹ ರಾಜಕೀಯ ಪಕ್ಷಗಳ ಮುಖಂಡರುಗಳ ವಿರುದ್ಧ ಕೇಂದ್ರದ ತನಿಖಾ ದಳಗಳನ್ನು ಮುಂದಿಟ್ಟು ಹೋರಾಟ ದಮನ ಮಾಡುವ ಕಾರ್ಯ ನಡೆಯುತ್ತಿದೆ.

ನಮ್ಮ ಸರ್ಕಾರ ಆರ್ಥಿಕವಾಗಿ ದಿವಾಳಿ ಆಗಿದೆ ಎಂಬುದಾಗಿ ಅಪಪ್ರಚಾರ ಮಾಡುತ್ತಾ, ಮೋದಿ ಸರ್ಕಾರ ಬಡವರು, ಮಧ್ಯಮ ವರ್ಗ ವಿರೋಧಿತನವನ್ನು ಬಚ್ಚಿಡಲು ಯತ್ನಿಸುತ್ತಿದೆ.

ಸರ್ಕಾರ ದಿವಾಳಿ ಆಗಿದ್ದರೆ, ಗ್ಯಾರಂಟಿಗಳಿಗೆ 56,000 ಕೋಟಿ ರೂ. ಪ್ರತಿ ವರ್ಷ ತೆಗೆದಿಡಲು ಸಾಧ್ಯವಾಗುತ್ತಿತ್ತಾ ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

ಹಾಲಿನ ಬೆಲೆ 4 ರೂ. ಹೆಚ್ಚಿಸಿರುವುದು ರೈತರ ಜೇಬಿಗೆ ಹೋಗುತ್ತಿದೆ, ಸರ್ಕಾರಕ್ಕೆ ಬರುತ್ತಿಲ್ಲ. ನೀವು ಗ್ಯಾಸ್ ಬೆಲೆ ಹತ್ತಾರು ಬಾರಿ ಹೆಚ್ಚಿಸಿ, ಈಗ ಮತ್ತೆ 50 ರೂ. ಹೆಚ್ಚಿಸಿದ್ದೀರಿ. ಈ ಹಣ ಯಾರಿಗೆ ಹೋಗುತ್ತದೆ ಹೇಳಿ ಎಂದು ಪ್ರಶ್ನಿಸಿದರು.

ತಮ್ಮ ಭಾಷಣದುದ್ದಕ್ಕೂ ಡಾ.ಮನಮೋಹನ್ ಸಿಂಗ್ ಆಡಳಿತದಲ್ಲಿದ್ದ ದರಪಟ್ಟಿ ಹಾಗೂ ಈಗಿನ ಬೆಲೆ ಪಟ್ಟಿಯನ್ನು ಹೋಲಿಸಿದರು. ಚಿನ್ನ–ಬೆಳ್ಳಿ ಬೆಲೆ ಗಗನಕ್ಕೇರಿರುವುದನ್ನೇ ಹತ್ತಾರು ಬಾರಿ ಪ್ರಸ್ತಾಪಿಸಿದ ಮುಖ್ಯಮಂತ್ರಿ ಅವರು, ಡಾ.ಮನಮೋಹನ್ ಸಿಂಗ್ ಆಡಳಿತದಲ್ಲಿ ಚಿನ್ನದ ಬೆಲೆ 10 ಗ್ರಾಂಗೆ 28,000 ರೂ. ಇತ್ತು, ಈಗ ಇದು 85,000 ರೂ. ಮುಟ್ಟಿದೆ, ಬೆಳ್ಳಿ ಬೆಲೆ ಕೆಜಿಗೆ 63,000 ರೂ. ಇದ್ದದ್ದು, 96,000 ರೂ. ತಲುಪಿದೆ.

ಸಿಮೆಂಟ್ 265 ರೂ.ನಿಂದ 415 ರೂ., ಟನ್ ಕಬ್ಬಿಣ 19,000 ರೂ.ನಿಂದ 73,000 ರೂ. ಆಗಿದೆ, ಸಕ್ಕರೆ ಕೆ.ಜಿ.ಗೆ 30ರಿಂದ 60 ರೂ., ರಾಗಿ 20 ರಿಂದ 65 ರೂ., ಅಕ್ಕಿ ಬೆಲೆ 30ರಿಂದ 66 ರೂ.ಗೆ ಹೆಚ್ಚಳವಾಗಿದೆ ಎಂದು ದರಪಟ್ಟಿ ನೀಡಿದರು.

ಮೋದಿ ಸರ್ಕಾರದ ವಿರುದ್ಧ ಕರ್ನಾಟಕದಿಂದಲೇ ಜನಾಂದೋಲನ ನಡೆಯಬೇಕು, ಬರೀ ಅಪಪ್ರಚಾರಗಳಿಂದ ಅನ್ಯ ಪಕ್ಷಗಳ ಸರ್ಕಾರಗಳನ್ನು ಪತನಗೊಳಿಸಲು ರಾಜಕಾರಣ ಮಾಡಿಕೊಂಡು ಜನರನ್ನು ವಂಚಿಸುತ್ತಿದ್ದಾರೆ ಎಂದು ದೂರಿದರು.

ಅರಣ್ಯ ರಕ್ಷಕ ಹುದ್ದೆಗೆ ನೇಮಕಾತಿ; ಅರ್ಹ ಅಭ್ಯರ್ಥಿಗಳಿಗೆ ವೈದ್ಯಕೀಯ ಪರೀಕ್ಷೆ



ಮೈಸೂರು, ಏ.17(ಎಸ್‌ಬಿಡಿ)– ಅರಣ್ಯ ರಕ್ಷಕ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯಲ್ಲಿ ಅರ್ಹ ಅಭ್ಯರ್ಥಿಗಳಿಗೆ ವೈದ್ಯಕೀಯ ಪರೀಕ್ಷೆ ನಡೆಸಲಾಗುತ್ತಿದೆ.

ನಗರದ ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ನಿನ್ನೆ ಹಾಗೂ ಇಂದು ನಡೆಸಲಾದ ದೈಹಿಕ ತಾಳ್ವಿಕೆ ಹಾಗೂ ಕಾರ್ಯ ಸಮರ್ಥನೆ ಪರೀಕ್ಷೆಯಲ್ಲಿ 226 ಪುರುಷರು ಹಾಗೂ 79 ಮಹಿಳಾ ಅಭ್ಯರ್ಥಿಗಳು ವೈದ್ಯಕೀಯ ಪರೀಕ್ಷೆ ಹಂತಕ್ಕೆ ಆಯ್ಕೆಯಾಗಿದ್ದು, ಇವರಿಗೆ ಕೆಆರ್‌ಎಸ್ ರಸ್ತೆಯಲ್ಲಿರುವ ಜಿಲ್ಲಾಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆ ನಡೆಸಲಾಗುತ್ತಿದೆ.

ಗಸ್ತು ಅರಣ್ಯ ಪಾಲಕರ ನೇರ ನೇಮಕಾತಿ 2023–24ರಲ್ಲಿ ಮೈಸೂರು ವೃತ್ತಕ್ಕೆ ಹಂಚಿಕೆಯಾಗಿರುವ 47 ಹುದ್ದೆಗಳಿಗೆ 11,726 ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರು. ದ್ವಿತೀಯ ಪಿಯುಸಿ/ತತ್ಸಮಾನ ಪರೀಕ್ಷೆ ಅಂಕಗಳ ಆಧಾರದಲ್ಲಿ 1:20 ಅನುಪಾತದಂತೆ 778 ಅಭ್ಯರ್ಥಿಗಳು ಅರ್ಹತೆ ಪಡೆದಿದ್ದರು. ಇವರಲ್ಲಿ 290 ಪುರುಷರು ಹಾಗೂ 97 ಮಹಿಳೆಯರು ಸೇರಿ ಒಟ್ಟು 387 ಅಭ್ಯರ್ಥಿಗಳು ದೈಹಿಕ ತಾಳ್ವಿಕೆ ಹಾಗೂ ಕಾರ್ಯ ಸಮರ್ಥನೆ ಪರೀಕ್ಷೆಗೆ ಹಾಜರಾಗಿದ್ದರು.

ಮೈಸೂರು, ಮಂಡ್ಯ, ಕೊಡಗು, ಚಾಮರಾಜನಗರ ಜಿಲ್ಲೆಗಳಲ್ಲಿ ಇಂದಿನಿಂದ ಏ.22ರವರೆಗೆ ತುಂತುರು ಮಳೆ ಸಾಧ್ಯತೆ

ಮೈಸೂರು,ಏ.17(ಪಿಎಂ)– ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆಯಂತೆ ಮೈಸೂರು, ಮಂಡ್ಯ, ಕೊಡಗು ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ಏ.18ರಿಂದ 22ರವರೆಗೆ ಮೋಡ ಕವಿದ ವಾತಾವರಣ ಇದ್ದು, ತುಂತುರು ಮಳೆ ಬರುವ ಸಂಭವವಿದೆ.

ಮೈಸೂರು ಜಿಲ್ಲೆಯಲ್ಲಿ ಗರಿಷ್ಠ ಉಷ್ಣಾಂಶ 35 ಡಿಗ್ರಿ ಸೆಲ್ಸಿಯಸ್ ಮತ್ತು ಕನಿಷ್ಠ ಉಷ್ಣಾಂಶ 20 ಡಿಗ್ರಿ ಸೆಲ್ಸಿಯಸ್‌ವರೆಗೆ ದಾಖಲಾಗುವ ಸಾಧ್ಯತೆಯಿದೆ. ಬೆಳಗಿನ ಗಾಳಿಯ ತೇವಾಂಶ ಶೇ.77ರಿಂದ 82ರವರೆಗೆ ಮತ್ತು ಮಧ್ಯಾಹ್ನದ ತೇವಾಂಶ ಶೇ.61ರಿಂದ 65ರವರೆಗೆ ದಾಖಲಾಗುವ ಮತ್ತು ಗಾಳಿಯು ಗಂಟೆಗೆ 8ರಿಂದ 12 ಕಿಲೋಮೀಟರ್ ವೇಗದಲ್ಲಿ ಬೀಸುವ ಸಾಧ್ಯತೆಯಿದೆ.

ಅದೇ ರೀತಿ ಮಂಡ್ಯ ಜಿಲ್ಲೆಯಲ್ಲಿ ಗರಿಷ್ಠ ಉಷ್ಣಾಂಶ 33ರಿಂದ 34 ಡಿಗ್ರಿ ಸೆಲ್ಸಿಯಸ್ ಮತ್ತು ಕನಿಷ್ಠ ಉಷ್ಣಾಂಶ 20ರಿಂದ 21 ಡಿಗ್ರಿ ಸೆಲ್ಸಿಯಸ್‌ವರೆಗೆ ದಾಖಲಾಗುವ ಸಾಧ್ಯತೆಯಿದೆ. ಬೆಳಗಿನ ಗಾಳಿಯ ತೇವಾಂಶ ಶೇ.80ರಿಂದ 86ರವರೆಗೆ ಮತ್ತು ಮಧ್ಯಾಹ್ನದ ತೇವಾಂಶ ಶೇ.52ರಿಂದ 57ರವರೆಗೆ ದಾಖಲಾಗುವ ಮತ್ತು ಗಾಳಿಯು ಗಂಟೆಗೆ 7ರಿಂದ 12 ಕಿಲೋಮೀಟರ್ ವೇಗದಲ್ಲಿ ಬೀಸುವ ಸಂಭವವಿದೆ.

ಅಂತೆಯೇ ಕೊಡಗು ಜಿಲ್ಲೆಯಲ್ಲಿ ಗರಿಷ್ಠ ಉಷ್ಣಾಂಶ 29ರಿಂದ 30 ಡಿಗ್ರಿ ಸೆಲ್ಸಿಯಸ್ ಮತ್ತು ಕನಿಷ್ಠ ಉಷ್ಣಾಂಶ 19ರಿಂದ 20 ಡಿಗ್ರಿ ಸೆಲ್ಸಿಯಸ್‌ವರೆಗೆ ದಾಖಲಾಗುವ ಸಾಧ್ಯತೆಯಿದೆ. ಬೆಳಗಿನ ಗಾಳಿಯ ತೇವಾಂಶ ಶೇ.91ರಿಂದ 94ರವರೆಗೆ ಮತ್ತು ಮಧ್ಯಾಹ್ನದ ತೇವಾಂಶ ಶೇ.61ರಿಂದ 64ರವರೆಗೆ ದಾಖಲಾಗುವ ಮತ್ತು ಗಾಳಿಯು ಗಂಟೆಗೆ 6ರಿಂದ 10 ಕಿಲೋಮೀಟರ್ ವೇಗದಲ್ಲಿ ಬೀಸುವ ಸಾಧ್ಯತೆಯಿದೆ.

ಚಾಮರಾಜನಗರ ಜಿಲ್ಲೆಯಲ್ಲಿ ಗರಿಷ್ಠ ಉಷ್ಣಾಂಶ ಗರಿಷ್ಠ ಉಷ್ಣಾಂಶ 34 ಡಿಗ್ರಿ ಸೆಲ್ಸಿಯಸ್ ಮತ್ತು ಕನಿಷ್ಠ ಉಷ್ಣಾಂಶ 21ರಿಂದ 22 ಡಿಗ್ರಿ ಸೆಲ್ಸಿಯಸ್‌ವರೆಗೆ ದಾಖಲಾಗುವ ಸಾಧ್ಯತೆಯಿದೆ. ಬೆಳಗಿನ ಗಾಳಿಯ ತೇವಾಂಶ ಶೇ.77ರಿಂದ 85ರವರೆಗೆ ಮತ್ತು ಮಧ್ಯಾಹ್ನದ ತೇವಾಂತ ಶೇ.31ರಿಂದ 41ರವರೆಗೆ ದಾಖಲಾಗುವ ಮತ್ತು ಗಾಳಿಯು ಗಂಟೆಗೆ 8ರಿಂದ 12 ಕಿಲೋಮೀಟರ್ ವೇಗದಲ್ಲಿ ಬೀಸುವ ಸಂಭವವಿದೆ ಎಂದು ನಾಗನಹಳ್ಳಿ ಕೃಷಿ ಹವಾಮಾನ ಕ್ಷೇತ್ರ ವಿಭಾಗದ ಪ್ರಕಟಣೆ ತಿಳಿಸಿದೆ.

ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಲು ಕಠಿಣ ತಯಾರಿ ಮುಖ್ಯ

ದಕ್ಷಿಣ ವಲಯ ಡಿಐಜಿಪಿ ಡಾ.ಬೋರಲಿಂಗಯ್ಯ ಸಲಹೆ



ಮೈಸೂರಿನ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಬುಧವಾರ ಆರಂಭಗೊಂಡ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಶಿಬಿರವನ್ನು ದಕ್ಷಿಣ ವಲಯ ಡಿಐಜಿಪಿ ಡಾ. ಎಂ.ಬಿ.ಬೋರಲಿಂಗಯ್ಯ ಉದ್ಘಾಟಿಸಿದರು.

ಮೈಸೂರು, ಏ.17(ಬಿಎಲ್‌ಯು)– ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಲು ಕಠಿಣ ತಯಾರಿ ಮುಖ್ಯ ಎಂದು ದಕ್ಷಿಣ ವಲಯ ಡಿಐಜಿಪಿ ಡಾ.ಎಂ.ಬಿ. ಬೋರಲಿಂಗಯ್ಯ, ಉದ್ಯೋಗ ಗಿಟ್ಟಿಸುವ ಸ್ಪರ್ಧಾಕಾಂಕ್ಷಿಗಳಿಗೆ ಸಲಹೆ ನೀಡಿದರು.

ಮೈಸೂರಿನ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಇಂದು 50 ದಿನಗಳ ಐಎಎಸ್ ಹಾಗೂ ಕೆಎಎಸ್ ಪರೀಕ್ಷಾ ತರಬೇತಿ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಉದ್ಯೋಗ ಗಿಟ್ಟಿಸಲು ಈಗ ಸಾವಿರದಿಂದ ಲಕ್ಷದ ತನಕ ಅಭ್ಯರ್ಥಿಗಳು ಅರ್ಜಿ ಸಲ್ಲಿಸುತ್ತಾರೆ. ಆದರೆ ಇದರಲ್ಲಿ ನೀವು ಆಯ್ಕೆ ಆಗಬೇಕಾದರೆ ಕಠಿಣ ಪರಿಶ್ರಮ ಪಡಬೇಕು ಎಂದು ಕಿವಿಮಾತು ಹೇಳಿದರು.

ಓದಿನ ಜೊತೆಗೆ ಆರೋಗ್ಯ ಕೂಡ ಬಹಳ ಮುಖ್ಯವಾಗಿರುತ್ತದೆ. ಜೊತೆಗೆ ನಿದ್ರೆ ಮುಖ್ಯವಾಗಿರುತ್ತದೆ. ಆದ ಕಾರಣ ನಿದ್ರೆಗೆಟ್ಟು ಓದುವುದು ಬೇಡ. ಸಮಯ ಪಾಲನೆ ಜೊತೆಗೆ ಸಮಯ ವ್ಯರ್ಥ ಮಾಡದೆ ತಯಾರಿ ನಡೆಸಿದರೆ ಉದ್ಯೋಗ ಗಿಟ್ಟಿಸಲು ಸಾಧ್ಯವಾಗುತ್ತದೆ ಎಂದು ಡಾ. ಬೋರಲಿಂಗಯ್ಯ ಅಭಿಪ್ರಾಯಪಟ್ಟರು.

ಇದೇ ವೇಳೆ ಮಾತನಾಡಿದ ಮೈಸೂರು ನಗರಪಾಲಿಕೆಯ ಉಪ ಆಯುಕ್ತ ಜಿ.ಎಸ್. ಸೋಮಶೇಖರ್ ಅವರು, ಪರೀಕ್ಷೆ ಎದುರಿಸಲು ದೃಢ ಮನಸು ಬೇಕು. ಸಮಯ ಪಾಲನೆ ಮಾಡುವ ಮೂಲಕ ನೆನಪಿನ ಶಕ್ತಿ ಹೊಂದಬೇಕು ಎಂದು ಹೇಳಿದರು.

ಪರೀಕ್ಷೆ ಬರೆದ ಮೊದಲ ಬಾರಿಯೇ ಆಯ್ಕೆ ಆಗುತ್ತೇವೆ ಎಂಬ ಅತಿಯಾದ ನಿರೀಕ್ಷೆ ಬೇಡ. ಮೊದಲ ಬಾರಿ ಅನುತ್ತೀರ್ಣರಾದರೆ ಮತ್ತೆ ಪ್ರಯತ್ನ ಮಾಡಿ ಯಶಸ್ಸು ಗಳಿಸಬೇಕು ಎಂದು ಹೇಳಿದರು.

ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ ಮಾತನಾಡಿ, ವಿದ್ಯಾರ್ಥಿಗಳು ಸತತ ಪ್ರಯತ್ನ ಪಟ್ಟು ಓದಬೇಕು. ನಿಮ್ಮ ನಿರಂತರ ಪ್ರಯತ್ನದಿಂದ ಯಶಸ್ಸು ಗಳಿಸಬಹುದು ಎಂದು ಹೇಳಿದರು.

ಚಾಮರಾಜ ಕ್ಷೇತ್ರ ವ್ಯಾಪ್ತಿ ಇ–ಖಾತಾ ಅಭಿಯಾನಕ್ಕೆ ಶಾಸಕ ಕೆ.ಹರೀಶ್ ಗೌಡ ಚಾಲನೆ

ಮಧ್ಯವರ್ತಿಗಳ ನೆಚ್ಚಿಕೊಳ್ಳದೆ ನೇರವಾಗಿ ಅಧಿಕಾರಿಗಳ ಸಂಪರ್ಕಿಸಲು ಶಾಸಕರ ಸಲಹೆ



ಚಾಮರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಇ–ಖಾತಾ ಅಭಿಯಾನಕ್ಕೆ ಶಾಸಕ ಕೆ.ಹರೀಶ್ ಗೌಡ ಗುರುವಾರ ಚಾಲನೆ ನೀಡಿದರು. ನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಮತ್ತಿತರರಿದ್ದರು.

ಮೈಸೂರು, ಏ.17(ಎಂಕೆ)– ಚಾಮರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಇ–ಖಾತಾ ಅಭಿಯಾನಕ್ಕೆ ಶಾಸಕ ಕೆ.ಹರೀಶ್ ಗೌಡ ಗುರುವಾರ ಚಾಲನೆ ನೀಡಿದರು.

ಮೈಸೂರಿನ ಒಂಟಿಕೊಪ್ಪಲಿನ ಶ್ರೀ ರಾಮ ಮಂದಿರದ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಲಯ ಕಚೇರಿ–3(ವಾರ್ಡ್ ನಂ–42), 4, 5 ಮತ್ತು 6ರ ವ್ಯಾಪ್ತಿಯ ಫಲಾನುಭವಿಗಳಿಗೆ ಇ–ಖಾತಾ ಪ್ರತಿ ವಿತರಣೆ ಮಾಡುವ ಮೂಲಕ ಅಭಿಯಾನಕ್ಕೆ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಆಸ್ತಿ ವ್ಯಾಜ್ಯಗಳ ಸಂಘರ್ಷಗಳು ಹೆಚ್ಚಾಗುತ್ತಿದ್ದು, ಆಸ್ತಿ ರಕ್ಷಣೆಗಾಗಿ ರಾಜ್ಯ ಸರ್ಕಾರ ಇ–ಖಾತಾ ಅಭಿಯಾನ ಆರಂಭಿಸಿದೆ. ಈ ನಿಟ್ಟಿನಲ್ಲಿ ಚಾಮರಾಜ ಕ್ಷೇತ್ರದಲ್ಲಿ 57,292 ಆಸ್ತಿಗಳಿದ್ದು, ಈಗಾಗಲೇ 11,578 ಆಸ್ತಿಗಳಿಗೆ ಇ–ಖಾತಾ ವಿತರಣೆ ಮಾಡಲಾಗಿದೆ. ಇನ್ನೂ ಬಾಕಿ ಇರುವ ಆಸ್ತಿಗಳಿಗೆ ತ್ವರಿತವಾಗಿ ಇ–ಖಾತಾ ನೀಡಲಾಗುವುದು. ಆದರೆ,. ಇ–ಖಾತಾ ಕೊಡಲು ಯಾವುದೇ ತೊಂದರೆ ಆಗುತ್ತಿಲ್ಲ. ಅಧಿಕಾರಿಗಳು–ಸಿಬ್ಬಂದಿ ಉತ್ತಮವಾಗಿ ಕೆಲಸ ಮಾಡುತ್ತಿದ್ದಾರೆ. ಆದರೆ, ಅರ್ಜಿ ಸಲ್ಲಿಸುವವರ ಸಂಖ್ಯೆ ಕಡಿಮೆಯಾಗಿದ್ದು, ವ್ಯಾಪಕ ಜಾಗೃತಿ ಅಗತ್ಯವಾಗಿದೆ. ಅಲ್ಲದೆ ಇ–ಖಾತಾ ಪಡೆದವರು ತಮ್ಮ ತಮ್ಮ ಅಕ್ಕ–ಪಕ್ಕದ ಮನೆಯವರಿಗೂ ತಿಳಿಸುವಂತೆ ಕೋರಿದರು.

ಇ–ಖಾತಾ ಮಾಡಿಸಲು ಪಾಲಿಕೆಗೆ ಹೋದರೆ ಲಂಚ ಕೇಳುತ್ತಾರೆ ಎಂದು ಕೆಲವರು ನನಗೆ ಹೇಳಿದ್ದರು. ಈ ಸಂಬಂಧ ನಾನು ಗಮನಿಸಿದಾಗ ಮಧ್ಯವರ್ತಿಗಳ ಮೂಲಕ ಯಾರು ಖಾತೆ ಮಾಡಿಸಿಕೊಳ್ಳಲು ಮುಂದಾಗುತ್ತಾರೋ ಅವರು ಹಣ ಕಳೆದುಕೊಳ್ಳುತ್ತಿದ್ದಾರೆ. ಆದ್ದರಿಂದ, ನೇರವಾಗಿ ಹೋಗಿ ದಾಖಲೆ ಸಹಿತ ಅರ್ಜಿ ಸಲ್ಲಿಸಿದರೆ ಏಳು ದಿನಕ್ಕೆ ಇ–ಖಾತಾ ನೀಡಲಾಗುತ್ತದೆ. ಅನಧಿಕೃತ ಆಸ್ತಿಗಳಿಗೂ ಅಧಿಕೃತವಾಗಿ ಇ–ಖಾತಾ ಮಾಡಿಸಿಕೊಡುವ ಸುತ್ತೋಲೆ ಸರ್ಕಾರದಿಂದಲೇ ಪ್ರಕಟವಾಗಲಿದೆ. ಇನ್ನೂ ಸಾಕಷ್ಟು ಜನ ಆಸ್ತಿವಂತರು ಇ–ಖಾತೆ ಪಡೆಯಲು ಅರ್ಜಿ ಸಲ್ಲಿಸಿಲ್ಲ. ಕೂಡಲೇ ಸಾರ್ವಜನಿಕರು ಅರ್ಜಿ ಸಲ್ಲಿಸಿ, ನಿಮ್ಮ ಆಸ್ತಿ ಸುರಕ್ಷತೆಯೇ ಸರಕಾರದ ಆದ್ಯತೆಯಾಗಿದೆ ಎಂದರು.

ಮೈಸೂರು ನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ಇ–ಖಾತಾ ಮಾಡಿಸಲು ಅಗತ್ಯವಿರುವ ದಾಖಲೆಗಳ ಕುರಿತು ಮಾಹಿತಿ ನೀಡಿದರು. ನಗರ ಪಾಲಿಕೆ ಉಪ ಆಯುಕ್ತ(ಕಂದಾಯ) ಸೋಮಶೇಖರ್, ನಿವೃತ್ತ ಐಎಎಸ್ ಅಧಿಕಾರಿ ಗೋಪಿನಾಥ್, ವಲಯ ಕಚೇರಿ–6 ಆಯುಕ್ತೆ ಪ್ರತಿಭಾ, ನಗರಪಾಲಿಕೆ ಮಾಜಿ ಸದಸ್ಯರಾದ ಭಾಗ್ಯ, ನಾಗಭೂಷಣ್, ಇಂದಿರಾ ಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು, ಮುಖಂಡ ಡೆಲ್ಲಿ ರವಿ, ಆಶ್ರಯ ಸಮಿತಿ ಸದಸ್ಯರಾದ ಎ.ಎ.ಮೊಹಮ್ಮದ್ ಇಬ್ರಾಹಿಂ, ಮಂಜುನಾಥ್, ಅನಂತನಾರಾಯಣ್, ಒಂಟಿಕೊಪ್ಪಲು ಗುರುರಾಜ್ ಮತ್ತಿತರರಿದ್ದರು.

ಮೇ 1ರಿಂದ ಜಿಪಿಎಸ್ ಆಧಾರಿತ ಟೋಲ್ ಸಂಗ್ರಹ ವ್ಯವಸ್ಥೆ ಜಾರಿ

ನವದೆಹಲಿ, ಏ.17– ಮೇ 1 ರಿಂದ ದೇಶದ ರಾಷ್ಟ್ರೀಯ ಹೆದ್ದಾರಿಗಳಲ್ಲಿ ರಸ್ತೆ ಪ್ರಯಾಣವು ಹೆಚ್ಚು ಸುಗಮವಾಗಲಿದೆ. ಫಾಸ್ಟ್ ಟ್ಯಾಗ್‌ಗಳ ಬದಲು ಹೊಸ ಜಿಪಿಎಸ್ ಆಧಾರಿತ ಟೋಲ್ ಸಂಗ್ರಹ ವ್ಯವಸ್ಥೆಯನ್ನು ಪರಿಚಯಿಸಲಾಗುತ್ತಿದೆ.

ಜಾಗತಿಕ ಸಂಚರಣೆ ಉಪಗ್ರಹ ವ್ಯವಸ್ಥೆ ಏ.1 ರಿಂದ ಜಾರಿಗೆ ಬರುವ ನಿರೀಕ್ಷೆಯಿತ್ತು, ವಿಳಂಬವಾಗಿ ಈಗ ಮೇ 1ರಿಂದ ಜಾರಿಗೆ ಬರುವ ಸಾಧ್ಯತೆಯಿದೆ. ಈ ಬಗ್ಗೆ ಮಾತನಾಡಿರುವ ಕೇಂದ್ರ ರಸ್ತೆ ಮತ್ತು ಸಾರಿಗೆ ಸಚಿವ ನಿತಿನ್ ಗಡ್ಕರಿ, ಮುಂದಿನ 15 ದಿನಗಳಲ್ಲಿ ನಾವು ಹೊಸ ಟೋಲ್ ನೀತಿಯನ್ನು ತರುತ್ತಿದ್ದೇವೆ. ಟೋಲ್ ಪ್ಲಾಜಾಗಳಿಗಾಗಿ ನಿಲ್ಲಬೇಕಾಗಿಲ್ಲದ ಕಾರಣ ನಾವು ಸ್ಯಾಟಲೈಟ್ ಟೋಲ್ ವ್ಯವಸ್ಥೆಯನ್ನು ಪ್ರಾರಂಭಿಸುತ್ತಿದ್ದೇವೆ ಎಂದರು.

ಗ್ಲೋಬಲ್ ನ್ಯಾವಿಗೇಷನ್ ಸ್ಯಾಟಿಲೈಟ್ ಸಿಸ್ಟಮ್ ಒಂದು ಉಪಗ್ರಹ ಆಧಾರಿತ ಟೋಲ್ ಸಂಗ್ರಹ ವ್ಯವಸ್ಥೆಯಾಗಿದ್ದು, ಇದರಲ್ಲಿ ಒಬ್ಬ ವ್ಯಕ್ತಿಯು ಪ್ರಯಾಣಿಸಿದ ದೂರವನ್ನು ಆಧರಿಸಿ ಅವರ ಬ್ಯಾಂಕ್ ಖಾತೆಗಳಿಂದ ನೇರವಾಗಿ ಹಣವನ್ನು ಕಡಿತಗೊಳಿಸಲಾಗುತ್ತದೆ. ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರ ಪ್ರಕಾರ ಹೊಸ ವ್ಯವಸ್ಥೆಯು ಸಮಯ ಮತ್ತು ವೆಚ್ಚ–ಪರಿಣಾಮಕಾರಿ ಮತ್ತು ವೇಗವಾಗಿರುತ್ತದೆ.

ಫಾಸ್ಟ್ ಟ್ಯಾಗ್ ವ್ಯವಸ್ಥೆಯು ಸಾಂಪ್ರದಾಯಿಕ ನಗದು ಸಂಗ್ರಹ ವಿಧಾನಕ್ಕಿಂತ ವೇಗವಾಗಿದ್ದರೂ, ವಾಹನಗಳು ಟೋಲ್ ಬೂತ್‌ನಲ್ಲಿ ಹಲವೊಮ್ಮೆ ಕಾದು ನಿಲ್ಲಬೇಕಾಗುತ್ತದೆ. ಹಲವು ಬಾರಿ ವಿಶೇಷವಾಗಿ ಪೀಕ್ ಅವರ್‌ಗಳಲ್ಲಿ ಇದು ದೀರ್ಘ ಸರತಿ ಸಾಲುಗಳಿಗೆ ಕಾರಣವಾಗುತ್ತದೆ.

ಆದಾಗ್ಯೂ ಜಿಎನ್‌ಎಸ್‌ಎಸ್ ವ್ಯವಸ್ಥೆಯು ವಾಹನಗಳ ಸ್ಥಳಗಳನ್ನು ಪತ್ತೆ ಹಚ್ಚಲು ಉಪಗ್ರಹಗಳೊಂದಿಗೆ ಸಂವಹನ ನಡೆಸುವ ವರ್ಚುವಲ್ ಟೋಲ್ ಬೂತ್‌ಗಳೊಂದಿಗೆ ಕಾರ್ಯನಿರ್ವಹಿಸುತ್ತದೆ. ಟ್ರ್ಯಾಕ್ ಮಾಡಲಾದ ಸ್ಥಳದ ಪ್ರಕಾರ, ವಾಹನವು ಪ್ರಯಾಣಿಸಿದ ದೂರವನ್ನು ವಿಶ್ಲೇಷಣೆ ಮಾಡಿ ಟೋಲ್ ಅನ್ನು ಲೆಕ್ಕಹಾಕಲಾಗುತ್ತದೆ.

ಹೊಸ ವ್ಯವಸ್ಥೆಯು ಭೌತಿಕ ಟೋಲ್ ಬೂತ್‌ಗಳನ್ನು ಸ್ಥಾಪಿಸುವ ಅಗತ್ಯವನ್ನು ನಿವಾರಿಸುವುದಲ್ಲದೆ, ಬಳಕೆದಾರರಿಗೆ ಹೊಂದಿಕೊಳ್ಳುವ ಪಾವತಿ ಆಯ್ಕೆಗಳನ್ನು ಒದಗಿಸುತ್ತದೆ.

ಗೆಜೆಟೆಡ್ ಪ್ರೊಬೇಷನರಿ 384 ಹುದ್ದೆ; ಮುಖ್ಯ ಪರೀಕ್ಷೆ ವೇಳಾಪಟ್ಟಿ ಪ್ರಕಟ

ಬೆಂಗಳೂರು, ಏ.17– 2023–24ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ಗ್ರೂಪ್ 'ಎ' ಮತ್ತು ಗ್ರೂಪ್ 'ಬಿ' ವೃಂದದ 384 ಹುದ್ದೆಗಳಿಗೆ ನೇಮಕಾತಿಗೆ ಮೇ 3, 5, 7 ಮತ್ತು 9ರಂದು ಮುಖ್ಯ ಪರೀಕ್ಷೆ ನಡೆಸಲು ಕೆಪಿಎಸ್‌ಸಿ ನಿರ್ಧರಿಸಿದ್ದು, ಪರೀಕ್ಷಾ ವೇಳಾಪಟ್ಟಿಯನ್ನು ಗುರುವಾರ ಪ್ರಕಟಿಸಿದೆ. ಅರ್ಹತಾ ಪರೀಕ್ಷೆ ಕನ್ನಡ ಮೇ 3ರಂದು ಬೆಳಿಗ್ಗೆ 10ರಿಂದ 12 ಗಂಟೆಯವರೆಗೆ, ಇಂಗ್ಲಿಷ್ ಪರೀಕ್ಷೆ ಅದೇ ದಿನ ಮಧ್ಯಾಹ್ನ 2 ಗಂಟೆಯಿಂದ 4 ಗಂಟೆಯವರೆಗೆ ನಡೆಯಲಿದೆ ಪತ್ರಿಕೆ– 1 (ಪ್ರಬಂಧ) ಮೇ 5ರಂದು ಬೆಳಿಗ್ಗೆ 10ರಿಂದ 1, ಪತ್ರಿಕೆ 2 (ಸಾಮಾನ್ಯ ಅಧ್ಯಯನ– 1) ಮೇ 7ರಂದು ಬೆಳಿಗ್ಗೆ 9ರಿಂದ 12, ಪತ್ರಿಕೆ 3 (ಸಾಮಾನ್ಯ ಅಧ್ಯಯನ–2) ಮೇ 7ರಂದು ಮಧ್ಯಾಹ್ನ 2ರಿಂದ 5, ಪತ್ರಿಕೆ 4 (ಸಾಮಾನ್ಯ ಅಧ್ಯಯನ– 3) ಮೇ 9ರಂದು ಬೆಳಿಗ್ಗೆ 9ರಿಂದ 12, ಪತ್ರಿಕೆ 5 (ಸಾಮಾನ್ಯ ಅಧ್ಯಯನ– 4) ಮೇ 9ರಂದು ಮಧ್ಯಾಹ್ನ 2 ಗಂಟೆಯಿಂದ 5 ಗಂಟೆಯವರೆಗೆ ನಡೆಯಲಿದೆ, ವೇಳಾ ಪಟ್ಟಿಯನ್ನು ಆಯೋಗದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ ಎಂದು ಕೆಪಿಎಸ್‌ಸಿ ಕಾರ್ಯದರ್ಶಿ ರಮಣದೀಪ್ ಚೌಧರಿ ತಿಳಿಸಿದ್ದಾರೆ.

ಮೈಸೂರು ಮಿತ್ರ 46

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

ನಗರಸಭಾ ಕಾರ್ಯಾಲಯ, ಹೂಟಗಳ್ಳಿ

ಎಸ್.ಆರ್.ಎಸ್. ಎದುರು, ಹೈಟೆನ್ಷನ್ ಜೋಡಿ ರಸ್ತೆ, ಹೂಟಗಳ್ಳಿ, ಮೈಸೂರು ಜಿಲ್ಲೆ –570018
ಸಹಾಯವಾಣಿ ಸಂಖ್ಯೆ: 0821–2001737
ka.hootagalli.cmc@gmail.com

ಸಂ: ನಸಹೂ/ಸಿಬ್ಬಂದಿ/ಸರಕು ಸಾಮಾಗ್ರಿ/ಸಿಆರ್–01/2025–26 ದಿ: 16.04.2025

ಟೆಂಡರ್ ಪ್ರಕಟಣೆ

ಕೆಟಿಪಿಪಿ 2000ರ ನಿಯಮದನ್ವಯ ಹೂಟಗಳ್ಳಿ ನಗರಸಭಾ ಕಾರ್ಯಾಲಯದ ದೈನಂದಿನ ಕೆಲಸ ಕಾರ್ಯಕ್ಕೆ ಅವಶ್ಯಕವಿರುವ ಸ್ಟೇಷನರಿ ಸಾಮಾಗ್ರಿಗಳನ್ನು ಸರಬರಾಜು ಮಾಡಲು ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್‌ನಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ನೋಂದಾಯಿತ ಸಂಸ್ಥೆ/ಸರಬರಾಜುದಾರರು ದಿ:05.05.2025ರ ಸಂಜೆ 3.30 ಘಂಟೆಯೊಳಗೆ ಈ ಕಛೇರಿಗೆ ಅರ್ಜಿ ಸಲ್ಲಿಸಿ ನಿಗಧಿತ ಶುಲ್ಕ ಪಾವತಿಸಿ ಟೆಂಡರ್ ನಮೂನೆಯನ್ನು ಪಡೆದು ಭರ್ತಿ ಮಾಡಿದ ಟೆಂಡರ್ ಫಾರಂನೊಂದಿಗೆ ಸಂಬಂಧಿಸಿದ ದಾಖಲಾತಿಗಳನ್ನು ಮೊಹರು ಮಾಡಿದ ಲಕೋಟೆಯಲ್ಲಿ ಅದೇ ದಿನ ಸಂಜೆ 4.30ರ ಒಳಗಾಗಿ ಸಲ್ಲಿಸತಕ್ಕದ್ದು. ಅದೇ ದಿನ ಸಂಜೆ 5.00ಕ್ಕೆ ಟೆಂಡರ್ ಫಾರಂಗಳನ್ನು ಟೆಂಡರ್‌ದಾರರ ಸಮಕ್ಷಮ ತೆರೆಯಲಾಗುವುದು. ಅವಧಿ ಮೀರಿ ಬಂದ ಟೆಂಡರಗಳನ್ನು ಸ್ವೀಕರಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿ ಹಾಗೂ ಷರತ್ತುಗಳಿಗೆ ಕಛೇರಿಯಲ್ಲಿ ಸಂಪರ್ಕಿಸಬಹುದು. ಅಂಗೀಕರಿಸುವ ಅಥವ ತಿರಸ್ಕರಿಸುವ ಅಧಿಕಾರ ನಗರಸಭೆ ಆಡಳಿತಕ್ಕೆ ಸೇರಿರುತ್ತದೆ. ಅಂದಾಜು ಮೊತ್ತ ರೂ.4,60,000/–, ಇಎಂಡಿ: ರೂ.11,500/–. ಟೆಂಡರ್ ಫಾರಂ ಶುಲ್ಕ: ರೂ.500+18% ಜಿಎಸ್‌ಟಿ

ಸಹಿ/– ಪೌರಾಯುಕ್ತರು, ನಗರಸಭೆ, ಹೂಟಗಳ್ಳಿ

DIPR-DD-MYS/68/KSMCA-69/2025-26

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಾಮರಾಜನಗರ

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ
ಸಂಖ್ಯೆ : 02/2025–26 ದಿನಾಂಕ: 15–04–2025

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು ಲೆಕ್ಕ ಶೀರ್ಷಿಕೆ: ಶಿಕ್ಷಣ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮತ್ತು ನರೇಗಾ ಒಗ್ಗೂಡಿಸುವಿಕೆ ಯೋಜನೆಯಡಿ ಕರೆದಿರುವ ಕಾಮಗಾರಿಗಳನ್ನು **KW-1 & KW-2 (Stanard Tender Document)** ಪ್ರಕಾರ **KPPP** ಮುಖಾಂತರ ಕರ್ನಾಟಕ ಸಂಗ್ರಹಣೆಯಲ್ಲಿ ಪಾರದರ್ಶಕ ನಿಯಮಗಳು **KTPP Act 1999 and KTPP Rule 2000** ರಲ್ಲಿ ಸಿವಿಲ್ ಗುತ್ತಿಗೆದಾರರುಗಳಿಂದ ಏಕ ಲಕೋಟೆ ಪದ್ಧತಿಯಲ್ಲಿ ಕರೆಯಲಾಗಿದೆ. ಅಂದಾಜು ಮೊತ್ತ ರೂ. 266.00 ಲಕ್ಷಗಳ ಒಟ್ಟು 13 ಟೆಂಡರ್ ಅಹ್ವಾನಿಸಲಾಗಿದೆ. ಆನ್‌ಲೈನ್ ಟೆಂಡರ್ ಅಪ್‌ಲೋಡ್ ಮಾಡುವ ದಿನಾಂಕ: 17–04–2025 ಕೊನೆಯ ದಿನಾಂಕ: 16–05–2025 ಸಂಜೆ 17.00 ಗಂಟೆಯ ವರೆಗೆ. ಹಾಗೂ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 19–05–2025 ಇನ್ನುಳಿದ ಹೆಚ್ಚಿನ ಮಾಹಿತಿಗಳನ್ನು **KPPP website www.kppp.karnataka. gov.in** ಪಡೆಯಬಹುದಾಗಿರುತ್ತದೆ. ಹಾಗೂ ಕಚೇರಿ ದೂರವಾಣಿ ಸಂಖ್ಯೆ: 08226–223019ಕ್ಕೆ ಸಂಪರ್ಕಿಸುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ
ಚಾಮರಾಜನಗರ

ಸಂ:ವಾಸಾಸಂಇ:ಚಾನಗರ:24:2025–26

PUBLIC NOTICE

My client intends to enter into MOU/JDA in order to build multistoried apartment on the below mentioned "Schedule property" of Smt. Gowri Urs, Smt. Apsara Mehta, Archana urs, wife and children of Late A.S. Veeraraje Urs, M.C. Nanjunda Raje Urs, M.C. Mohan Urs, Late M.C. Manohar, MC Shyamsundar, M.C. Ahalya Devi and Kaivalya Devi childrens of Late Subbammanni, Manjunatha Cheluva Urs, Chandra Prabha Urs, Anupama Urs, heirs of Late. Mohan Urs, Sulochana, Gayathri Devi, Shiva Sharan Cheluva Urs, HS Maheshwari, Chethana, Leena, Prahlad, Childrens of Late. Shyam Sundar, M.C. Kaivalya Urs, M.C. Anhalya Devi, and Madan Gopal Raje Urs, S/o Late Amruthammanni, and H.L. Srinivas, S/o Late Nagarathnammanni, Originally the Schedule Property and it's annexure properties was purachased by Late A.V. Subramanya Raje Urs. A.V. Subramanya Raje Urs died intestate leaving behind his 3 daughters i.e., Subbammanni, Amruthammanni, Nagarathnammanni and an adopted son A.S. Veera Raje Urs. Upon his death the above mentioned persons have acquired the title to the Schedule Property. The Childrens of Late A.S. Veeraraje Urs, and Subbammanni, Amurthammanni and Nagarathnammanni have affected partition of the property under a suit in O S number 1057/2013 before the senior civil judge court at Mysore and all of them have got compromised the matter and got allotted their respective shares by virtue of an FDP proceedings.

Hence this notice if any person/s, or the family members other than the above mentioned persons or their heirs, anybody claiming any sort of right, title, interest, charges or claims or any suit, petition is pending on the above mentioned land or Schedule property of any kind whatsoever nature over the "Schedule Property" please do notify the same to the under signed within Seven days from the date of this public notice, attaching all the relevant documents substantiating such right and claims. If, no such objections are received within Seven days, my client will proceed to enter into JDA/MOU to construct the multi storied apartment on the Schedule property. After the expiry of the said Seven days notice period, my client shall be at liberty not to entertain any complaint or claims.

SCHEDULE PROPERTY

Vacant Site No. 968, CH-11, 968/A, CH-11/A, JLB Road, Lakshmipuram, Mysore total site measuring 34609.1761 sq feet bounded on East by Property number 968/2,3,5,4 West by JLB Road, North by I Cross Lakshmipuram Road and house numbers 968/10,11,1, South by Door number 698/A-1 and 968/5.

Sd/- SUBRAMANYA .J, Advocate,
No. 890/4, I Floor, I Main,
Lakshmipuram, Mysore -570 004
Ph No: 9844154581
Email: advocate.subramanya@gmail.com

Date: 17-4-2025

MYSORE RACE CLUB LIMITED

P B No. 11, Race Course Road, Mysore - 570 010
Tel. No. 2521675, Email : secretary@mysoreraceclub.com

TENDER NOTIFICATION

Sealed tenders are invited to run the following stalls at the Mysore Race Club Ltd, premises on inter venue betting and on-course race days for the period **1st May 2025 to 30th April 2026 :**

- Vegetarian Canteen
- Non - Vegetarian Canteen
- Cool Drinks Stall
- Ice Cream Stall
- Fruits Stall
- Fresh Fruit Juice Stall
- Coffee / Tea Stall
- Bakery

The tender forms can be obtained from the Office of the Mysore Race Club Ltd., during office hours on any working day on cash / DD / Online payment of Rs. 5,000/-* (non refundable) for Veg., and Non Veg., stalls and Rs. 500/-* (Non refundable) for other stalls. The sealed tenders shall be submitted to the Secretary & CEO Mysore Race Club Ltd., Race Course Road, Mysore-570 010, within 7 days from the date of publication of this advertisement.

The Mysore Race Club Ltd., reserves the right to accept or reject any or all tender(s) without assigning any reason.

* : GST applicable extra,

By order, Sd/- Secretary & CEO,
Mysore Race Club Ltd.

Date : 17.04.2025